ಸಂಪುಟ: 05 ಸಂಚಿಕೆ: 159 ಪುಟಗಳು: 08 ಶುಕ್ರವಾರ 22 ಆಗಸ್ಟ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಸತ್ಯಕ್ಕಾಗಿ ಯಾವುದನ್ನು ಬೇಕಾದರೂ ತ್ಯಾಗಮಾಡಿ, ಆದರೆ ಯಾವುದಕ್ಕೂ ಸತ್ಯವನ್ನು ತ್ಯಾಗಮಾಡಬೇಡಿ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಜನಸಂದಣಿ ನಿಯಂತ್ರಣ ಮಸೂದೆ ಸದನ ಸಮಿತಿಗೆ ಒಪ್ಪಿಸಿದ ಸ್ಪೀಕರ್ ಯು.ಟಿ.ಖಾದರ್



ಜನಸಂದಣಿ ನಿಯಂತ್ರಿಸಲು ಚಿಂತನೆ

# ವಿಧೇಯಕ ಮಸೂದೆ ಮಂಡನೆ

• ಉದಯವಾಹಿನಿ, ಬೆಂಗಳೂರು

ಆರ್‌ಸಿಬಿ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಪ್ರಕರಣದಿಂದ ಎಚ್ಚೆತ್ತ ರಾಜ್ಯ ಸರ್ಕಾರ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಜನಸಂದಣಿ ನಿರ್ವಹಿಸಲು '2025ನೇ ಸಾಲಿನ ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮಗಳು ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿರ್ವಹಣೆ) ವಿಧೇಯಕ'ವನ್ನು ವಿಧಾನಸಭೆಯಲ್ಲಿ ಮಂಡಿಸಿತು. ಆದರೆ, ವಿಧೇಯಕ ಗೊಂದಲಗಳಿಂದ ಕೂಡಿದ್ದು ಸ್ಪಷ್ಟನೆ ಬೇಕಿದೆ ಎಂಬ ಪ್ರತಿಪಕ್ಷಗಳ ವಿರೋಧದ ಹಿನ್ನೆಲೆಯಲ್ಲಿ ಪರಿಶೀಲನೆಗಾಗಿ ಸದನ ಸಮಿತಿಗೆ ಒಪ್ಪಿಸಲು ವಿಧಾನಸಭೆ ಸಮ್ಮತಿಸಿತು.

ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸದನದಲ್ಲಿ ಜನಸಂದಣಿ ನಿಯಂತ್ರಣ ವಿಧೇಯಕವನ್ನು ಮಂಡಿಸಿ, ರಾಜಕೀಯ ಸಭೆ ಸೇರಿದಂತೆ ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಅವಘಡಗಳಾದರೆ ಅದಕ್ಕೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸುವ ಅಂಶಗಳನ್ನು ಪ್ರಸ್ತಾಪಿಸಿದರು. ಆಗ ಪ್ರತಿಪಕ್ಷಗಳ ಬಹುತೇಕ ಸದಸ್ಯರು, ಈ ವಿಧೇಯಕ ಜನವಿರೋಧಿ, ಹೋರಾಟ ಹತ್ತಿಕ್ಕುವ ಸಲುವಾಗಿಯೇ ಇದನ್ನು ಸರ್ಕಾರ ತರಲು ಹೊರಟಿದೆ. ವಿಧೇಯಕದ ಬಗ್ಗೆ ಹಲವು ಸ್ಪಷ್ಟನೆಗಳು ಬೇಕಿವೆ. ತಕ್ಷಣಕ್ಕೆ ವಿಧೇಯಕ ಜಾರಿ ಮಾಡುವುದು ಬೇಡ, ಸದನ ಸಮಿತಿಗೆವಹಿಸಿ, ಮುಂದಿನ ಅಧಿವೇಶನದಲ್ಲಿ ವಿಧೇಯಕದ ಬಗ್ಗೆ ಚರ್ಚೆ ನಡೆಸಿ ತೀರ್ಮಾನ ಮಾಡೋಣ ಎಂದು ಪಟ್ಟುಹಿಡಿದರು.

ಪ್ರತಿಪಕ್ಷಗಳ ಆಗ್ರಹ, ಒತ್ತಡಕ್ಕೆ ಮಣಿದ ಗೃಹ ಸಚಿವರು, ಈ ವಿಧೇಯಕ ಜಾರಿ ಅವಶ್ಯವಿದೆ.

ಆದರೆ, ಪ್ರತಿಪಕ್ಷಗಳು ಸದನ ಸಮಿತಿಗೆ ಒಪ್ಪಿಸುವಂತೆ ಒತ್ತಾಯಿಸುತ್ತಿವೆ. ಹಾಗೆಯೇ ಆಗಲಿ, ಸದನ ಸಮಿತಿ ಮಾಡೋಣ ಎಂದು ಹೇಳಿದಾಗ ಪ್ರತಿಪಕ್ಷ ಸದಸ್ಯರು ಹರ್ಷ ವ್ಯಕ್ತಪಡಿಸಿದರು. ಈ ವಿಧೇಯಕ ಈಗಿನಿಂದಲೇ ಜಾರಿ ಮಾಡಬೇಕು ಎನ್ನುವ ಸರ್ಕಾರದ ಆಶಯಕ್ಕೆ ಸ್ವಲ್ಪ ಹಿನ್ನಡೆಯಾಗಿದ್ದು, ಸದನ ಸಮಿತಿ ಪರಿಶೀಲನೆ ನಂತರ ಮುಂದಿನ ಅಧಿವೇಶನದಲ್ಲಿ ವಿಧೇಯಕ ಚರ್ಚೆಗೆ ಬರುವ ಸಾಧ್ಯತೆಗಳಿವೆ.

1. ಜನಸಂದಣಿ ನಿಯಂತ್ರಣ ವಿಧೇಯಕವನ್ನು ಮಂಡಿಸಿದ ರಾಜ್ಯ ಸರ್ಕಾರ
2. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಾದ ಕಾಲ್ತುಳಿತ್ರ ಪ್ರಕರಣದ ನಂತರ ಎಚ್ಚೆತ್ತ ಸರ್ಕಾರ
3. ಜನಸಂದಣಿ ಸೇರುವ ಮುನ್ನ ಪೊಲೀಸರ ಅನುಮತಿ ಕಡ್ಡಾಯ




ರಾಜಕೀಯ ಸಭೆಗಳಿಗೂ ಈ ಕಾಯ್ದೆ ಅನ್ವಯವಾಗುತ್ತದೆ. ಜಾತ್ರೆ, ಧಾರ್ಮಿಕ ಸಮಾರಂಭ, ಮದುವೆ ಮತ್ತಿತರ ಕೌಟುಂಬಿಕ ಸಮಾರಂಭಗಳಿಗೆ ಈ ಕಾಯ್ದೆ ಅನ್ವಯವಾಗಲ್ಲ. ಹಾಗೆಯೇ ಸರ್ಕಾರಿ ಕಾರ್ಯಕ್ರಮಗಳಿಗೂ ಅನ್ವಯವಾಗಲ್ಲ. ಅನುಮತಿಗೆ ಇರುವ 10 ದಿನಗಳನ್ನು 5 ದಿನಕ್ಕೆ ಇಳಿಸೋಣ, ವಿಧೇಯಕಕ್ಕೆ ಅನುಮತಿ ಕೊಡಿ.

**-ಡಾ. ಜಿ. ಪರಮೇಶ್ವರ್** ಗೃಹ ಸಚಿವ



ನಾವು ಸದನದಲ್ಲಿ 40 ವಿಧೇಯಕಗಳನ್ನು ಅಂಗೀಕಾರ ಮಾಡಿಕೊಟ್ಟಿದ್ದೇವೆ. ಈ ಒಂದು ವಿಧೇಯಕ ಬೇಡ. ಸದನ ಸಮಿತಿಗೆ ಒಪ್ಪಿಸಿ, ಮಹಾಭಾರತದಲ್ಲಿ ಕೃಷ್ಣ 5 ಗ್ರಾಮಗಳನ್ನು ಕೇಳಿದಂತೆ ನಾವು ಈ ಒಂದು ವಿಧೇಯಕವನ್ನು ಸದನ ಸಮಿತಿಗೆ ಒಪ್ಪಿಸುವಂತೆ ಕೋರುತ್ತಿದ್ದೇವೆ. ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕು.

**-ಆರ್. ಅಶೋಕ್** ಪ್ರತಿಪಕ್ಷ ನಾಯಕ



ಸರ್ಕಾರಕ್ಕೆ ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ಈ ಕಾನೂನು ತರುತ್ತಿದೆ. ಕೆಡಿಸಿದ ಮೇಲೆ ಬುದ್ಧಿ ಬಂತು ಎಂದು ನಾವು ಹೇಳಬಹುದು. ದೇಶದಲ್ಲಿ ದೊಡ್ಡ ದೊಡ್ಡ ಸಮಾರಂಭಗಳು ನಡೆಯುತ್ತವೆ. ಪುರಿ ಜಗನ್ನಾಥ ರಥೋತ್ಸವದಲ್ಲಿ ಲಕ್ಷಾಂತರ ಜನ ಸೇರುತ್ತಾರೆ. ಅಲ್ಲೆಲ್ಲಾ ಹೇಗೆ ಜನರನ್ನು ನಿಯಂತ್ರಿಸುತ್ತಾರೆ. ಇದನ್ನೆಲ್ಲಾ ನಾವು ತಿಳಿದುಕೊಳ್ಳಬೇಕು. ಜುಲೈ 4ರ ಬುಧವಾರದೊಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಘಟನೆ ಪ್ರಚಾರದ ಹಪಹಪಿಯಿಂದ ಆದ ಘಟನೆ. , ಅವಘಡಗಳಿಗೆ ಪ್ರಚೋದನೆ ನೀಡುವವರ ವಿರುದ್ಧವೂ ಕ್ರಮ ಕೈಗೊಳ್ಳುವ ಅಂಶವನ್ನು ಕಾಯ್ದೆಯಲ್ಲಿ ಸೇರಿಸಿ, ಈ ಬಿಲ್‌ನ್ನು ನಾನು ಸ್ವಾಗತಿಸುತ್ತೇನೆ.


**-ಸುರೇಶ್ ಕುಮಾರ್**, ಶಾಸಕ

### ಏನಾದರೂ ಆದರೆ ಯಾರು ಜವಾಬ್ದಾರಿ

ಸ್ಪೀಕರ್ ಯು.ಟಿ. ಖಾದರ್ ಸಹ, ಕಾರ್ಯಕ್ರಮಕ್ಕೆ 3 ಸಾವಿರ ಜನ ಬರುತ್ತಾರೆ ಎಂದು ನಿರೀಕ್ಷಿಸಿರುತ್ತಾರೆ. ಆ ಮೇಲೆ ಹೆಚ್ಚು ಜನ ಸೇರುತ್ತಾರೆ. ಏನಾದರೂ ಆದರೆ ಯಾರು ಜವಾಬ್ದಾರಿ ಎಂದು ಪ್ರಶ್ನಿಸಿದರು. ಸಭಾಧ್ಯಕ್ಷರ ಮಾತಿಗೆ ಬಿಜೆಪಿ ಸದಸ್ಯರು ಸಹಮತ ವ್ಯಕ್ತಪಡಿಸಿದರು.ಈ ಕಾಯ್ದೆ ಜಾರಿ ಬೇಡ, ಇದು ಜನವಿರೋಧಿ. ಜನಪರ ಹೋರಾಟಗಳನ್ನು ಹತ್ತಿಕ್ಕುವ ಕಾಯ್ದೆ. ಇದನ್ನು ನನ್ನ ವಿರೋಧವಿದೆ ಎಂದು ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿ, ಸದನ ಸಮಿತಿಗೆ ಒಪ್ಪಿಸುವಂತೆ ಆಗ್ರಹಿಸಿದರು. ಪ್ರತಿಪಕ್ಷ ಸದಸ್ಯರ ಆಗ್ರಹಕ್ಕೆ ಮಣಿದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು, ಈ ವಿಧೇಯಕವನ್ನು ಸದನ ಸಮಿತಿ ಪರಿಶೀಲನೆಗೆ ಒಪ್ಪಿಸುವ ನಿರ್ಧಾರವನ್ನು ಪ್ರಕಟಿಸಿದರು. ಆಗ ಸ್ಪೀಕರ್ ಯು.ಟಿ.ಖಾದರ್ ಅವರು, ಇದಕ್ಕೆ ಸದನ ಸಮಿತಿ ರಚಿಸುವುದಾಗಿ ಹೇಳಿದರು.

### ನಷ್ಟ ಪರಿಹಾರಕ್ಕೆ ಬಾಂಡ್!

ಬೃಹತ್ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸಂಘಟಕರು ನಷ್ಟಪರಿಹಾರ ಬಾಂಡ್ ಠೇವಣಿ ಇಡಬೇಕು ಎಂದಿದೆ. 1 ಕೋಟಿ ಮೊತ್ತದ ನಷ್ಟಪರಿಹಾರ ಬಾಂಡ್ ಅನ್ನು ಠೇವಣಿ ಇಡಬೇಕಾಗಿದೆ. ಒಂದು ವೇಳೆ ಕಾರ್ಯಕ್ರಮದ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿಗೆ ಹಾನಿಯಾದರೆ ಅಥವಾ ಜೀವಹಾನಿಯಾದರೆ ಈ ಬಾಂಡ್ ಅನ್ನು ಅದಕ್ಕಾಗಿ ಬಳಸಿಕೊಳ್ಳಲಾಗುವುದು ಎಂದಿದೆ.ಇಷ್ಟೇ ಅಲ್ಲದೆ, ಕಾನೂನು ಹಾಗೂ ನಿಯಮಗಳನ್ನು ಉಲ್ಲಂಘಿಸಿದ ಸಂಘಟಕರಿಗೆ ಏಳು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ವಿಧೇಯಕದಲ್ಲಿ ಅವಕಾಶ ನೀಡಲಾಗಿದೆ. ಜೀವ ಹಾನಿಯಾದರೆ 10 ವರ್ಷ ಜೈಲು ಶಿಕ್ಷೆಗೆ ಅವಕಾಶ ಇದೆ. ನಿಯಮಗಳನ್ನು ಉಲ್ಲಂಘಿಸಿದರೆ ಸಂಘಟಕರಿಗೆ ಅಷ್ಟೇ ಅಲ್ಲ, ಸರ್ಕಾರಿ ಅಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳಿಗೆ ದಂಡ ವಿಧಿಸುವ ಅಥವಾ ಜೈಲು ಶಿಕ್ಷೆ ವಿಧಿಸುವ ಅವಕಾಶವೂ ಈ ಮಸೂದೆಯಲ್ಲಿದೆ ಎಂದು ತಿಳಿದುಬಂದಿದೆ.



**ಸಾರ್ವಜನಿಕ ಸಮಾವೇಶದ ಅನುಮತಿ ಇನ್ಮುಂದೆ ಸುಲಭವಲ್ಲ!**

**ವಿಧಾನಸಭೆಯಲ್ಲಿ ಮಹತ್ವದ ಮಸೂದೆ ಮಂಡನೆ!**

ಇದಕ್ಕೂ ಮುನ್ನ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕರ್ನಾಟಕ ಜನಸಂದಣಿ ನಿಯಂತ್ರಣ ವಿಧೇಯಕವನ್ನು ಮಂಡಿಸಿ ಈ ವಿಧೇಯಕಕ್ಕೆ ಅಂಗೀಕಾರ ನೀಡಬೇಕು ಎಂದು ಸದನಕ್ಕೆ ಮನವಿ ಮಾಡಿದರು.ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಘಟನೆ ರಾಜ್ಯವನ್ನು ಬೆಚ್ಚಿ ಬೀಳಿಸಿ ಎಚ್ಚರಿಕೆಯ ಗಂಟೆಯಾಗಿತ್ತು ಎಂದ ಅವರು, ದೇಶದಲ್ಲಿ ಅನೇಕ ಕಾಲ್ತುಳಿತ ಪ್ರಕರಣಗಳು ನಡೆದು ಸಾವು-ನೋವು ಹಾಗೂ ಆಸ್ತಿ ಹಾನಿ ಉಂಟಾಗಿವೆ. ರಾಜ್ಯದಲ್ಲಿ ಇದನ್ನು ತಪ್ಪಿಸಲು ವಿಧೇಯಕ ಜಾರಿ ಅಗತ್ಯವಾಗಿದೆ ಎಂದು ಹೇಳಿದರು.

ರಾಜಕೀಯ ಸಭೆ, ದೊಡ್ಡ ಸಮಾರಂಭಗಳ ಸಂದರ್ಭದಲ್ಲಿ ಜನಸಂದಣಿ ಆಗುವುದನ್ನು ಗಮನಿಸಿ ಜನಸಂದಣಿ ನಿಯಂತ್ರಿಸಲು ಅಗತ್ಯವೆಂದು ಚಿಂತನೆ ಮಾಡಿ ಈ ವಿಧೇಯಕವನ್ನು ಜಾರಿ ಮಾಡಲು ಸರ್ಕಾರ ಮುಂದಾಗಿದೆ. ಕಾರ್ಯಕ್ರಮಗಳು ಮತ್ತು ಸಮಾರಂಭಗಳಲ್ಲಿ ಜನಸಂದಣಿ ಪರಿಣಾಮಕಾರಿಯಾಗಿ ನಿಯಂತ್ರಿಸುವುದು ಮತ್ತು ಜನ ಗುಂಪುಗೂಡುವುದನ್ನು ನಿರ್ವಹಿಸುವುದು ಮತ್ತು ಕಾನೂನು ಬಾಹಿರವಾಗಿ ಗುಂಪುಗೂಡುವುದನ್ನು ನಿರ್ಬಂಧಿಸಲು ಈ ಕಾಯ್ದೆಯನ್ನು ಜಾರಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

## ಮಕ್ಕಳ ಅಭಿಪ್ರಾಯಕ್ಕೆ ಪೋಷಕರು ಮನ್ನಣೆ ನೀಡಬೇಕು: ಸ್ವಾಮೀಜಿ

• ಉದಯವಾಹಿನಿ, ಬೆಂಗಳೂರು

ಶೈಕ್ಷಣಿಕ ವಿಷಯದಲ್ಲಿ ಮಕ್ಕಳ ಅಭಿಪ್ರಾಯಕ್ಕೆ ಪೋಷಕರು ಮನ್ನಣೆ ನೀಡಬೇಕು. ಅವರ ಆಯ್ಕೆಯ ವಿಷಯಗಳನ್ನು ಅಭ್ಯಾಸ ಮಾಡಲು ಅವಕಾಶ ನೀಡಿದರೆ ಸಾಧನೆ ಮಾಡಬಹುದು ಎಂದು ಆದಿಚುಂಚನಗಿರಿ ಮಠದ ಪೀಠಾಧಿಪತಿಯಾದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.ಬಿಜಿಎಸ್ ಪಿಯು ಕಾಲೇಜಿನ ನೂತನ ತರಗತಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಐನ್‌ಸ್ಟೈನ್ ಬಾಲ್ಯದಿಂದಲೂ ಕುತೂಹಲಕಾರಿ ವ್ಯಕ್ತಿತ್ವ ಹೊಂದಿದ್ದರು. ಪ್ರಶ್ನಾ ಮನೋಭಾವ ರೂಢಿಸಿಕೊಂಡಿದ್ದರು. ಹೀಗಾಗಿಯೇ ಅವರು ಜಗತ್ತಿನ ಶ್ರೇಷ್ಠ ವಿಜ್ಞಾನಿಯಾಗಿ, ಅತ್ಯುತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಾಯಿತು ಎಂದು ತಿಳಿಸಿದರು.

## ಶೇ 1ರಷ್ಟು ಒಳ ಮೀಸಲಾತಿಗೆ ಅಲೆಮಾರಿಗಳ ಆಗ್ರಹ

• ಉದಯವಾಹಿನಿ, ಬೆಂಗಳೂರು

ತಮ್ಮ ಸಮುದಾಯವನ್ನು ಪ್ರವರ್ಗ ಎ ನಲ್ಲಿಯೇ ಇರಿಸಿ ಶೇಕಡ 1ರಷ್ಟು ಒಳ ಮೀಸಲಾತಿ ನೀಡುವಂತೆ ಆಗ್ರಹಿಸಿ 'ಪರಿಶಿಷ್ಟ ಜಾತಿಯ 59 ಸೂಕ್ಷ್ಮ, ಅತಿ ಸೂಕ್ಷ್ಮ ಅಲೆಮಾರಿಗಳ ಸಮುದಾಯಗಳ ಒಳ ಮೀಸಲಾತಿ ವಂಚಿತ ಹೋರಾಟ ಸಮಿತಿ' ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.ಒಳ ಮೀಸಲಾತಿ ಜಾರಿ ಮಾಡುವ ಒತ್ತಡದಲ್ಲಿದ್ದ ಸರ್ಕಾರ 101 ಪರಿಶಿಷ್ಟ ಜಾತಿಗಳಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವ ನಿಟ್ಟಿನಲ್ಲಿ ಮೀಸಲು ಪ್ರಮಾಣವನ್ನು ಎಚ್ಚರಿಕೆಯಿಂದ ನಿಗದಿಪಡಿಸಬೇಕಿತ್ತು. ಅದರಲ್ಲೂ ದನಿ ಇಲ್ಲದ ಅಲೆಮಾರಿಗಳಂತಹ ಸಮುದಾಯಗಳ ವಿಷಯದಲ್ಲಿ ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಪ್ರತಿಭಟನಕಾರರು ಬೇಸರ ವ್ಯಕ್ತಪಡಿಸಿದರು. ಸಮಿತಿಯ ಪದಾಧಿಕಾರಿ ಎಸ್.ಮಾರಪ್ಪ ಮಾತನಾಡಿ, 'ಅಲೆಮಾರಿಗಳನ್ನು ಬಂಜಾರ, ಭೋವಿ, ಕೊರಮ, ಕೊರಚ ಸಮುದಾಯಗಳ ಜೊತೆಗೆ ಸೇರಿಸಿ ಶೇಕಡ 5ರಷ್ಟು ಮೀಸಲಾತಿ ನಿಗದಿ ಮಾಡಿರುವುದರಿಂದ ಅಲೆಮಾರಿ ಸಮುದಾಯಗಳು ಶಾಶ್ವತವಾಗಿ ಮೀಸಲಾತಿಯಿಂದ ವಂಚಿತವಾಗಲಿವೆ.ಹಲವು ವರ್ಷಗಳಿಂದ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿಯೇ ಬದುಕಿ ಬಂದ ಸಮುದಾಯಗಳಿಗೆ ಸ್ವಾತಂತ್ರ್ಯ ನಂತರವೂ ಸಂವಿಧಾನ ಬದ್ಧ ಸೌಲಭ್ಯಗಳು ದೊರಕಿಲ್ಲ' ಎಂದು ಆರೋಪಿಸಿದರು.

## ಮುಂದಿನ ಆರು ದಿನ ರಾಜ್ಯದಾದ್ಯಂತ ವ್ಯಾಪಕ ಮಳೆ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಹಲವಾರು ಭಾಗಗಳಲ್ಲಿ ನಿರಂತರ ಮಳೆಯಾಗಿದ್ದು, ನದಿಗಳು ಉಕ್ಕಿ ಹರಿಯುತ್ತಿವೆ. ಹಲವು ಕಡೆಗಳಲ್ಲಿ ಸೇತುವೆಗಳು ಮುಳುಗಡೆಯಾಗಿ ಅನೇಕ ಪ್ರದೇಶಗಳಲ್ಲಿ ರಸ್ತೆ ಸಂಪರ್ಕ ಕಡಿತಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಧಾರಾವಾಡ, ಗದಗ, ದಾವಣಗೆರೆ, ಹಾವೇರಿ ಮತ್ತು ಉತ್ತರ ಕನ್ನಡದಲ್ಲಿ ಭಾರಿ ಮಳೆಯಾಗಿದ್ದು, ಮನೆಗಳು ಮತ್ತು ಕೃಷಿಭೂಮಿಗೆ ಹಾನಿಯಾಗಿದೆ. ಮಹಾರಾಷ್ಟ್ರದ ಪ್ರವಾಹದಿಂದ ಭಾರಿ ನೀರು ಹರಿದು ಬರುತ್ತಿರುವುದರಿಂದ ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಇತ್ತ ಯಾದಗಿರಿಯಲ್ಲಿ, ನಾರಾಯಣಪುರದ ಬಸವಸಾಗರ ಅಣೆಕಟ್ಟಿನಿಂದ ನೀರನ್ನು ಬಿಡುಗಡೆ ಮಾಡಲಾಗುತ್ತಿರುವುದರಿಂದ ಕೃಷ್ಣಾ ನದಿ ಜಲಾನಯನ ಪ್ರದೇಶದ ಹಳ್ಳಿಗಳು ಪ್ರವಾಹ ಭೀತಿ ಎದುರಿಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 30 ಕ್ರೆಸ್ಟ್ ಗೇಟ್‌ಗಳನ್ನು ತೆರೆಯುವ ಮೂಲಕ ಅಣೆಕಟ್ಟಿನಿಂದ 2.8 ಲಕ್ಷ ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿದೆ. ಕೃಷ್ಣಾ ನದಿಗೆ ವ್ಯಾಪಿಸಿರುವ ಯಾದಗಿರಿಯ ಕೊಲ್ಲೂರು ಸೇತುವೆ ಮುಳುಗಡೆಯಾಗಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿದ್ದಾರೆ.

## ಕುರಿಗಾಹಿಗಳಿಗೆ ಕಿರುಕುಳ ಕೊಟ್ರೆ ಜೈಲು ಶಿಕ್ಷೆ: ಮಹತ್ವದ ವಿಧೇಯಕ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳಿಗೆ ರಕ್ಷಣೆ, ಭದ್ರತೆ ಹಾಗೂ ನಿಂದನೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ 2025ನೇ ಸಾಲಿನ ಕರ್ನಾಟಕ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳ(ಕ್ಷೇಮಾಭಿವೃದ್ಧಿ ಕ್ರಮಗಳು ಮತ್ತು ದೌರ್ಜನ್ಯಗಳ ವಿರುದ್ಧದ ರಕ್ಷಣೆ) ವಿಧೇಯಕಕ್ಕೆ ವಿಧಾನಸಭೆಯಲ್ಲಿ ಗುರುವಾರ ಅಂಗೀಕಾರ ದೊರೆಯಿತು. ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ವಿಧೇಯಕವನ್ನು ಮಂಡಿಸಿದರು. ಬಳಿಕ ವಿವರಣೆ ನೀಡಿ, ಪ್ರತಿಯೊಬ್ಬ ಸಾಂಪ್ರದಾಯಿಕ ಅಲೆಮಾರಿ ಕುರಿಗಾಹಿಗಳು ಫಲಾನುಭವಿಯಾಗಿ ನೋಂದಾಯಿಸಿಕೊಳ್ಳಬೇಕು. ಕೈಗೆಟಕುವ ಬೆಲೆಯಲ್ಲಿ ವಸತಿಗಾಗಿ ಭೂಮಿ ಮಂಜೂರಾತಿ, ಜೀವವಿಮೆ, ಆರೋಗ್ಯ ವಿಮೆ, ಪಶುವಿಮೆ, ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳು, ಕೌಶಲ್ಯ ಉನ್ನತೀಕರಣ, ಆಹಾರ ಭದ್ರತೆ, ಕಲ್ಯಾಣ ಕಾರ್ಯಕ್ರಮಗಳಾಗಿವೆ ಅಲ್ಲದೆ ಜಾನುವಾರುಗಳಿಗೆ ಲಸಿಕೆ, ಚಿಕಿತ್ಸೆ, ಕುರಿಗಾಹಿಗಳ ಉತ್ಪನ್ನಗಳಿಗೆ ಮಾರಾಟ ಬೆಂಬಲ, ನಷ್ಟದ ಸಂದರ್ಭದಲ್ಲಿ ನಷ್ಟ ಪರಿಹಾರ ಮೊದಲಾದ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸಲಾಗುತ್ತದೆ. ಮೀಸಲು ಅರಣ್ಯವನ್ನು ಇದರಿಂದ ಹೊರತಪಡಿಸಲಾಗಿದೆ. ಕುರಿಗಾಹಿ ದಾರಿಗೆ ಅಡ್ಡಿ ಉಂಟು ಮಾಡುವ ವ್ಯಕ್ತಿಗೆ 2 ವರ್ಷಗಳ ಸೆರೆವಾಸ, 1 ಲಕ್ಷ ರೂ. ದಂಡವಿದೆ. ಉದ್ದೇಶಪೂರ್ವಕವಾಗಿ ಕುರಿಗಾಯಿಯನ್ನು ಅವಮಾನಿಸಿದರೆ, ನಿಂದಿಸಿದರೆ ಆರು ತಿಂಗಳ ಅವಧಿಯ, 5 ವರ್ಷದವರೆಗೆ ವಿಸ್ತರಿಸಬಹುದಾದ ಸೆರೆವಾಸ ಮತ್ತು 1 ಲಕ್ಷ ರೂ. ದಂಡ ವಿಧಿಸಲಾಗುತ್ತದೆ.

## ಕೃಷ್ಣಾ ಮೇಲ್ದಂಡೆ ಯೋಜನೆಗೆ ಜಾರಿಗೆ 2 ಲಕ್ಷ ಕೋಟಿ ರೂ. ಅಗತ್ಯ

### ಕೃಷ್ಣಾ ಮೇಲ್ದಂಡೆ ಯೋಜನೆ ವಿರುದ್ಧ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದವರಿಂದ ಒತ್ತಡ

• ಉದಯವಾಹಿನಿ, ಬೆಂಗಳೂರು




ಕೃಷ್ಣಾ ಮೇಲ್ದಂಡೆ ಯೋಜನೆಗೆ ಹೊರಡಿಸಲಾಗಿದ್ದ ಅಧಿಸೂಚನೆಗೆ ಒಮ್ಮೆ ಆಂಧ್ರ ಪ್ರದೇಶ ಮತ್ತೊಮ್ಮೆ ಮಹಾರಾಷ್ಟ್ರದವರು ಕೇಂದ್ರ ಸರಕಾರದ ಮೇಲೆ ಒತ್ತಡ ತಂದು ನಿಲ್ಲಿಸಿದರು ಎಂದು ಜಲಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ್ ವಿಧಾನ ಪರಿಷತ್ತಿನಲ್ಲಿ ಹೇಳಿದರು.

ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಪಿ.ಎಚ್. ಪೂಜಾರ್ ಪ್ರಶ್ನೆಗೆ ಉತ್ತರಿಸಿ ''ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಈ ಯೋಜನೆಯ ಪರವಾಗಿದ್ದು, ಅದಕ್ಕೆ ಅಧಿಸೂಚನೆ ಹೊರಡಿಸಲೇಬೇಕು ಎಂದು ಸಂಬಂಧಪಟ್ಟ ರಾಜ್ಯಗಳ ಸಭೆ ನಡೆಸಲು ಎರಡು ಬಾರಿ ಪ್ರಯತ್ನಿಸಿದರು. ಆದರೆ ಎರಡು ರಾಜ್ಯದವರು ದೂರವಾಣಿ ಕರೆ ಮಾಡಿ ನಿಲ್ಲಿಸಿದರು,'' ಎಂದರು.

**ಯೋಜನೆ ಜಾರಿಗೆ 2 ಲಕ್ಷ ಕೋಟಿ ರೂ. ಅಗತ್ಯ**: ''ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಜಾರಿಗೆ 2 ಲಕ್ಷ ಕೋಟಿ ರೂ. ಬೇಕಾಗುತ್ತದೆ. ಇದು ಸಾಧ್ಯವಾಗುತ್ತದೆಯೇ? ಈ ಯೋಜನೆ ವಿಚಾರದಲ್ಲಿ ದೊಡ್ಡ ಹಗರಣವೇ ನಡೆಯುತ್ತಿದೆ. ಭೂಮಿ ಪರಿಹಾರ ವಿಚಾರದಲ್ಲಿ ವಕೀಲರುಗಳು ಹಣ ಮಾಡುತ್ತಿದ್ದಾರೆ. ರೈತರಿಗೆ ಪರಿಹಾರ ದೊರೆಯುವುದಿಲ್ಲ. ಆದ ಕಾರಣಕ್ಕೆ ಸದಸ್ಯ ಪಿ.ಎಚ್. ಪೂಜಾರ್ ಅಲ್ಲಿನ ರೈತರನ್ನು ಸಮಾಧಾನ ಪಡಿಸಿದರೆ ಹದಿನೈದು ದಿನಗಳಲ್ಲಿ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗುತ್ತದೆ,'' ಎಂದರು. ಹುಬ್ಬಳ್ಳಿ ಮತ್ತು ಬೆಳಗಾವಿಯಲ್ಲಿ ಕೆಎಸ್‌ಸಿಎ ಕ್ರಿಕೆಟ್ ಕ್ರೀಡಾಂಗಣಗಳ ದುಸ್ಥಿತಿಯ ಬಗ್ಗೆ ಪ್ರಶ್ನೋತ್ತರ ಕಲಾಪದಲ್ಲಿ ವಿಚಾರ ಪ್ರಸ್ತಾಪಿಸಿದ ಬಿಜೆಪಿ ಸದಸ್ಯ ಪ್ರದೀಪ್ ಶೆಟ್ಟರ್, ಉತ್ತರ ಕರ್ನಾಟಕಕ್ಕೆ ಪದೇ ಪದೆ ಅನ್ಯಾಯವಾಗುತ್ತಿದೆ. ನಮಗೆ ಪ್ರತ್ಯೇಕ ರಾಜ್ಯ ಕೊಟ್ಟು ಬಿಡಿ ನಾವು ಹೊರಟು ಹೋಗುತ್ತೇವೆ, ಎಂದು ಹೇಳಿದರು. ಸದಸ್ಯರ ಪ್ರಶ್ನೆಗೆ ಮುಖ್ಯಮಂತ್ರಿ ನೀಡಿದ ಉತ್ತರಕ್ಕೆ ತೃಪ್ತರಾಗದ ಶೆಟ್ಟರ್, ಮೊದಲಿನಿಂದಲೂ ಎಲ್ಲಾ ವಿಚಾರದಲ್ಲೂ ಉತ್ತರ ಕರ್ನಾಟಕಕ್ಕೆ ಅನ್ಯಾಯವಾಗುತ್ತಲೇ ಇದೆ. ಕ್ರೀಡಾ ಪ್ರತಿಭೆಗಳಿಗೆ ಪ್ರೋತ್ಸಾಹ ಸಿಗುತ್ತಿಲ್ಲ. ಕ್ರಿಕೆಟ್ ಕ್ರಿಡಾಂಗಣ ಪಾಳು ಬಿದ್ದಿದೆ. ಅನೈತಿಕ ಚಟುವಟಿಕೆ ನಡೆಯುತ್ತಿವೆ. ಸರಕಾರ ಕೆಎಸ್‌ಸಿಎಗೆ ನೀಡಿರುವ ಭೂಮಿ ವಾಪಸ್ ಪಡೆಯಬೇಕು, ಎಂದು ಆಗ್ರಹಿಸಿದರು. ಆಗ ಸಿಎಂ, ಸರಕಾರ ಯಾವತ್ತೂ ಉತ್ತರ ಕರ್ನಾಟಕವನ್ನು ಪ್ರತ್ಯೇಕವಾಗಿ ನೋಡಿಲ್ಲ. ಕ್ರಿಕೆಟ್ ಕ್ರೀಡಾಂಗಣದ ದುಸ್ಥಿತಿ ಬಗ್ಗೆ ಕೆಎಸ್‌ಸಿಎ ಜತೆ ಮಾತನಾಡಿ ಸಮಸ್ಯೆ ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.



## ಜಾತಿವಾರು ಸಮೀಕ್ಷೆ: ತಪ್ಪು ಮಾಹಿತಿ ನೀಡದಂತೆ ಒಕ್ಕಲಿಗರ ಸಂಘ ಮನವಿ

• ಉದಯವಾಹಿನಿ, ಬೆಂಗಳೂರು

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಲಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಿಂದ ಒಕ್ಕಲಿಗ ಸಮುದಾಯದ ಯಾರೂ ತಪ್ಪಿ ಹೋಗದ ಹಾಗೆ, ತಪ್ಪು ಮಾಹಿತಿ ದಾಖಲಾದಂತೆ ಎಚ್ಚರ ವಹಿಸಲು ಒಕ್ಕಲಿಗ ಸಂಘದ ನಿರ್ದೇಶಕರಿಗೆ, ಜಿಲ್ಲಾ, ತಾಲ್ಲೂಕು ಮಟ್ಟದ ಪದಾಧಿಕಾರಿಗಳಿಗೆ ರಾಜ್ಯ ಒಕ್ಕಲಿಗ ಸಂಘವು ಗುರುವಾರ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿತು. ಜಾತಿ ಕಲಂನಲ್ಲಿ ಒಕ್ಕಲಿಗ ಎಂದು ಬರೆಸಬೇಕು. ಕುಂಚಿಟಿಗ, ಹಳ್ಳಿಕಾರ್ ಸೇರಿದಂತೆ ಉಪ ಪಂಗಡಗಳನ್ನು ಉಪ ಜಾತಿ ಕಲಂನಲ್ಲಿ ದಾಖಲಿಸಬೇಕು. ಜಾತಿ ಕಲಂನಲ್ಲಿ ಯಾರೂ ಉಪ ಜಾತಿ ನಮೂದಿಸದಂತೆ ಎಚ್ಚರಿಕೆ ವಹಿಸಬೇಕು. ಮುಂದೆ ಸರ್ಕಾರಿ ಸೌಲಭ್ಯ ಸಿಗಬೇಕಿದ್ದರೆ ಸರಿಯಾದ ಮಾಹಿತಿ ನೀಡಬೇಕು ಎಂದು ಕಾರ್ಯಕ್ರಮದಲ್ಲಿ ತಿಳಿಸಲಾಯಿತು. ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಕೆಂಚಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸ್ಪಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಪ್ರಸನ್ನನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

## ಧರ್ಮಸ್ಥಳ ಪ್ರಕರಣದ ಹಿಂದಿನ ಕಾಣದ ಕೈ: ಸ್ಫೋಟಕ ಹೆಸರನ್ನು ಉಲ್ಲೇಖಿಸಿದ ಕಾಂಗ್ರೆಸ್ ನಾಯಕ

■ ದಿನದಿಂದ ದಿನಕ್ಕೆ ಹೊಸಹೊಸ ಟ್ವಿಸ್ಟ್ ಪಡೆಯುತ್ತಿರುವ ಧರ್ಮಸ್ಥಳ ಪ್ರಕರಣ ■ ಧರ್ಮಸ್ಥಳ ಪ್ರಕರಣಕ್ಕೆ ಹಿಂದೂ ಹಿರಿಯ ಮುಖಂಡರೇ ಕಾರಣ

• ಉದಯವಾಹಿನಿ, ಬೆಂಗಳೂರು

ಧರ್ಮಸ್ಥಳದ ಶವಹೂತ ಮತ್ತು ಬುರುಡೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಭಾರೀ ಬೆಳವಣಿಗೆಗಳು ಗುರುವಾರದಂದು (ಆಗಸ್ಟ್ 21) ನಡೆದಿದೆ. ಇನ್ನೊಂದು, ಕಡೆ ಈ ಪ್ರಕರಣದಲ್ಲಿ ನೇರವಾಗಿ ಕರಾವಳಿ ಭಾಗದ ಹಿರಿಯ ಹಿಂದೂ ಮುಖಂಡರೊಬ್ಬರ ಕೈವಾಡವಿದೆ ಎಂದು ಆರೋಪಿಸಿದ್ದಾರೆ.

**ಪ್ರಚೋದನೆ ಕೊಡುತ್ತಿರುವವರು ಯಾರು?**

ವಿಜಯಪುರದಲ್ಲಿ ಕಾಂಗ್ರೆಸ್ ನಾಯಕ ಮತ್ತು ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷರಾಗಿರುವ ವಿನಯ್ ಕುಮಾರ್ ಸೊರಕೆ ಮಾತನಾಡಿ, ಕರಾವಳಿಯ ಎರಡು ಜಿಲ್ಲೆಗಳಲ್ಲಿ (ದಕ್ಷಿಣ ಕನ್ನಡ, ಉಡುಪಿ) ಏನೇ ಧಾರ್ಮಿಕ ಉದ್ರೇಕಕಾರಿ ವಿದ್ಯಮಾನ ನಡೆದರೂ ಅದರ ಹಿಂದೆ ಕಲ್ಲಡ್ಕ ಭಟ್ರು ಕೈವಾಡ ಇರುತ್ತದೆ ಎಂದು ಹೇಳಿದ್ದಾರೆ.


shutterstock.com · 2367173315

ಧರ್ಮಸ್ಥಳ ಪ್ರಕರಣದಲ್ಲಿ ಧ್ವನಿ ಎತ್ತುತ್ತಿರುವ ಮಹೇಶ್ ಶೆಟ್ಟಿ ತಿಮರೋಡಿ ಯಾರು? ಅವರ ಹಿಂದೆ ಯಾರ್ಯಾರು ಇದ್ದಾರೆ? ತಿಮ್ಮರೋಡಿಗೆ ಪ್ರಚೋದನೆ ಕೊಡುತ್ತಿರುವವರು ಯಾರು? ಅವರ ಮೂಲ ಏನು ಎನ್ನುವುದು ಮೊದಲು ತನಿಖೆಯಾಗಬೇಕು ಎಂದು ವಿನಯ್ ಕುಮಾರ್ ಸೊರಕೆ ಒತ್ತಾಯಿಸಿದ್ದಾರೆ.

ಧರ್ಮಸ್ಥಳ ಪ್ರಕರಣದಲ್ಲಿ ಒಂದು ಕಡೆ ಚಿವುಟುವುದು, ಇನ್ನೊಂದು ಕಡೆ ತೂಗುವ ಕೆಲಸವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಮಾಡುತ್ತಿದ್ದಾರೆ. ಈಗಿನ ವಿದ್ಯಮಾನಗಳ ಹಿಂದೆ, ಕಲ್ಲಡ್ಕ ಭಟ್ರ ಕೈವಾಡವಿದೆ ಎಂದು ವಿನಯ್ ಕುಮಾರ್ ಸೊರಕೆ ಸಂಶಯ ವ್ಯಕ್ತಪಡಿಸಿದ್ದಾರೆ.

ಬಿಜೆಪಿಯ ನಾಯಕರು ಒಮ್ಮೆ ಎಸ್‌ಆರ್ ವಿಶ್ವನಾಥ್ ನೇತೃತ್ವದಲ್ಲಿ ಮೆಗಾ ಕಾರ್ ಜಾಥಾದ ಮೂಲಕ ಧರ್ಮಸ್ಥಳಕ್ಕೆ ಬಂದರು. ಇದಾದ ನಂತರ, ವಿಜಯೇಂದ್ರ, ಸಿಟಿ ರವಿ ಆದಿಯಾಗಿ ಬಿಜೆಪಿ ನಾಯಕರು ಅಲ್ಲಿಗೆ ಹೋದರು. ಆಗ, ಅಲ್ಲಿ ಯಾಕೆ ಕಲ್ಲಡ್ಕ ಪ್ರಭಾಕರ್ ಭಟ್ ಇರಲಿಲ್ಲ ಎಂದು ವಿನಯ್ ಕುಮಾರ್ ಪ್ರಶ್ನಿಸಿದ್ದಾರೆ.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯದ ಆದೇಶದ ಮೇರೆಗೆ ಎಸ್‌ಐಟಿ ರಚನೆ ಮಾಡಲಾಗಿದೆ. ಇದರಲ್ಲಿ ರಾಜ್ಯ ಸರ್ಕಾರ, ಕಾಂಗ್ರೆಸ್ ಅಥವಾ ಮುಖ್ಯಮಂತ್ರಿಗಳ ಯಾವುದೇ ಹಿತಾಶಕ್ತಿ ಇಲ್ಲ ಎನ್ನುವುದು ರಾಜ್ಯದ ಜನತೆ ಅರ್ಥ ಮಾಡಿಕೊಳ್ಳಬೇಕು ಎಂದು ವಿನಯ್ ಕುಮಾರ್ ಸೊರಕೆ ಹೇಳಿದ್ದಾರೆ.

ಎಸ್‌ಐಟಿ ರಚನೆ ಆಗಿರುವುದಕ್ಕೆ ಖುದ್ದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗ್ಗಡೆಯವರೂ ಇದನ್ನು ಸ್ವಾಗತಿಸಿದ್ದಾರೆ. ತನಿಖೆ ನಡೆಯುತ್ತಿದೆ, ಸತ್ಯಾಸತ್ಯತೆಯು ಸದ್ಯದಲ್ಲೇ ಹೊರಬರಲಿದೆ ಎನ್ನುವ ವಿಶ್ವಾಸವಿದೆ ವಿನಯ್ ಕುಮಾರ್ ಸೊರಕೆ ಹೇಳಿದ್ದಾರೆ.

### ಮಹೇಶ್ ಶೆಟ್ಟಿ ತಿಮರೋಡಿಯನ್ನು ಉಡುಪಿ ಜಿಲ್ಲಾ ಪೊಲೀಸರು ವಶಕ್ಕೆ

ಧರ್ಮಸ್ಥಳದ ಸಮೀಪದ ಉಜಿರೆಯಲ್ಲಿನ ನಿವಾಸದಿಂದ ಮಹೇಶ್ ಶೆಟ್ಟಿ ತಿಮರೋಡಿಯನ್ನು ಉಡುಪಿ ಜಿಲ್ಲಾ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರು. ಇದಾದ ನಂತರ, ಅಲ್ಲಿಂದ ಜಿಲ್ಲೆಯ ಬ್ರಹ್ಮಾವರ ಠಾಣೆಗೆ ಕರೆದುಕೊಂಡು ಹೋಗಲಾಗಿದೆ. ಅಲ್ಲಿ, ವಿಚಾರಣೆ ನಡೆಸಿ ಅವರನ್ನು ಬಂಧಿಸಲಾಗಿದೆ. ಇನ್ನೊಂದು ಕಡೆ, ಯೂಟ್ಯೂಬರ್ ಸಮೀರ್ ಬಂಧನಕ್ಕೆ ಬೆಳ್ತಂಗಡಿ ಪೊಲೀಸರು ಬಲೆ ಬೀಸಿದ್ದಾರೆ. ಲಭ್ಯ ಮಾಹಿತಿ ಪ್ರಕಾರ, ಸಮೀರ್ ಎಂಡಿ ನಾಪತ್ತೆಯಾಗಿದ್ದಾರೆ. ಮಾಸ್ಕ್ ಮ್ಯಾನ್ ಎಂದೇ ಹೆಸರಾಗಿರುವ ಅನಾಮಿಕನ ಪತ್ನಿಯೂ ಗೊಂದಲಕಾರಿ ಹೇಳಿಕೆಯನ್ನು ನೀಡುತ್ತಿದ್ದಾರೆ ಎನ್ನುವುದು ಇನ್ನೊಂದು ಆಯಾಮ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹10,075/Gram24ct ₹9,230/Gram22ct | ಬೆಳ್ಳಿ: ₹116.00/Gram

# ಸಣ್ಣ ರೈತರ ಸಾಲ ಮನ್ನಾ ಮಾಡಲು ಆಗ್ರಹ

• **ಉದಯವಾಹಿನಿ, ಬೆಂಗಳೂರು**

ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರತ್ನ ಭಾರತ ರೈತ ಸಮಾಜದಿಂದ ಎಪಿಎಂಸಿ ಸಚಿವ ಶಿವಾನಂದ ಪಾಟೀಲ ಅವರಿಗೆ ಮನವಿ ಸಲ್ಲಿಸಲಾಯಿತು. ರೈತರ ಆತ್ಮಹತ್ಯೆ ತಡೆಗೆ ತಜ್ಞರನ್ನು ಒಳಗೊಂಡ ಸಮಿತಿ ರಚಿಸಬೇಕು. ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಬೇಕು. ಸಣ್ಣ ರೈತರ ಸಾಲ ಮನ್ನಾ ಮಾಡಬೇಕು. ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ಸರ್ಕಾರ ನೆರವು ನೀಡಬೇಕು. ಬೆಂಗಳೂರು ದಕ್ಷಿಣ, ಉತ್ತರ ವಿಭಾಗದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳನ್ನು ಕೆಲಸದಿಂದಲೇ ವಜಾ ಮಾಡಬೇಕು. ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಮಾವಿನ ಹಣ್ಣಿನ ಜ್ಯೂಸ್ ತಯಾರಿಕಾ ಘಟಕವನ್ನು ಸ್ಥಾಪಿಸಬೇಕು. ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಪಡಿಸಬೇಕು ಎಂದು ಆಗ್ರಹಿಸಿದರು.ರತ್ನ ಭಾರತ ರೈತ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಎಲ್.ಲಕ್ಷ್ಮಣ್ ಅವರು ಸಚಿವರಿಗೆ ಮನವಿ ಸಲ್ಲಿಸಿದರು.

# ಪೊಲೀಸ್ ಠಾಣೆಯ ಶೌಚಾಲಯದಲ್ಲಿ ಶವ ಪತ್ತೆ

• **ಉದಯವಾಹಿನಿ, ಬೆಂಗಳೂರು**

ದೇವಾಲಯಗಳು ಮತ್ತು ಅಂಗನವಾಡಿಯಲ್ಲಿ ಕಳ್ಳತನ ಮಾಡಿದ ಆರೋಪದ ಮೇಲೆ ಬಂಧಿಸಲ್ಪಟ್ಟ 59 ವರ್ಷದ ಕಳ್ಳನೊಬ್ಬ ಎಂ.ಕೆ.ದೊಡ್ಡಿ ಪೊಲೀಸ್ ಠಾಣೆಯ ಶೌಚಾಲಯದಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ಬೆಂಗಳೂರು ದಕ್ಷಿಣ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ನಡೆದಿದೆ. ಮೃತ ವ್ಯಕ್ತಿಯನ್ನು ಮಂಡ್ಯದ ಮದ್ದೂರಿನ ದುಂಡನಹಳ್ಳಿ ಮೂಲದ ರಮೇಶ್ ಎಂದು ಗುರುತಿಸಲಾಗಿದೆ. ಶೌಚಾಲಯದಲ್ಲಿ ರಮೇಶ್ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಈತ ತನ್ನ ಪಂಚೆ ಬಳಸಿ ಈ ಕೃತ್ಯ ಎಸಗಿದ್ದಾನೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಗಿದೆ.

ರಮೇಶ್ ಅವರ ಪುತ್ರಿಯರಾದ ಆಶಾ ಮತ್ತು ಉಷಾ ತಮ್ಮ ತಂದೆಯ ಸಾವಿಗೆ ಪೊಲೀಸರೇ ಕಾರಣ ಎಂದು ಆರೋಪಿಸಿದ್ದಾರೆ. ಲಾಕಪ್ ಡೆತ್ ಆರೋಪವನ್ನು ಹಿರಿಯ ಪೊಲೀಸ್ ಅಧಿಕಾರಿಗಳು ತಳ್ಳಿಹಾಕಿದ್ದಾರೆ. ಬೊಮ್ಮನಾಯಕನಹಳ್ಳಿಯ ಬೀರೇಶ್ವರ ಮತ್ತು ಮಹದೇಶ್ವರ ದೇವಾಲಯಗಳಿಂದ ನಗದು, ಬೆಳ್ಳಿ ಆಭರಣಗಳು ಮತ್ತು ಅಂಗನವಾಡಿಯಿಂದ ಗ್ಯಾಸ್ ಸಿಲಿಂಡರ್ ಕದ್ದ ಆರೋಪ ಸಂತ್ರಸ್ತ ವ್ಯಕ್ತಿ ಮೇಲಿತ್ತು. ಈ ವ್ಯಕ್ತಿಯನ್ನು ಅವರ ಮಗ ಮತ್ತು ಇನ್ನೊಬ್ಬ ವ್ಯಕ್ತಿಯೊಂದಿಗೆ ಬಂಧಿಸಲಾಗಿತ್ತು.

# ಬಿಎಂಟಿಸಿಗೆ ಮತ್ತೊಂದು ಬಲಿ: ಬಸ್ ಹರಿದು 10 ವರ್ಷದ ಬಾಲಕಿ ಸಾವು

• **ಉದಯವಾಹಿನಿ, ಬೆಂಗಳೂರು**

ಬಿಎಂಟಿಸಿ ಬಸ್‌ಗೆ ಮತ್ತೊಂದು ಜೀವ ಬಲಿಯಾಗಿದ್ದು, 10 ವರ್ಷದ ಬಾಲಕಿ ಮೇಲೆ ಬಸ್ ಹರಿದು ಸಾವನ್ನಪ್ಪಿರುವ ಘಟನೆ ಯಲಹಂಕ ಕೋಗಿಲು ಕ್ರಾಸ್ ಬಳಿ ನಡೆದಿದೆ. ತನ್ವಿ (10) ಮೃತ ಬಾಲಕಿ. ತನ್ವಿ ಮಿಲಿಯನಿಯಂ ಸ್ಕೂಲ್‌ನಲ್ಲಿ 5 ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು. ತಾಯಿ ಹರ್ಷಿತಾ ಅವರು ಮಗಳನ್ನು ಸ್ಕೂಲ್‌ಗೆ ಬಿಡಲು ಹೋದಾಗ ದುರ್ಘಟನೆ ನಡೆದಿದೆ.


ಹರ್ಷಿತಾ ಅವರು ಮಗಳನ್ನು ಹೋಂಡಾ ಆಕ್ಟಿವಾದಲ್ಲಿ ಸ್ಕೂಲ್‌ಗೆ ಬಿಡಲು ತೆರಳಿದ್ದ ವೇಳೆ ಸ್ಕೂಟರ್ ಯಲಹಂಕದ ಕೋಗಿಲು ಮುಖ್ಯ ರಸ್ತೆ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಹತ್ತಿರ ಸ್ಕಿಡ್ ಆಗಿತ್ತು. ಈ ವೇಳೆ ಸ್ಕೂಟರ್‌ನ ಹಿಂಬದಿ ಕುಳಿತಿದ್ದ ತನ್ವಿ ಕೆಳಕ್ಕೆ ಬಿದ್ದು, ಬಸ್‌ನ ಚಕ್ರದಡಿ ಸಿಲುಕಿದ್ದಳು. ಆಕೆಯ ಮೇಲೆಯೇ ಬಿಎಂಟಿಸಿ ಬಸ್‌ನ ಚಕ್ರ ಹರಿದಿದ್ದರಿಂದ ತನ್ವಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ.

# ವಿಧಾನ ಪರಿಷತ್‌ನಲ್ಲಿ ಬಾಲ್ಯ ವಿವಾಹ, ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಪಾಸ್

• **ಉದಯವಾಹಿನಿ, ಬೆಂಗಳೂರು**

ವಿಧಾನಸಭೆಯಲ್ಲಿ ಅಂಗೀಕಾರವಾಗಿದ್ದ ಬಾಲ್ಯ ವಿವಾಹ ನಿಷೇಧ (ತಿದ್ದುಪಡಿ) ಕಾಯ್ದೆ ಹಾಗೂ ದೇವದಾಸಿ ಪದ್ಧತಿ ನಿಷೇಧ ಕಾಯ್ದೆಗೆ ವಿಧಾನ ಪರಿಷತ್‌ನಲ್ಲೂ ಗ್ರೀನ್ ಸಿಗ್ನಲ್ ಸಿಕ್ಕಿದೆ. ಇದರೊಂದಿಗೆ ಸಾಮಾಜಿಕ ಪಿಡುಗಾಗಿರುವ ಬಾಲ್ಯ ವಿವಾಹ ಹಾಗೂ ದೇವದಾಸಿ ಪದ್ಧತಿ ನಿಷೇಧಕ್ಕೆ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಂತಾಗಿದೆ.

ಮುಂಗಾರು ಅಧಿವೇಶನದ 7ನೇ ದಿನವಾದ ವಿಧಾನ ಪರಿಷತ್‌ನಲ್ಲಿ ಈ ಎರಡೂ ಕಾಯ್ದೆಗಳ ಬಗ್ಗೆ ಪಕ್ಷಾತೀತವಾಗಿ ಚರ್ಚೆ ನಡೆಸಲಾಯಿತು.



ಕರ್ನಾಟಕದಲ್ಲಿ ಬಾಲ್ಯ ವಿವಾಹ ಎಂಬುದು ಸಾಮಾಜಿಕ ಪಿಡುಗಾಗಿದ್ದು, ಯಾವುದೇ ಸರ್ಕಾರಗಳು ಬಂದರೂ, ಕಠಿಣ ಕಾನೂನು ತಂದರೂ ಇದುವರೆಗೂ ಸಂಪೂರ್ಣ ತಡೆ ಸಾಧ್ಯವಾಗಿಲ್ಲ. ಬಾಲ್ಯ ವಿವಾಹವನ್ನು ಬೇರು ಸಮೇತ ಕಿತ್ತೊಗೆಯಬೇಕು. ಇದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಬಾಲ್ಯ ವಿವಾಹ ನಿಷೇಧ (ತಿದ್ದುಪಡಿ) ಕಾಯ್ದೆಯನ್ನು ಜಾರಿಗೆ ತರಲಾಗಿದೆ.

ಹೊಸ ಕಾಯ್ದೆಯ ನಿಯಮಗಳ ಪ್ರಕಾರ, ನಿಶ್ಚಿತಾರ್ಥ ಮಾಡಿದರೂ ಕಾನೂನು ಕ್ರಮ ಕೈಗೊಳ್ಳಲಾಗುವುದು. ಬಾಲ್ಯ ವಿವಾಹ ಪ್ರಕರಣಗಳು ಕಂಡು ಬಂದರೆ ಒಂದು ಲಕ್ಷ ರೂ. ದಂಡ ಹಾಗೂ ಎರಡು ವರ್ಷ ಜೈಲು ಶಿಕ್ಷೆ ನೀಡಲಾಗುವುದು. ಜೊತೆಗೆ ಬಾಲ್ಯ ವಿವಾಹ ಮುಕ್ತ ಗ್ರಾಮ ಪಂಚಾಯಿತಿಗಳಿಗೆ 25 ಸಾವಿರ ರೂ. ಪ್ರೋತ್ಸಾಹ ಧನ ನೀಡಲು ಸರ್ಕಾರ ಚಿಂತನೆ ನಡೆಸಿದೆ. ಬಳಿಕ ಕರ್ನಾಟಕ ದೇವದಾಸಿ ಪದ್ಧತಿ ಕಾಯ್ದೆಯನ್ನು ಅಂಗೀಕರಿಸಲಾಯಿತು. ದೇವದಾಸಿ ಪದದ ನಿರ್ದಿಷ್ಟ ವ್ಯಾಖ್ಯಾನವನ್ನು ಈ ಕಾಯ್ದೆಯಲ್ಲಿ ಮಾಡಲಾಗಿದ್ದು, ಇದರಿಂದ ನೈಜ ಫಲಾನುಭವಿಯನ್ನು ಗುರುತಿಸಲು ಹಾಗೂ ಅವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಉನ್ನತಿಗೆ ನೆರವಾಗಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾಹಿತಿ ನೀಡಿದರು

# ಜನದಟ್ಟಣೆ ನಿಯಂತ್ರಣಗಾಗಿ ಆರ್‌ವಿ ನಿಲ್ದಾಣದಲ್ಲಿ ಬ್ಯಾರಿಕೇಡ್

## ಮುಂದಿನ ದಿನಗಳಲ್ಲಿ ಹಳದಿ ಮಾರ್ಗದ ಎಲ್ಲಾ ನಿಲ್ದಾಣಗಳಿಗೂ ಸ್ಕ್ರೀನ್ ಡೋರ್

• **ಉದಯವಾಹಿನಿ, ಬೆಂಗಳೂರು**

ಪ್ರಧಾನಿ ಮೋದಿ ಅವರಿಂದ ಉದ್ಘಾಟಿಸಲ್ಪಟ್ಟ ಆರ್.ವಿ.ರಸ್ತೆ -ಬೊಮ್ಮಸಂದ್ರ ಮೆಟ್ರೊ ಮಾರ್ಗದಲ್ಲಿ ಪ್ರಯಾಣಿಕರ ದಟ್ಟಣೆ ಅಕವಾಗಿದೆ. ಹೀಗಾಗಿ, ದಟ್ಟಣೆ ನಿಯಂತ್ರಿಸಲು ಹಾಗೂ ಭದ್ರತೆ ದೃಷ್ಟಿಯಿಂದ ಬಿಎಂಆರ್‌ಸಿಎಲ್ ಆರ್.ವಿ.ರಸ್ತೆ ಇಂಟರ್ ಚೇಂಜ್ ನಿಲ್ದಾಣದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿದೆ.



ಉದಯವಾಹಿನಿ ಚಿತ್ರ

ಈಗಾಗಲೇ ಅತಿ ಹೆಚ್ಚು ಜನ ದಟ್ಟಣೆ ಇರುವ ಮೆಜೆಸ್ಟಿಕ್ ನಿಲ್ದಾಣದಲ್ಲಿ ಭದ್ರತೆಗಾಗಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಹೆಚ್ಚಿನ ಜನದಟ್ಟಣೆ ಅವಯಲ್ಲಿ ಅಪಾಯ ತಪ್ಪಿಸಲು ಬಿಎಂಆರ್‌ಸಿಎಲ್ ಈ ಕ್ರಮ ಕೈಗೊಂಡಿದೆ. ಪ್ರಸ್ತುತ ಹಳದಿ ಮಾರ್ಗದ ಆರ್.ವಿ.ರಸ್ತೆ ಇಂಟರ್‌ಚೇಂಜ್ ನಿಲ್ದಾಣದ (ಹಸಿರು ಮತ್ತು ಹಳದಿ ಮಾರ್ಗದ ಬದಲಾವಣೆ)ಕ್ಕೆ ಮಾತ್ರ ಬ್ಯಾರಿಕೇಡ್ ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿಈ ಮಾರ್ಗದ ಎಲ್ಲಾ ನಿಲ್ದಾಣಗಳಿಗೆ ಪ್ಲಾಟ್‌ಫಾರ್ಮ್‌ರ್ ಸ್ಕ್ರೀನ್ ಡೋರ್ (ಪಿಎಸ್‌ಡಿ) ಅಳವಡಿಸಲು ಉದ್ದೇಶಿಸಿದೆ. ಆದರೆ, ಪಿಎಸ್‌ಡಿ ಅಳವಡಿಸುವುದಕ್ಕೆ ನಿಗಮ ಈವರೆಗೆ ಟೆಂಡರ್ ಕರೆದಿಲ್ಲ. ಬದಲಿಗೆ, ಸಿಎಸ್‌ಆರ್ ಅನುದಾನದಲ್ಲಿ ಪಿಡಿಎಸ್ ಅಳವಡಿಸಲು ಚಿಂತನೆ ನಡೆಸಿದೆ. ಮೆಟ್ರೊ ಹಳಿಗೆ ಬಿದ್ದು ಪ್ರಾಣ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ಪ್ಲಾರ್ಟ್‌ಫಾಮ್‌ಗೆ ಸ್ಕ್ರೀನ್ ಡೋರ್ ಅಳವಡಿಸಬೇಕೆನ್ನುವ ಒತ್ತಡ ಹೆಚ್ಚಾಗಿತ್ತು. ಇದರ ಬೆನ್ನಲ್ಲೇ ನಿಗಮ ಗುಲಾಬಿ ಮತ್ತು ನೀಲಿ ಮಾರ್ಗದ ನಿಲ್ದಾಣಗಳಿಗೆ ಸ್ಕ್ರೀನ್ ಡೋರ್ ಅಳವಡಿಕೆಗೆ ಮುಂದಾಗಿದೆ.

**ಗುಲಾಬಿ, ನೀಲಿ ಮಾರ್ಗದಲ್ಲಿಅಳವಡಿಕೆ:** ಗುಲಾಬಿ ಮಾರ್ಗದ (ಕಾಳೇನ ಅಗ್ರಹಾರ- ನಾಗವಾರ) 18 ನಿಲ್ದಾಣಗಳ ಪೈಕಿ 12 ಭೂಗತ ನಿಲ್ದಾಣಗಳಲ್ಲಿಪೂರ್ಣ ಪರದೆಯ ಸಿಡಿಎಸ್ ಹಾಗೂ ಉಳಿದ 6 ಎತ್ತರಿಸಿದ ನಿಲ್ದಾಣಗಳಲ್ಲಿಅರ್ಧ ಪರದೆಯ ಪ್ಲಾಟ್‌ಫಾಮ್‌ರ್ ಸ್ಕ್ರೀನ್ ಡೋರ್ ಅಳವಡಿಸಲಾಗುತ್ತದೆ. ನೀಲಿ ಮಾರ್ಗದ ರೇಷ್ಮೆ ಮಂಡಳಿಯಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ 32 ನಿಲ್ದಾಣಗಳ ಪೈಕಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (ಭೂಗತ ನಿಲ್ದಾಣ)ದಲ್ಲಿಪೂರ್ಣ ಪರದೆಯ ಸ್ಕ್ರೀನ್ ಡೋರ್, ಉಳಿದೆಡೆ ಅರ್ಧ ಪರದೆಯ ಸ್ಕ್ರೀನ್ ಡೋರ್ ಅಳವಡಿಸಲಾಗುತ್ತದೆ. ಪಿಎಸ್‌ಡಿ ಅಳವಡಿಕೆ, ರೈಲು ವ್ಯವಸ್ಥೆ ಪರೀಕ್ಷೆ, ಸುರಕ್ಷತಾ ತಪಾಸಣೆ ಮತ್ತು ಪ್ರಮಾಣೀಕರಣದಲ್ಲಿಪರಿಣತಿ ಸೇರಿದಂತೆ ಸ್ವತಂತ್ರ ಸುರಕ್ಷತಾ ಮೌಲ್ಯಮಾಪನ (ಐಎಸ್‌ಎ) ಸೇವೆಗಳ ಒಪ್ಪಂದಕ್ಕಾಗಿ ಬಿಎಂಆರ್‌ಸಿಎಲ್ ಬಿಡ್‌ಗಳನ್ನು ಆಹ್ವಾನಿಸಿತ್ತು. ಹಲವು ಸಂಸ್ಥೆಗಳು ಬಿಡ್‌ನಲ್ಲಿಭಾಗವಹಿಸಿದ್ದವು. ಅಂತಿಮವಾಗಿ ಎಂಟು ಸಂಸ್ಥೆಗಳು ತಾಂತ್ರಿಕ ಬಿಡ್‌ಗೆ ಆಯ್ಕೆಯಾಗಿವೆ.

**ವಾಣಿಜ್ಯ ಸಂಚಾರ ಇರುವಲ್ಲಿಪಿಡಿಎಸ್ ಡೌಟ್:** ಸದ್ಯ, ವಾಣಿಜ್ಯ ಸಂಚಾರ ನಡೆಸುತ್ತಿರುವ ಹಸಿರು ಮತ್ತು ನೇರಳೆ ಮಾರ್ಗದಲ್ಲಿಏಳು ಜನರು ಹಳಿಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾರೆ. ಸದ್ಯ ಕಾರ್ಯಾಚರಣೆ ನಡೆಸುತ್ತಿರುವ ನಿಲ್ದಾಣಗಳಿಗೂ ಪಿಡಿಎಸ್ ಅಳವಡಿಸಬೇಕಾದರೆ 500 ಕೋಟಿ ರೂ. ವೆಚ್ಚವಾಗುತ್ತದೆ ಎನ್ನುತ್ತಾರೆ ಬಿಎಂಆರ್‌ಸಿಎಲ್‌ನ ಅಕಾರಿಯೊಬ್ಬರು.

ರೈಲು ವಾಣಿಜ್ಯ ಸಂಚಾರ ಆರಂಭಿಸಿದ ನಂತರ ಸ್ಕ್ರೀನ್ ಡೋರ್ ಅಳವಡಿಕೆ ಸ್ವಲ್ಪ ಕಷ್ಟಸಾಧ್ಯ. ರೈಲು ಬಾಗಿಲಿನೊಂದಿಗೆ ಪರದೆಯ ಬಾಗಿಲು ಏಕಕಾಲದಲ್ಲಿ ತೆರೆಯ ಬೇಕಾಗುತ್ತದೆ. ಇದು ಕಾರ್ಯಾಚರಣೆ ಪ್ರಾರಂಭವಾದ ನಂತರ ಸ್ಥಾಪಿಸುವುದು ತುಂಬಾ ಕಷ್ಟ, ಎನ್ನುತ್ತಾರೆ ಅಕಾರಿಯೊಬ್ಬರು.

### ತೇಜಸ್ವಿ ಸೂರ್ಯ ಮನವಿ

**ಈ ನಡುವೆ, ಹಳದಿ ಮಾರ್ಗದಲ್ಲಿಪ್ರತಿ 25 ನಿಮಿಷಕ್ಕೊಮ್ಮೆ ರೈಲು ಸಂಚರಿಸುತ್ತಿರುವುದು ಆರ್.ವಿ. ರಸ್ತೆ ಇಂಟರ್‌ಚೇಂಜ್ ನಿಲ್ದಾಣದಲ್ಲಿದಟ್ಟಣೆಗೆ ಕಾರಣವಾಗಿದೆ. ಇದರಿಂದ ಸಂಭವಿಸಬಹುದಾದ ಅಪಾಯ ತಡೆಗಟ್ಟಲು ತಕ್ಷಣವೇ ಪ್ಲಾಟ್‌ಫಾಮ್‌ರ್ ಸ್ಕ್ರೀನ್ ಡೋರ್ ಅಥವಾ ಬ್ಯಾರಿಕೇಡ್‌ಗಳನ್ನು ಅಳವಡಿಸಬೇಕು, ಎಂದು ಸಂಸದ ತೇಜಸ್ವಿ ಸೂರ್ಯ ಮನವಿ ಮಾಡಿದ್ದರು.**

# ಕರ್ನಾಟಕ ಛಾಯಾಚಿತ್ರ ಗ್ರಾಹಕರ ಸಂಘದಿಂದ 186ನೇ ಛಾಯಾಗ್ರಾಹಕ ದಿನಾಚರಣೆ

• **ಉದಯವಾಹಿನಿ, ಬೆಂಗಳೂರು**




ಉದಯವಾಹಿನಿ ಚಿತ್ರ

ಕರ್ನಾಟಕ ಛಾಯಾಚಿತ್ರ ಗ್ರಾಹಕರ ಸಂಘದ ವತಿಯಿಂದ 186ನೇ ವಿಶ್ವ ಛಾಯಾಗ್ರಹಣ ದಿನಾಚರಣೆಯನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಭವನದಲ್ಲಿ ಇದೇ 19/8/2024 ರಂದು ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಚಂದನವನದ ಹೆಸರಾಂತ ನಿರ್ದೇಶಕ ಟಿ.ಎನ್. ಸೀತಾರಾಮ್ ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆಪಿಎ ರಾಜ್ಯಾಧ್ಯಕ್ಷ ಹೆಚ್.ಎಸ್. ನಾಗೇಶ್ ವಹಿಸಿದ್ದರು, ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೆಪಿಎ ಮಾಜಿ ಉಪಾಧ್ಯಕ್ಷ ದೇವರಾಜ್ ಕಾರ್ಯದರ್ಶಿ ಎ.ಎಂ. ಮುರುಳಿ, ಖಜಾಂಚಿ ಲವರಾಜ್, ಉಪಾಧ್ಯಕ್ಷರಾದ ಹೇಮರಾಜ್ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಆಸೀನರಾಗಿದ್ದರು.

ಛಾಯಾಗ್ರಹಣ ಕ್ಷೇತ್ರದಲ್ಲಿ ಸಾಧನೆ ಗೈದ ಲಕ್ಷ್ಮೀನಾರಾಯಣ್ ಭಟ್, ಉತ್ತರ ಕನ್ನಡ ಜಿಲ್ಲೆ, ಸೂರ್ಯಪ್ರಕಾಶ್ ಹಾಸನ ಜಿಲ್ಲೆ, ಎಸ್.ಪರಮೇಶ್ ಬೆಂಗಳೂರು, ಬಿ.ಎನ್. ಉಮಾಶಂಕರ್ ಬೆಂಗಳೂರು, ಗುರುಶ್ರೀ ಶ್ರೀನಿವಾಸ್ ಬೆಂಗಳೂರು, ಮಹದೇವ ಬೆಂಗಳೂರು ಈ ಆರು ಜನ ಸಾಧಕರಿಗೆ ಕೆಪಿಎ ಛಾಯಾಭೂಷಣ ಪ್ರಶಸ್ತಿ ನೀಡಲಾಯಿತು.

ಇದೇ ಸಂದರ್ಭದಲ್ಲಿ ಕೆಪಿಎ ಆಜೀವ ಸದಸ್ಯರ ಮಕ್ಕಳು SSLC, PUCಗಳಲ್ಲಿ ಹೆಚ್ಚು ಅಂಕಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಮುಖ್ಯ ಅತಿಥಿಗಳಾದ ಸೀತಾರಾಮ್ ರವರು ಛಾಯಾಗ್ರಹಣ ಕಲೆ ಒಂದು ಅಪರೂಪದ ಕಲೆ, ಛಾಯಾಗ್ರಹಣ ಎಂತಹವರನ್ನಾದರೂ ಮಂತ್ರಮುಗ್ಧರನ್ನಾಗಿಮಾಡತ್ತದೆ. ಪ್ರತೀ ಛಾಯಾಗ್ರಹಣವೂ ಅಮೂಲ್ಯವೇ, ಯಾವುದೇ ಕ್ಷಣವನ್ನು ನಾವು ಮತ್ತೆ ನೋಡಬೇಕೆಂದರೆ ಅದು ಕೇವಲ ಛಾಯಾಗ್ರಹಣದಿಂದ ಮಾತ್ರ ಸಾಧ್ಯ ಎಂದರು. ತನ್ನ ತಾಯಿಯ ಅನಾರೋಗ್ಯದ ವೇಳೆ ಅವರ ಮದುವೆಯ ಪೋಟೋ ನೋಡಿ ಅದೆಷ್ಟೋ ಸಂತೋಷಪಟ್ಟರು. ಅಂದರೆ ಅದು ಛಾಯಾಗ್ರಹಕ್ಕಿರುವ ಶಕ್ತಿ ಎಂದು ಮನದಾಳದ ಮಾತನ್ನು ಹಂಚಿಕೊಂಡರು.

ರಾಜ್ಯಾಧ್ಯಕ್ಷರು ಮಾತನಾಡಿ 186 ವರ್ಷದ ವಿಶ್ವ ಛಾಯಾಗ್ರಹಣ ಸುಸಂದರ್ಭದಲ್ಲಿ ನಾಡಿನ ಜನತೆಗೆ ಸುವರ್ಣಕಾಲ ಕಾರಣ ಇಂದು ರಾಜ್ಯದ ಛಾಯಾಗ್ರಾಹಕರನ್ನು ಕಾರ್ಮಿಕ ಇಲಾಖೆಗೆ ಸೇರಿಸುವ ಮೂಲಕ ಸಾಮಾಜಿಕ ಭದ್ರತೆ ನೀಡಿದೆ, ಇದು ಇಡೀ ದೇಶದಲ್ಲಿ ಕರ್ನಾಟಕದಲ್ಲಿ ಮಾತ್ರ ಈ ಯೋಜನೆ ಜಾರಿಯಾಗಿದೆ, ಮತ್ತೊಂದು ಮಹತ್ತರ ಕಾರ್ಯಕ್ರಮ ಕರ್ನಾಟಕ ಛಾಯಾಗ್ರಹಣ ಅಕಾಡಮಿ ಸರ್ಕಾರದಿಂದ ಸ್ಥಾಪಿಸಲು ಸರ್ಕಾರ ಮುಂದಾಗುತ್ತಿದೆ, ಇದು ರಾಜ್ಯದಲ್ಲಿ 12ನೇ ಅಕಾಡಮಿಯಾಗಿ ಛಾಯಾಗ್ರಹಣ ಅಕಾಡಮಿ ಬರುತ್ತಿದೆ, ಇದು ನಮ್ಮೆಲ್ಲರ ಬಹು ವರ್ಷಗಳ ಹೋರಾಟದ ಪ್ರತಿಫಲ ಎಂದು ನಾವುಗಳ ಭಾವಿಸುತ್ತಿದ್ದೇವೆ.

ಕಾರ್ಯಕ್ರಮದಲ್ಲಿ ಆಸೀನರಿದ್ದ ಸರ್ವರನ್ನೂ ಕೆಪಿಎ ಕಾರ್ಯದರ್ಶಿ ಎ.ಎಂ ಮುರುಳಿ ಅಭಿನಂದಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಡಾ. ರಶ್ಮಿ ಚಂದ್ರಶೇಖರ್, ಮನೋ ವಿಜ್ಞಾನದ ಸಹ ಪ್ರಾಧ್ಯಾಪಕರು, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಂಗಳೂರು ಇವರು ನಡೆಸಿಕೊಟ್ಟರು.

# ರಸ್ತೆ ಕಾಮಗಾರಿಯಿಂದ ವ್ಯಾಪಾರಕ್ಕೆ ಹೊಡೆತ ಸರ್ಕಾರಕ್ಕೆ ಹೋಟೆಲ್ ಮಾಲೀಕರ ಪತ್ರ

• **ಉದಯವಾಹಿನಿ, ಬೆಂಗಳೂರು**

ನಗರದಾದ್ಯಂತ ರಸ್ತೆ ದುರಸ್ತಿ ಕಾರ್ಯ ವಿಳಂಬವಾಗುತ್ತಿದ್ದು, ಇದರಿಂದ ಹೋಟೆಲ್, ಬಾರ್, ರೆಸ್ಟೋರೆಂಟ್‌ಗಳ ಆದಾಯ ಶೇ. 50 ರಷ್ಟು ಕಡಿಮೆಯಾಗಿದೆ ಎಂದು ಬೆಂಗಳೂರು ಹೋಟೆಲ್‌ಗಳ ಸಂಘವು ರಾಜ್ಯ ಸರ್ಕಾರಕ್ಕೆ ಬರೆದು ಅಸಮಾಧಾನ ವ್ಯಕ್ತಪಡಿಸಿದೆ. ನಗರದ ಹೋಟೆಲ್ ಮಾಲೀಕರು ಡಿಕೆಶಿ ಅವರಿಗೆ ಪತ್ರ ಬರೆದಿದ್ದು, ಆದಷ್ಟು ಬೇಗ ಕಾಮಗಾರಿ ಕಾರ್ಯಗಳು ಪೂರ್ಣಗೊಳಿಸುವಂತೆ ಒತ್ತಾಯಿಸಿದ್ದಾರೆ.

**ನಮ್ಮ ವ್ಯವಹಾರದಲ್ಲಿ ತೀವ್ರ ಕುಸಿತ ಕಂಡು ಬಂದಿದೆ, ಇದು ನಮ್ಮ ಆದಾಯವನ್ನು ಸುಮಾರು ಶೇಕಡಾ 50 ರಷ್ಟು ಕಡಿಮೆ ಮಾಡಿದೆ. ಇದಲ್ಲದೆ, ಈ ರಸ್ತೆಗಳಲ್ಲಿ ನಡೆಯುವವರು, ವಿಶೇಷವಾಗಿ ಹಿರಿಯ ನಾಗರಿಕರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ ನಾವು ಉಪಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದು, ಕೆಲಸವನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ವಿನಂತಿಸಿದ್ದೇವೆಂದು ತಿಳಿಸಿದ್ದಾರೆ.**

ಸೀತಾ ಸರ್ಕಲ್ ರಸ್ತೆ, ಡಾ. ರಾಜ್‌ಕುಮಾರ್ ರಸ್ತೆ, ಮಸೀದಿ ರಸ್ತೆ, ಪ್ಲಾಟ್‌ಫಾರ್ಮ್ ರಸ್ತೆ ಮಿಷನ್ ರಸ್ತೆಯ ಕಾಮಗಾರಿಯನ್ನು ಉಲ್ಲೇಖಿಸಿರುವ ಹೋಟೆಲ್‌ಗಳ ಮಾಲೀಕರು, ಗಡುವಿನೊಳಗೆ ಕೆಲಸ ಪೂರ್ಣಗೊಳ್ಳದಿದ್ದರೆ ಆಸ್ತಿ ತೆರಿಗೆ, ಕಸ ತೆರಿಗೆ, ವಿದ್ಯುತ್ ಸ್ಥಿರ ಶುಲ್ಕಗಳು, ಅಬಕಾರಿ ಶುಲ್ಕ ಮತ್ತು ಇತರ ಪರವಾನಗಿ ಶುಲ್ಕವನ್ನು ಕನಿಷ್ಠ ಶೇ. 50 ರಷ್ಟು ಕಡಿಮೆ ಮಾಡಿ,. ವ್ಯಾಪಾರಿಗಳ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.



ಸಂಘದ ಗೌರವಾಧ್ಯಕ್ಷ ಪಿ.ಸಿ. ರಾವ್ ಅವರು ಮಾತನಾಡಿ, ಯಾವುದೇ ರಸ್ತೆ ಕಾಮಗಾರಿಯೂ ಗಡುವಿಗೂ ಮುನ್ನ ಪೂರ್ಣಗೊಳ್ಳುತ್ತಿಲ್ಲ. ಮೂರು ತಿಂಗಳಲ್ಲಿ ಮುಗಿಯಬೇಕಿದ್ದ ಕೆಲಸವು ಒಂದು ವರ್ಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದೆ. ಇದು ಹೋಟೆಲ್, ಬೇಕರಿ, ಸಿಹಿತಿಂಡಿ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ಮಾತ್ರವಲ್ಲದೆ ಇತರೆ ವ್ಯವಹಾರ ನಡೆಸುತ್ತಿರುವವರ ಮೇಲೂ ಪರಿಣಾಮ ಬೀರಿದೆ ಎಂದು ಹೇಳಿದ್ದಾರೆ.

# ಬೈಕ್ ಟ್ಯಾಕ್ಸಿ ಪುನರಾರಂಭ

• **ಉದಯವಾಹಿನಿ, ಬೆಂಗಳೂರು**

ರಾಜಧಾನಿ ಬೆಂಗಳೂರು ಜನರಿಗೆ ಗುಡ್‌ನ್ಯೂಸ್. ನಗರದಲ್ಲಿ ಗುರುವಾರದಿಂದ (ಆಗಸ್ಟ್ 21) ಮತ್ತೆ ಬೈಕ್ ಟ್ಯಾಕ್ಸಿ ಸೇವೆಗಳು ಪುನಾರಂಭವಾಗಿವೆ.

ಈ ಮೂಲಕ ಆಟೋ, ಕಾರ್ ಟ್ಯಾಕ್ಸಿಗೆ ದುಬಾರಿ ದರ ನೀಡುತ್ತಿದ್ದವರಿಗೆ ತುಸು ಸಮಾಧಾನವಾಗಲಿದೆ. ಸುರಕ್ಷತೆಯ ಕಾರಣಕ್ಕೆ ಜೂನ್ 16 ರಿಂದ ರಾಜ್ಯ ಸರ್ಕಾರವು ಬೈಕ್ ಟ್ಯಾಕ್ಸಿಗಳ ಮೇಲೆ ನಿಷೇಧ ಹೇರಿತ್ತು. ಆ ಬಳಿಕ ಎಲ್ಲಾ ಬೈಕ್ ಟ್ಯಾಕ್ಸಿಗಳು ಸೇವೆ ಸ್ಥಗಿತಗೊಳಿಸಿದ್ದವು. ಆ ಸಂದರ್ಭದಲ್ಲಿ ಅನಧಿಕೃತವಾಗಿ ಸಂಚರಿಸಿದ ಬೈಕ್ ಟ್ಯಾಕ್ಸಿಗಳ ಮೇಲೆ ಆರ್‌ಟಿಓ ಅಧಿಕಾರಿಗಳು ಕ್ರಮಕ್ಕೆಗೊಂಡಿದ್ದರು. ಭಾರಿ ದಂಡ ವಿಧಿಸಿದ್ದರಿಂದ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಆ್ಯಪ್ ಆಧಾರಿತ ಸೇವೆ ಒದಗಿಸುವ ಕಂಪನಿಗಳಿಗೆ ಸೂಚಿಸಲಾಗಿತ್ತು.




ಉದಯವಾಹಿನಿ ಚಿತ್ರ

ಈ ಬೆನ್ನಲ್ಲೆ ಬೈಕ್ ಟ್ಯಾಕ್ಸಿ ಕಾರ್ಯಾಚರಣೆಗಳ ಮೇಲಿನ ಸಂಪೂರ್ಣ ನಿಷೇಧವನ್ನು ಪ್ರಶ್ನಿಸಿ ಆಯಪ್ ಆಧಾರಿತ ಸೇವೆ ಒದಗಿಸುವ ಕಂಪನಿಗಳು ಕರ್ನಾಟಕ ಹೈಕೋರ್ಟ್ ಅನ್ನು ಸಹ ಸಂಪರ್ಕಿಸಿದ್ದವು. ಸದ್ಯ ಹೈಕೋರ್ಟ್ ಸೆಪ್ಟೆಂಬರ್ 22 ರವರೆಗೆ ವಿಚಾರಣೆಯನ್ನು ಮುಂದೂಡಿದೆ. ಈ ವಿಷಯವು ಲಕ್ಷಾಂತರ ಜನರ ಜೀವನದ ಮೇಲೆ ಪರಿಣಾಮ ಬೀರುವುದರಿಂದ ಗಂಭೀರವಾಗಿ ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ಸೂಚಿಸಿದೆ. ಈ ನಡುವೆ ಗುರುವಾರದಿಂದ ಮತ್ತೆ ಬೈಕ್ ಟ್ಯಾಕ್ಸಿ ಸೇವೆಗಳು ಪ್ರಾರಂಭವಾಗಿವೆ. ಆದರೆ, ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಊಬರ್, ರ್ಯಾಪಿಡೋ ಲಭ್ಯವಾಗಿಲ್ಲ. ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ಈ ಬಗ್ಗೆ ಮಾತನಾಡಿ, ಬುಧವಾರ ಕರ್ನಾಟಕ ಹೈಕೋರ್ಟ್ ಒಂದು ತಿಂಗಳ ಕಾಲ ವಿಚಾರಣೆಯನ್ನು ಮುಂದೂಡಿದೆ. ಬೇರೆ ರಾಜ್ಯಗಳಲ್ಲಿ ಬೈಕ್ ಟ್ಯಾಕ್ಸಿಗಳು ಕಾರ್ಯನಿರ್ವಹಿಸುತ್ತಿವೆ. ಹೀಗಾಗಿ, ರಾಜ್ಯ ಸರ್ಕಾರವು ತನ್ನ ನೀತಿ ಚೌಕಟ್ಟನ್ನು ಸ್ಪಷ್ಟಪಡಿಸಬೇಕು ಎಂದು ಹೇಳಿದೆ.

### 1.2 ಲಕ್ಷ ಬೈಕ್‌ಗಳು ನೋಂದಣಿ

**ಬೆಂಗಳೂರು ನಗರದಲ್ಲಿ ಸುಮಾರು 1.20 ಲಕ್ಷ ಖಾಸಗಿ ಬೈಕ್‌ಗಳು ಆ್ಯಪ್ ಆಧಾರಿತ ಸೇವೆ ಒದಗಿಸುವ ಕಂಪನಿಗಳೊಂದಿಗೆ ನೋಂದಾಯಿಸಿಕೊಂಡಿದ್ದವು. ರಾಜ್ಯದಲ್ಲಿ ಆರು ಲಕ್ಷ ಜನರು ಬೈಕ್ ಟ್ಯಾಕ್ಸಿಗಳನ್ನೇ ತಮ್ಮ ಜೀವನೋಪಾಯಕ್ಕೆ ನೆಚ್ಚಿಕೊಂಡಿದ್ದಾರೆ. ಬ್ಯಾನ್‌ನಿಂದ ಅವರಿಗೆಲ್ಲಾ ಸಮಸ್ಯೆಯಾಗಿತ್ತು.**

# ಬಸವನ ಬಾಗೇವಾಡಿಯಲ್ಲಿ ಸೆ.1ರಂದು ಅಭಿಯಾನಕ್ಕೆ ಚಾಲನೆ

• **ಉದಯವಾಹಿನಿ, ಬೆಂಗಳೂರು**

ಲಿಂಗಾಯತ ಮಠಾಧೀಶರ ಒಕ್ಕೂಟವು ಸೆ.1ರಿಂದ ಅ.1ರವರೆಗೆ ರಾಜ್ಯದಲ್ಲಿ ಆಯೋಜಿಸಿರುವ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭವು ಅ.5ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿದೆ.ಅಭಿಯಾನ ಮತ್ತು ಸಮಾರೋಪದ ರೂಪುರೇಷೆ ಕುರಿತು ಒಕ್ಕೂಟದ ಹಲವು ಸ್ವಾಮೀಜಿಗಳು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಬಳಿಕ ಮಾತನಾಡಿದ ಸಚಿವರು, ಬಸವಣ್ಣನ ಹುಟ್ಟೂರಾದ ಬಸವನ ಬಾಗೇವಾಡಿಯಲ್ಲಿ ಸೆ.1ರಂದು ಅಭಿಯಾನಕ್ಕೆ ಚಾಲನೆ ನೀಡಲಾಗುವುದು. ಈ ಅಭಿಯಾನದ ಅಂಗವಾಗಿ ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಕಾರ್ಯಕ್ರಮಗಳು ನಡೆಯಲಿವೆ. ಸಮಾರೋಪ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

ಸಭೆಯಲ್ಲಿ ಗದಗಿನ ತೋಂಟದಾರ್ಯ ಸಂಸ್ಥಾನ ಮಠದ ಸಿದ್ದರಾಮ ಸ್ವಾಮೀಜಿ, ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭಾಲ್ಕಿಯ ಹಿರೇಮಠ ಸಂಸ್ಥಾನದ ಬಸವಲಿಂಗ ಪಟ್ಟದ್ದೇವರು, ನಾಗನೂರು ರುದ್ರಾಕ್ಷಿ ಮಠದ ಅಲ್ಲಮ ಪ್ರಭು ಸ್ವಾಮೀಜಿ, ಬಸವ ಧರ್ಮ ಪೀಠದ ಬಸವ ಯೋಗಿ ಸ್ವಾಮೀಜಿ ಉಪಸ್ಥಿತರಿದ್ದರು. ನಿವೃತ್ತ ಐಎಎಸ್ ಅಧಿಕಾರಿಗಳಾದ ಎಸ್. ಎಂ.ಜಾಮದಾರ್, ಡಾ.ಸಿ.ಸೋಮಶೇಖರ್ ಸಭೆಯಲ್ಲಿ ಇದ್ದರು.

# ವಿಧಾನಸಭೆಯಲ್ಲಿ ಸರ್ಕಾರ-ವಿಪಕ್ಷಗಳ ನಡುವೆ ಜಟಾಪಟಿ

• **ಉದಯವಾಹಿನಿ, ಬೆಂಗಳೂರು**

ಗಣೇಶ ಚತುರ್ಥಿ ಸೇರಿದಂತೆ ಇತರೆ ಹಬ್ಬಗಳ ಸಂದರ್ಭದಲ್ಲಿ ಬಳಕೆ ಮಾಡುವ ಧ್ವನಿವರ್ಧಕಗಳ ಮೇಲೆ ನಿರ್ಬಂಧ ಹೇರಲಾಗಿದ್ದು, ಈ ಸಂಬಂಧ ರಾಜ್ಯ ಸರ್ಕಾರ ಹಾಗೂ ವಿಪಕ್ಷಗಳ ನಡುವೆ ವಾಕ್ಸಮರ ನಡೆದಿದೆ. ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾವಿಸಿದ ಬಿಜೆಪಿಯ ವೇದವ್ಯಾಸ ಕಾಮತ್ ಅವರು, ಹಬ್ಬಗಳ ಆಚರಣೆಯ ವೇಳೆ ನಿರ್ಬಂಧಗಳನ್ನು ವಿಧಿಸುವ ಮೂಲಕ ಪೊಲೀಸರು ಜನರಿಗೆ ಕಿರುಕುಳ ನೀಡುತ್ತಾರೆಂದು ಆರೋಪಿಸಿದರು.

ದಕ್ಷಿಣ ಕನ್ನಡದಲ್ಲಿ ಜಿಲ್ಲೆಯಲ್ಲಿ ಹಲವಾರು ಧಾರ್ಮಿಕ ಆಚರಣೆಗಳಿವೆ. ನೇಮ, ಕೋಲ, ಯಕ್ಷೋತ್ಸವ, ಬ್ರಹ್ಮಕಲಶೋತ್ಸವ, ರಥೋತ್ಸವ, ಕೃಷ್ಣಾಜನ್ಮಾಷ್ಟಮಿ, ಗಣೇಶೋತ್ಸವ, ನವರಾತ್ರಿ, ಹುಲಿವೇಷ ಎಲ್ಲವೂ ನಡೆಯುತ್ತಿರುತ್ತವೆ. ಇತ್ತೀಚೆಗೆ ಕೃಷ್ಣಜನ್ಮಾಷ್ಟಮಿ ಪ್ರಯುಕ್ತ ಮೊಸರು ಕುಡಿಕೆ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ಅಲ್ಲಿದ್ದ ಧ್ವನಿವರ್ಧಕಗಳ ಬಳಕೆಗೆ ನಿರ್ಬಂಧ ವಿಧಿಸಿ, ಮೊಸರು ಕುಡಿಕೆ ಒಡೆಯುವುದಕ್ಕೂ ಪೊಲೀಸರು ಅಡ್ಡಿಪಡಿಸಿದ್ದಾರೆ. ಕೇಳಿದರೆ ನ್ಯಾಯಾಲಯದ ಆದೇಶ ಇದೆ ಎನ್ನುತ್ತಾರೆ. ಧ್ವನಿವರ್ಧಕಗಳನ್ನು ವಶಪಡಿಸಿಕೊಂಡು, ಅವುಗಳನ್ನು ಒದಗಿಸಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿದ್ದಾರೆಂದು ಹೇಳಿದರು. ನಮ್ಮ ಸರಕಾರ ಇದ್ದಾಗಲೂ ನ್ಯಾಯಾಲಯದ ಆದೇಶಗಳಿದ್ದವು.

ಆದರೆ, ನಾವು ಜನರಿಗೆ ತೊಂದರೆ ಮಾಡಿರಲಿಲ್ಲ. ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಹಿಂದೂ ಕಾರ್ಯಕ್ರಮಗಳಿಗೆ ತೊಂದರೆ ಆಗುತ್ತಿದೆ. ಮುಂದೆ ಗಣೇಶೋತ್ಸವ, ನವರಾತ್ರಿ ಉತ್ಸವಗಳು ಬರಲಿವೆ. ಕಾನೂನು ಏನೇ ಇರಬಹುದು, ಧಾರ್ಮಿಕ ನಂಬಿಕೆಯ ನಮ್ಮ ಕಾರ್ಯಕ್ರಮಗಳಿಗೆ ತೊಂದರೆ ಮಾಡಬಾರದು. ಈ ಸಮಸ್ಯೆಗೆ ರಾಜ್ಯ ಸರ್ಕಾರ, ಕಾಂಗ್ರೆಸ್ ಹೊಣೆ ಆಗಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಗಣೇಶ ಮಾರ್ಗಸೂಚಿ ಪಾಲಿಸದಿದ್ದರೆ ಕ್ರಿಮಿನಲ್ ಪ್ರಕರಣ ದಾಖಲು

## ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿ ನಿಷೇಧ ಸೇರಿ ಕೆಲವು ಮಾರ್ಗಸೂಚಿ ಬಿಡುಗಡೆ

• **ಉದಯವಾಹಿನಿ, ಬೆಂಗಳೂರು**

ನಗರದಲ್ಲಿಗಣೇಶ ಚತುರ್ಥಿ ಆಚರಣೆ ಸಂದರ್ಭದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಬಳಕೆ ನಿಷೇಧಿಸಲಾಗಿದ್ದು, ಪರಿಸರ ಸ್ನೇಹಿ ಗಣೇಶೋತ್ಸವ ಆಚರಣೆಗೆ ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಬಿಬಿಎಂಪಿ ತೀರ್ಮಾನಿಸಿದೆ. ಇತ್ತೀಚೆಗೆ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಈ ತೀರ್ಮಾನ ಕೈಗೊಂಡಿದೆ.

ಹಬ್ಬದ ಆಚರಣೆ ವೇಳೆ ಸಾರ್ವಜನಿಕವಾಗಿ ಮೂರ್ತಿ ಪ್ರತಿಷ್ಠಾಪನೆ ಮಾಡಲಿಚ್ಛಿಸುವ ಸಂಘ-ಸಂಸ್ಥೆಗಳು ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಇದಕ್ಕೆ ಉಪ ವಿಭಾಗದ ಮಟ್ಟದಲ್ಲಿನೋಡಲ್ ಅಧಿಕಾರಿಗಳಾಗಿ ನೇಮಕಗೊಂಡ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳ ಕಚೇರಿಯಲ್ಲಿ ಅರ್ಜಿ ಸಲ್ಲಿಸಬೇಕು. ಅನುಮತಿ ಪಡೆಯದೇ ಪ್ರತಿಷ್ಠಾಪನೆ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಎಚ್ಚರಿಸಿದ್ದಾರೆ. ಮತ್ತೊಂದೆಡೆ, ಪ್ಲಾಸ್ಟರ್ ಆಫ್ ಪ್ಯಾರಿಸ್ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಬಾರದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಕೂಡ ಜನರಲ್ಲಿ ಮನವಿ ಮಾಡಿದ್ದಾರೆ.

ಈಗಾಗಲೇ ನಿಷೇಧಿಸಲ್ಪಟ್ಟ ರಾಸಾಯನಿಕ ಬಣ್ಣಗಳು, ಥರ್ಮಾಕೋಲ್ ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್ ವಸ್ತುಗಳನ್ನು ಬಳಸಿ ತಯಾರಿಸುವ ಮತ್ತು ಮಾರಾಟ ಮಾಡುವ ಪ್ರದೇಶಗಳಿಗೆ ಉಪ ವಿಭಾಗದ ನೋಡಲ್ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಬೇಕು. ಅಂತಹ ಪ್ರಕರಣಗಳು ಕಂಡು ಬಂದರೆ ವಲಯ ಆಯುಕ್ತರ ಮೇಲ್ವಿಚಾರಣೆಯಲ್ಲಿ ದಂಡ ವಿಧಿಸಿ, ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವಂತೆ ನಿರ್ದೇಶನ ನೀಡಿದ್ದಾರೆ.



ಉದಯವಾಹಿನಿ ಚಿತ್ರ

### 2025ರ ಗಣೇಶೋತ್ಸವಕ್ಕಾಗಿ ಬಿಬಿಎಂಪಿ ರೂಲ್ಸ್ ಯಾವುವು?

- ಸಾರ್ವಜನಿಕರು ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ತಮ್ಮ ಮನೆಗಳಲ್ಲಿಬಕೆಟ್ ನೀರಿನಲ್ಲಿವಿಸರ್ಜಿಸಿ, ಮಣ್ಣನ್ನು ಕೈತೋಟ, ಹೂವಿನ ಕುಂಡಗಳಿಗೆ ಬಳಕೆ ಮಾಡುವ ಬಗ್ಗೆ ಅರಿವು ಮೂಡಿಸುವುದು.
- ದೊಡ್ಡ ಗಾತ್ರದ ಮೂರ್ತಿಗಳ ವಿಸರ್ಜನೆಗೆ ಸ್ಥಳಗಳನ್ನು ಗುರುತಿಸಿ, ಸಾರ್ವಜನಿಕರಿಗೆ ಪ್ರಚುರಪಡಿಸುವುದು. ಅಗತ್ಯವಿರುವಲ್ಲಿಸಂಚಾರಿ ವಾಹನಗಳ ಮೂಲಕ ವಿಸರ್ಜನೆಗೆ ಕ್ರಮ ಕೈಗೊಳ್ಳುವುದು.
- ಪ್ರತಿ ವಲಯಕ್ಕೆ ಒಬ್ಬೊಬ್ಬ ಮೇಲುಸ್ತುವಾರಿ ಅಧಿಕಾರಿ, ವಾರ್ಡ್‌ಗೆ ಒಬ್ಬರಂತೆ ನೋಡಲ್ ಅಧಿಕಾರಿ ನೇಮಿಸಲು ವಲಯ ಆಯುಕ್ತರು ಕ್ರಮ ವಹಿಸುವುದು.
- ನಿಷೇಧಿತ ಪ್ಲಾಸ್ಟಿಕ್ ಮಾರಾಟ ಮತ್ತು ಬಳಕೆ ಕಂಡು ಬಂದರೆ ನಿಯಮಾನುಸಾರ ದಂಡ ವಿಧಿಸಿ, ಕ್ರಮ ಕೈಗೊಳ್ಳುವುದು.
- ಬಿಬಿಎಂಪಿ, ಪೊಲೀಸ್, ಅಗ್ನಿಶಾಮಕ, ಬೆಸ್ಕಾಂ ಹಾಗೂ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಷರತ್ತುಗೊಳಪಡಿಸಿ, ಹಬ್ಬದ ಆಚರಣೆಗೆ ಅನುಮತಿ ನೀಡುವುದು.

**ಗಣೇಶ ಮೂರ್ತಿ ವಿಸರ್ಜನೆಯಿಂದ ಪಾಲಿಕೆ ವ್ಯಾಪ್ತಿಯ ಕೆರೆಗಳಲ್ಲಿ ಉಂಟಾಗುವ ಮಾಲಿನ್ಯ ತಡೆಗಟ್ಟಲು ತಾತ್ಕಾಲಿಕ ವಿಸರ್ಜನಾ ಸ್ಥಳಗಳನ್ನು ನಿರ್ಮಿಸುವುದು. ವಿಸರ್ಜನೆಯಿಂದ ಬರುವ ಮಣ್ಣು ಸೇರಿದಂತೆ ಇತರೆ ವಸ್ತುಗಳನ್ನು ವಿಂಗಡಿಸಿ ಸಂಸ್ಕರಣಾ ಘಟಕಗಳಿಗೆ ರವಾನಿಸುವುದು. ಸಾರ್ವಜನಿಕರ ಸುರಕ್ಷತೆಗಾಗಿ ವಿಸರ್ಜನೆಗೆ ಪ್ರತ್ಯೇಕ ತಂಡಗಳನ್ನು ನೇಮಿಸುವುದು. ಸ್ಥಳದಲ್ಲಿಕಿಯಾಸ್ಕ್, ಆಂಬ್ಯುಲೆನ್ಸ್, ವೈದ್ಯರು ಮತ್ತು ಶುಶ್ರೂಷಕಿಯರನ್ನು ಸಿದ್ಧವಿರುವಂತೆ ಕ್ರಮ ವಹಿಸುವುದು. ಬೆಳಕಿನ ವ್ಯವಸ್ಥೆ, ಬ್ಯಾರಿಕೇಡ್ ನಿರ್ಮಾಣ, ಧ್ವನಿವರ್ಧಕ, ನುರಿತ ಈಜುಗಾರರನ್ನು ಒಳಗೊಂಡ ಎನ್‌ಡಿಆರ್‌ಎಫ್ ತಂಡವನ್ನು ಸ್ಥಳದಲ್ಲಿ ಹಾಜರಿರುವಂತೆ ನೋಡಿಕೊಳ್ಳಲಾಗುವುದು, ಎಂದು ತಿಳಿಸಿದ್ದಾರೆ.**

# ನನ್ನ ಗಂಡ ನೂರಾರು ಅನಾಥ ಶವ ಹೂತಿಲ್ಲ: ಮಾಸ್ಕ್ ಮ್ಯಾನ್ ಪತ್ನಿ

## ಆಕೆ ಮಾಸ್ಕ್ ಮ್ಯಾನ್ ವಿರುದ್ಧ ಆರೋಪ ಮಾಡುತ್ತಿದ್ದು, ಧರ್ಮಸ್ಥಳದಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದಾಗ ಆತನನ್ನು ತೊರೆದಿದ್ದಾರೆ

• **ಉದಯವಾಹಿನಿ, ಮಂಡ್ಯ**

ಧರ್ಮಸ್ಥಳದಲ್ಲಿ ನೂರಾರು ಅನಾಥ ಶವಗಳನ್ನು ಹೂತುಹಾಕಿದ್ದಾಗಿ ಹೇಳಿರುವ ಮಾಸ್ಕ್ ಮ್ಯಾನ್ ಬಗ್ಗೆ ಆತನ ಮೊದಲ ಪತ್ನಿ ಹೇಳಿಕೆ ನೀಡಿದ್ದಾರೆ. ನಾವು ಮದುವೆಯಾದ ಮೇಲೆ ಧರ್ಮಸ್ಥಳದಲ್ಲಿ ನೆಲೆಸಿದ್ದು ನಿಜ. ಆದರೆ, ಅವರು ನೂರಾರು ಅನಾಥ ಶವಗಳನ್ನು ಹೂಳಿಲ್ಲ. ಬಹುಶಃ ಹಣಕ್ಕಾಗಿ ಅವರು ಹೀಗೆ ಹೇಳುತ್ತಿರಬಹುದು ಎಂದು ಹೇಳಿದ್ದಾರೆ. ಇದು ಧರ್ಮಸ್ಥಳದ ಮೇಲೆ ಆಪಾದನೆ ಮಾಡಿರುವ ಆ ಮುಸುಕು ಮನುಷ್ಯನ ಬಗ್ಗೆ ಮತ್ತಷ್ಟು ಅನುಮಾನಗಳನ್ನು ಹುಟ್ಟುಹಾಕಿವೆ. ಮಾಧ್ಯಮಗಳ ಬಳಿ ಹೇಳಿಕೆ ನೀಡಿರುವ ಅವರು, ನಾನು ಅವರನ್ನು ಮದುವೆಯಾದ ಸಂದರ್ಭದಲ್ಲಿ ಅವರು ಮಂಡ್ಯದ ಗ್ರಾಮದಲ್ಲೇ ಇದ್ದರು. ಆನಂತರ ಅವರಿಗೆ ಧರ್ಮಸ್ಥಳದಲ್ಲಿ ಕೆಲಸ ಸಿಕ್ಕಿತ್ತು. ದೇವಸ್ಥಾನದಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ಮದುವೆಯಾದ ನಂತರ ನಾವು ಧರ್ಮಸ್ಥಳದಲ್ಲೇ ಏಳು ವರ್ಷ ಜೀವನ ನಡೆಸಿದ್ದೆವು ಎಂದು ಅವರು ಹೇಳಿದ್ದಾರೆ. ಧರ್ಮಸ್ಥಳದಲ್ಲಿ ಇದ್ದಾಗ ನೂರಾರು ಅನಾಥ ಶವಗಳನ್ನು ಹೂತಿರುವುದಾಗಿ ಹೇಳಿರೋದೆಲ್ಲಾ ಸುಳ್ಳು. ಅವರು ಹಾಗೆಲ್ಲಾ ಮಾಡಿಲ್ಲ ಎಂದು ಹೇಳಿರುವ ಅವರು,. ಅಲ್ಲದೆ, ಧರ್ಮಸ್ಥಳದ ಧರ್ಮಾಧಿಕಾರಿಯವರಾದ ವೀರೇಂದ್ರ ಹೆಗ್ಗಡೆಯವರು ತುಂಬಾ ಒಳ್ಳೆಯವರು. ಧರ್ಮಸ್ಥಳದ ವಿರುದ್ಧ ಬಹುಶಃ ಆತ ಹಣಕ್ಕಾಗಿ ಇಂಥ ಹೇಳಿಕೆಗಳನ್ನು ನೀಡಿರಬಹುದು ಎಂದು ಆಕೆ ಶಂಕೆ ವ್ಯಕ್ತಪಡಿಸಿದ್ದಾರೆ. ಇನ್ನು, ತಾವು ಮಾಸ್ಕ್ ಮ್ಯಾನ್ ನನ್ನು


ಉದಯವಾಹಿನಿ ಚಿತ್ರ

**ಶೋಧ ಕಾರ್ಯ ಸ್ಥಗಿತ**

ತೊರೆದಿದ್ದಕ್ಕೆ ಕಾರಣವನ್ನು ಹೇಳಿರುವ ಅವರು, ಆತ ಒಬ್ಬ ದುರಹಂಕಾರಿ. ಯಾರ ಬಗ್ಗೆಯೂ ಒಂದು ಸೌಜನ್ಯದ ಮಾತುಗಳನ್ನಾಡುತ್ತಿರಲಿಲ್ಲ. ತನ್ನ ಸಹೋದರರನ್ನೇ ಬಾಯಿಗೆ ಬಂದ ಹಾಗೆ ಬೈಯ್ಯುತ್ತಿದ್ದ. ಅಷ್ಟೇ ಅಲ್ಲ, ಆತ ಒಬ್ಬ ಸುಳ್ಳುಗಾರ, ಮೋಸಗಾರ. ಅದಕ್ಕಾಗಿಯೇ ಆತನನ್ನು ಬಿಟ್ಟೆ. ಆತನನ್ನು ಬಿಟ್ಟಿದ್ದು ಒಳ್ಳೆಯದೇ ಆಯಿತು ಎಂದು ಅವರು ತಿಳಿಸಿದ್ದಾರೆ. ನನ್ನ ಜೊತೆ ಸಂಸಾರ ಮಾಡುವಾಗಲೇ ಆತ ಗೊತ್ತಿಲ್ಲದೆ ಎರಡನೇ ಸಂಬಂಧ ಇಟ್ಟುಕೊಂಡಿದ್ದ. ಆಕೆಯನ್ನು ಪತ್ನಿಯಾಗಿ ಸ್ವೀಕರಿಸಲು ತನಗೆ ಅವಕಾಶ ಕೊಡಬೇಕೆಂದು ನನಗೆ ಚಿತ್ರ ಹಿಂಸೆ ಮಾಡುತ್ತಿದ್ದ. ಅದಕ್ಕಾಗಿ ಆತನನ್ನು ನಾನು ಬಿಟ್ಟುಬಿಟ್ಟೆ ಎಂದು ಮೊದಲ ಪತ್ನಿ ತಿಳಿಸಿದ್ದಾರೆ. ನಮ್ಮ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತು. ನ್ಯಾಯಾಲಯದಲ್ಲಿ ಪತ್ನಿಯನ್ನು ಬಿಟ್ಟರೆ ಜೀವನಾಂಶ ಕೊಡಬೇಕಾಗುತ್ತದೆ ಎಂದು ನ್ಯಾಯಾಧೀಶರು ಹೇಳಿದಾಗ, ತನಗೆ ಕೆಲವೇ ಇಲ್ಲ ಎಂದು ನ್ಯಾಯಾಲಯಕ್ಕೆ ಸುಳ್ಳು ಹೇಳಿದ್ದ ಎಂದು ಅವರು ತಿಳಿಸಿದ್ದಾರೆ.

**ಗ್ರಾಮಸ್ಥರು ಹೇಳಿದ್ದೇನು?:** ಮುಸುಕುಧಾರಿ ಮನುಷ್ಯ ಮಂಡ್ಯದ ಗ್ರಾಮವೊಂದರಲ್ಲೇ ಹುಟ್ಟಿ ಬೆಳೆದಾತ ಎಂದು ಅಲ್ಲಿನ ಗ್ರಾಮಸ್ಥರು ಹೇಳಿದ್ದಾರೆ. ಗ್ರಾಮಸ್ಥರ ಜೊತೆಗೆ ಜಗಳವಾಡುತ್ತಿದ್ದ. ಏನೂ ಕೆಲಸವಿಲ್ಲದೆ ಸುಮ್ಮನೇ ಅಲೆಯುತ್ತಿದ್ದ. ಚಿಕ್ಕ ವಯಸ್ಸಿಗೇ ಮದುವೆಯಾಗಿದ್ದ ಆತನನ್ನು ಆತನ ಅಣ್ಣನೇ ಕರೆದುಕೊಂಡು ಹೋಗಿ ಧರ್ಮಸ್ಥಳದಲ್ಲಿ ಸ್ವಚ್ಛತಾ ಕೆಲಸ ಕೊಡಿಸಿದ್ದ ಎಂದಿದ್ದಾರೆ. ಆತನಿಗೆ 4 ಮಂದಿ ಸಹೋದರರು ಇದ್ದು ಅವರಲ್ಲೊಬ್ಬ ಈಗಲೂ ಧರ್ಮಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾನೆ ಎಂದು ತಿಳಿಸಿದ್ದಾರೆ.

**ಧರ್ಮಸ್ಥಳದಲ್ಲಿ ಶೋಧ ಕಾರ್ಯ ಸ್ಥಗಿತ:** ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿದ್ದಾರೆ ಎಂದು ಆರೋಪಿಸಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರನ್ನು ಬೆಳ್ತಂಗಡಿ ಎಸ್‌ಐಟಿ ಠಾಣೆಯಲ್ಲಿ ವಿಚಾರಣೆ ನಡೆಸಲಾಯಿತು. 17 ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿದರೂ ಕೆಲವು ಕಡೆ ಮಾತ್ರ ಅವಶೇಷಗಳು ಪತ್ತೆಯಾಗಿವೆ. ಮಾಹಿತಿ ಕೊರತೆಯಿಂದ ಪ್ರಕರಣವು ಮತ್ತಷ್ಟು ಗೊಂದಲಮಯವಾಗಿದ್ದು, ಇದೊಂದು ಷಡ್ಯಂತ್ರವೇ ಎಂಬ ಅನುಮಾನ ಮೂಡಿದೆ. ಈ ಎಲ್ಲಾ ಕಾರಣಗಳಿಂದಾಗಿ ಎಸ್‌ಐಟಿ ತನಿಖೆಯ ಮೊದಲ ಹಂತದ ಶೋಧ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ವರದಿಯಾಗಿದೆ.

**ಡಿಸಿಎಂಗೆ ಗೊತ್ತಿರುವ ವಿಚಾರ ಸಿಎಂಗೆ ತಿಳಿದಿಲ್ಲವೇ; ಬಿಜೆಪಿ ಗಂಭೀರ ಪ್ರಶ್ನೆ**

ಮಾಸ್ಕ್ ಮ್ಯಾನ್ ಸಲ್ಲಿಸಿದ ದೂರಿನ ಆಧಾರದ ಮೇಲೆ ಧರ್ಮಸ್ಥಳದಲ್ಲಿ ಹಲವು ಕಡೆ ಅಗೆದರೂ ಯಾವುದೇ ಶವಗಳ ಅವಶೇಷಗಳು ಪತ್ತೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಡ್ಯಾಮೇಜ್ ಕಂಟ್ರೋಲ್‌ಗೆ ಮುಂದಾಗಿರುವ ಸರ್ಕಾರ, ಇದೊಂದು ಷಡ್ಯಂತ್ರ ಎಂದು ಉಪಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಈ ಬಗ್ಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಮುಖ್ಯಮಂತ್ರಿಯವರಿಗೆ ಮಾಹಿತಿ ಇಲ್ಲವೇ ಎಂದು ಪ್ರಶ್ನಿಸಿದ್ದಾರೆ.

> ಧರ್ಮಸ್ಥಳದಲ್ಲಿ ಅನಾಥ ಶವಗಳನ್ನು ಹೂಳಿದ ಆರೋಪ ಮಾಡಿದ್ದ ಮಾಸ್ಕ್ ಮ್ಯಾನ್ ನ ಮೊದಲ ಪತ್ನಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಮಂಡ್ಯದಲ್ಲಿ ಅವರು ಮಾತನಾಡಿದ್ದು, ಧರ್ಮಸ್ಥಳದಲ್ಲಿ ತಾವು, ಮಾಸ್ಕ್ ಮ್ಯಾನ್ ಜೊತೆಗೆ ಮದುವೆಯಾದ ನಂತರ ಸುಮಾರು ಏಳು ವರ್ಷ ನೆಲೆಸಿದ್ದೆವು. ಆದರೆ, ಅವರು ನೂರಾರು ಅನಾಥ ಶವಗಳನ್ನು ಹೂತುಹಾಕಿಲ್ಲ. ಅತ್ತ, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರು ತುಂಬಾ ಒಳ್ಳೆಯವರು ಎಂದರು.

# ಮಾದಪ್ಪನ ಹುಂಡಿಯಲ್ಲಿ 2 ಕೋಟಿ ಕಾಣಿಕೆ ಸಂಗ್ರಹ

• **ಉದಯವಾಹಿನಿ, ಹನೂರು**

ತಾಲ್ಲೂಕಿನ ಪ್ರಸಿದ್ಧ ಪುಣ್ಯ ಕ್ಷೇತ್ರ ಶ್ರೀಮಲೆ ಮಹದೇಶ್ವರಬೆಟ್ಟ ದೇವಾಲಯದಲ್ಲಿ ಹುಂಡಿ ಹಣ ಎಣಿಕೆ ನಡೆದಿದ್ದು, 33 ದಿನದಲ್ಲಿ 2.20 ಕೋಟಿ ರೂ. ಸಂಗ್ರಹವಾಗಿದೆ.ಸಾಲೂರು ಬೃಹನಾಧ್ಯಕ್ಷರಾದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘುರವರ ನೇತೃತ್ವದಲ್ಲಿ ಬೆಳಿಗ್ಗೆ 7 ಗಂಟೆಯಿಂದ ಹುಂಡಿ ಹಣ ಎಣಿಕೆ ಕಾರ್ಯ ನಡೆದಿದ್ದು, 33 ದಿನದಲ್ಲಿ 2,20,22,454.00, ಕೋಟಿ ರೂ ನಗದು ರೂಪದಲ್ಲಿ (ಹುಂಡಿ ಮತ್ತು ಇಹುಂಡಿ ಸೇರಿ) ಹಾಗೂ ಚಿನ್ನ 55 ಗ್ರಾಂ, ಬೆಳ್ಳಿ 01 ಕೆ.ಜಿ 627 ಗ್ರಾಂ ಹುಂಡಿಯಲ್ಲಿ ದೊರೆತಿದೆ. ಈ ಬಾರಿಯೂ 30 ವಿದೇಶಿ ನೋಟುಗಳು ಮತ್ತು 2 ಸಾವಿರ ಮುಖಬೆಲೆ 7 ನೋಟುಗಳು ಹುಂಡಿಯಲ್ಲಿ ದೊರೆತಿದೆ. ಭಕ್ತರಿಂದ ಹರಕೆ ರೂಪದಲ್ಲಿ ಇಷ್ಟೊಂದು ದೊಡ್ಡ ಮೊತ್ತದ ಕಾಣಿಕೆ ಸಂದಿರುವುದು ಅಮಾವಾಸ್ಯೆ, ಹುಣ್ಣಿಮೆ, ರಜೆ ದಿನಗಳು, ಸರ್ಕಾರದ ಶಕ್ತಿ ಯೋಜನೆಯಿಂದ ಮಹಿಳೆಯರ ಉಚಿತ ಪ್ರಯಾಣ, ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ, ವಿದೇಶಿ


ಉದಯವಾಹಿನಿ ಚಿತ್ರ

ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿದ್ದರಿಂದ ದೊಡ್ಡ ಮೊತ್ತದ ಹಣ ಸಂಗ್ರಹವಾಗಿದೆ.

ಪ್ರಾಧಿಕಾರದ ಉಪ ಕಾರ್ಯದರ್ಶಿ ಜಿ.ಎಲ್. ಚಂದ್ರಶೇಖರ, ಹಣಕಾಸು ಮತ್ತು ಲೆಕ್ಕ ಪತ್ರ ಸಲಹೆಗಾರ ಸಿ.ಮಹದೇವು, ಲೆಕ್ಕಾಧೀಕ್ಷಕ ಗುರು ಮಲ್ಲಯ್ಯ, ಸರಗೂರು ಮಹದೇವಸ್ವಾಮಿ ಹಾಗೂ ಚಾಮರಾಜನಗರ ಜಿಲ್ಲಾಡಳಿತ ಕಛೇರಿಯ ಸಮಂತ್ ಕುಮಾರ್, ಪ್ರ.ದ.ಸ ಹಾಗೂ ಪ್ರಾಧಿಕಾರದ ಸಿಬ್ಬಂದಿಗಳು, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ಕೊಳ್ಳೇಗಾಲದ ಬ್ಯಾಂಕ್ ಆಫ್ ಬರೋಡ ಮುಖ್ಯ ವ್ಯವಸ್ಥಾಪಕರು, ಸಿಬ್ಬಂದಿಗಳು ಹಾಗೂ ಪ್ರಾಧಿಕಾರದ ನಾಮ ನಿರ್ದೇಶಿತ ಸದಸ್ಯ ಮರಿಸ್ವಾಮಿ ಹಾಜರಿದ್ದರು.

# ಅಂಗನವಾಡಿ ಕಾರ್ಯಕರ್ತೆಯರ ಸಹಿ ಸಂಗ್ರಹ

• **ಉದಯವಾಹಿನಿ, ಬಾಗೇಪಲ್ಲಿ**

ಅಂಗನವಾಡಿ ಕಾರ್ಯಕರ್ತೆಯರ ಮುಖಚರ್ಯೆ ಗುರುತಿಸುವ ಕ್ರಮಕ್ಕೆ ತಡೆ ಹಾಗೂ ಐಸಿಡಿಎಸ್ ಯೋಜನೆ ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರಕ್ಕೆ ಸಲ್ಲಿಸುವ ಮನವಿಗೆ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಸಹಿ ಸಂಗ್ರಹ ಅಭಿಯಾನ ಕೈಗೊಳ್ಳಲಾಯಿತು. ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷೆ ಜಿ.ಎಂ.ಲಕ್ಷ್ಮಿದೇವಮ್ಮ ಮಾತನಾಡಿ, ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಇರುವ ಐಸಿಡಿಎಸ್ ಯೋಜನೆ ಜಾರಿ ಆಗಿ 50 ವರ್ಷವೇ ಆಗಿದೆ.

ಆದರೆ, ಈ ಯೋಜನೆಯನ್ನು ಸರಳೀಕರಣಗೊಳಿಸಿ, ಫಲಾನುಭವಿಗಳನ್ನು ಆಕರ್ಷಿಸುವ ಬದಲಿಗೆ, ಸಂಕೀರ್ಣಗೊಳಿಸಲಾಗಿದೆ ಎಂದು ಆರೋಪಿಸಿದರು. ಅಂಗನವಾಡಿ ಕಾರ್ಯಕರ್ತೆಯರಿಗೆ ಯಾವುದೇ ಸೌಲಭ್ಯ ನೀಡದೆ, ಮುಖಚರ್ಯೆ ಗುರುತಿಸುವ


ಉದಯವಾಹಿನಿ ಚಿತ್ರ

ಕ್ರಮ ಅಳವಡಿಸಿರುವುದರಿಂದ 2013ರ ಆಹಾರ ಭದ್ರತೆ ಕಾಯ್ದೆ ಪ್ರಕಾರ ಯಾವುದೇ ಫಲಾನುಭವಿ ಹಸಿವಿನಿಂದ ನರಳಬಾರದು ಎಂಬ ಆಶಯಕ್ಕೆ ಹಿನ್ನಡೆಯಾಗಿದೆ.

ಅಲ್ಲದೆ, ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಸಬ್ಸಿಡಿ, ಉಚಿತವಾಗಿ ಸಿಗುವ ಸೌಲಭ್ಯಗಳಿಂದ ಫಲಾನುಭವಿಗಳು ವಂಚಿತರಾಗಬಾರದು ಎಂಬ ಸುಪ್ರೀಂ ಕೋರ್ಟ್ ಆದೇಶವೂ ಪಾಲನೆಯಾಗುತ್ತಿಲ್ಲ. ಸರ್ಕಾರವು, ಎಫ್‌ಆರ್‌ಎಸ್ ಜಾರಿ ಮೂಲಕ ಫಲಾನುಭವಿಗಳ ಹಕ್ಕನ್ನು ನಿರಾಕರಿಸಲಾಗುತ್ತಿದೆ ಎಂದು ದೂರಿದರು. ಎಫ್‌ಆರ್‌ಎಸ್ ಮೂಲಕ ಸಂಗ್ರಹಿಸುವ ಫಲಾನುಭವಿಗಳ ವೈಯುಕ್ತಿಕ ಮಾಹಿತಿ ಸೋರಿಕೆ ಆಗುತ್ತಿದೆ. ಇದರಿಂದ ಸೈಬರ್ ವಂಚನೆಗಳು ಹೆಚ್ಚಾಗುತ್ತಿವೆ. ಶೇ 60ರ ತನ್ನ ಪಾಲಿನ ವಂತಿಗೆಯನ್ನು ನೀಡಬೇಕಾದ ಕೇಂದ್ರ ಸರ್ಕಾರ ಎಫ್‌ಆರ್‌ಎಸ್ ನಿಬಂಧನೆ ಹಾಕುವ ಮೂಲಕ ತನ್ನ ಪಾಲಿನ ಹಣ ಕಡಿಮೆ ಮಾಡಿಕೊಳ್ಳಲು ಮುಂದಾಗಿದೆ ಎಂದು ಆರೋಪಿಸಿದರು. ಸಂಘದನ ಜಿಲ್ಲಾ ಕಾರ್ಯದರ್ಶಿ, ತಾಲ್ಲೂಕು ಅಧ್ಯಕ್ಷೆ ಕೆ.ರತ್ನಮ್ಮ ಮಾತನಾಡಿ, ಎಫ್ ಆರ್‌ಎಸ್ ಅನ್ನು ರದ್ದುಪಡಿಸಿ, ಐಸಿಡಿಎಸ್ ಅನ್ನು ಕಾಯಂ ಮಾಡಬೇಕು. ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಅಂಗನವಾಡಿ ಕಾರ್ಯಕರ್ತೆಯರನ್ನು ಸಿ, ಡಿ ಗುಂಪಿನ ನೌಕರರು ಎಂದು ಪರಿಗಣಿಸಬೇಕು ಎಂದು ಒತ್ತಾಯಿಸಿದರು.

2018ರಿಂದ ಅನ್ವಯವಾಗುವಂತೆ ವೇತನ ಹೆಚ್ಚಿಸಬೇಕು. ಫಲಾನುಭವಿಗಳ ಘಟಕದ ವೆಚ್ಚ ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳಿಗಾಗಿ ಇದೇ 21ರಂದು ಕಪ್ಪು ಪಟ್ಟಿ ಧರಿಸಿ ಕಪ್ಪು ದಿನಾಚರಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

# ಅಲೆಮಾರಿ ಕುಟುಂಬಗಳಿಗೆ ಸೌಕರ್ಯ ಒದಗಿಸಲು ಆಗ್ರಹ

• **ಉದಯವಾಹಿನಿ, ಕೆ.ಆರ್. ನಗರ**

ನಿರ್ಗತಿಕ ಅಲೆಮಾರಿ ಕುಟುಂಬಗಳಿಗೆ ಕೂಡಲೇ ಮೂಲ ಸೌಕರ್ಯ ಒದಗಿಸಬೇಕು ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ನಿಂಗರಾಜ್ ಮಲ್ಲಾಡಿ ಸರ್ಕಾರವನ್ನು ಒತ್ತಾಯಿಸಿದರು. ಇಲ್ಲಿನ ಗೌತಮ ಬುದ್ಧ ನಗರದಲ್ಲಿ 25 ಅಲೆಮಾರಿ ಕುಟುಂಬಗಳು ವಾಸ ಮಾಡುತ್ತಿರುವ ಸ್ಥಳಕ್ಕೆ ತಹಶೀಲ್ದಾರ್ ಜಿ. ಸುರೇಂದ್ರಮೂರ್ತಿ ಸೇರಿದಂತೆ ವಿವಿಧ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರು ಮಾತನಾಡಿದರು.

ಹುಟ್ಟು ಸಾವುಗಳಿಗೆ ದಾಖಲೆಗಳೇ ಇಲ್ಲದೆ, ಮರದ ಕೆಳಗೆ, ಪಾಳು ಮಂಟಪಗಳಲ್ಲಿ ಮಲಗುತ್ತಾ ನೆಲೆಯಿಲ್ಲದೆ ಬದುಕನ್ನು ಕಳೆದುಕೊಂಡಿದ್ದ ಅಲೆಮಾರಿ ಕುಟುಂಬಗಳಿಗೆ ಶಾಶ್ವತ ನೆಲೆ ಮತ್ತು ಇತರೆ ಮೂಲ ಸೌಕರ್ಯ ಕಲ್ಪಿಸಿಕೊಡುವಂತೆ


ಉದಯವಾಹಿನಿ ಚಿತ್ರ

ಸಂಘಟನೆ ನಿರಂತರ ಹೋರಾಟ ಮಾಡುತ್ತಿದೆ. ಜನ ಪ್ರತಿನಿಧಿಗಳು, ಅಧಿಕಾರಿಗಳು ಮೂಲ ಸೌಕರ್ಯ ಕಲ್ಪಿಸದೆ ಇರುವುದರಿಂದ ಅವರಿಗೆ ಪ್ರಾಣಿ, ಪಕ್ಷಿಗಳ ರೀತಿ ವಾಸ ಮಾಡುವ ಸ್ಥಿತಿ ಬಂದಿದ್ದು ಸಂಘಟನೆ ಖಂಡಿಸುತ್ತದೆ ಎಂದರು.

ಅಲೆಮಾರಿ ಕುಟುಂಬಗಳಿಗೆ ಸೌಕರ್ಯ ಕಲ್ಪಿಸಿಕೊಡಬೇಕು. ಇಲ್ಲದಿದ್ದರೆ ತೀವ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ಜಿ.ಸುರೇಂದ್ರಮೂರ್ತಿ, ಶಾಸಕ ಡಿ.ರವಿಶಂಕರ್ ಅವರ ಗಮನಕ್ಕೆ ತಂದು, ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.

> ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ 79 ವರ್ಷ ಕಳೆದರೂ ಸಹ ಹಂದಿ ಗೂಡುಗಳಂತಿರುವ ಗುಡಿಸಲುಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದ ಕತ್ತಲೆ ಮನೆಯಲ್ಲಿ ಬದುಕು ಸಾಗಿಸುತ್ತಿದ್ದಾರೆ. ಕುಡಿಯಲು ಶುದ್ಧವಾದ ನೀರಿಲ್ಲದೆ ಕಲುಷಿತ ನೀರನ್ನು ಕುಡಿದು ಅನಾರೋಗ್ಯ ಪೀಡಿತರಾಗಿ ಬದುಕುತ್ತಿದ್ದಾರೆ ಎಂದು ದೂರಿದರು. ಮಳೆ ಬಂದರೆ ಗುಡಿಸಲುಗಳಿಗೆ ನೀರು ನುಗ್ಗುತ್ತದೆ ಇಂತಹ ದಯನೀಯ ಸ್ಥಿತಿಯಲ್ಲಿ ನಿರ್ಗತಿಕ ಅಲೆಮಾರಿ ಕುಟುಂಬಗಳು ಬದುಕುತ್ತಿದ್ದರೂ ಅಧಿಕಾರಿಗಳು ಕಂಡೂ ಕಾಣದಂತೆ ವರ್ತಿಸುತ್ತಿದ್ದಾರೆ.

# ಅನ್ನದಾತರಿಗೆ ಬೇಡುವ ಪರಿಸ್ಥಿತಿ ಬರಬಹುದು

• **ಉದಯವಾಹಿನಿ, ಚನ್ನಪಟ್ಟಣ**

ರೈತಸಂಕುಲ ಇಂದು ಸಂಕಷ್ಟದಲ್ಲಿದೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮುಂದಿನ ಎರಡು ವರ್ಷದಲ್ಲಿ ರೈತರಿಗೆ ನೀಡುವ ಬದಲು ಬೇಡುವ ಪರಿಸ್ಥಿತಿ ಬರಬಹುದು ಎಂದು ಅರ್ಚಕರಹಳ್ಳಿಯ ಆದಿಚುಂಚನಗಿರಿ ಶಾಖಾ ಮಠದ ಅನ್ನದಾನೇಶ್ವರ ಸ್ವಾಮೀಜಿ ವಿಷಾದಿಸಿದರು. ತಾಲ್ಲೂಕಿನ ಸಿಂಗರಾಜಪುರ ಗ್ರಾಮದ ಲಕ್ಷ್ಮಿದೇವಿ ಭವನದಲ್ಲಿ ಏರ್ಪಡಿಸಿದ್ದ ಜಿಲ್ಲಾಮಟ್ಟದ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಮಾತನಾಡಿದರು. ರಾಜ್ಯ ರೈತ ಸಂಘದ ಜಿಲ್ಲಾ ಘಟಕ, ಸಿಂಗರಾಜಪುರದ ವೇಣುಗೋಪಾಲಕೃಷ್ಣಸ್ವಾಮಿ ರೈತ ಸಂಘದ ಜಂಟಿಯಾಗಿ ಈ ವಿಚಾರ ಸಂಕಿರಣ ಏರ್ಪಡಿಸಿದ್ದವು.

ಕಷ್ಟ ಪರಿಹರಿಸುವಂತೆ ರೈತರು ಒಂದು ದಿನ ಪ್ರತಿಭಟನೆ ಮಾಡಿ ಸುಮ್ಮನಾಗುತ್ತಾರೆ. ಇದರಿಂದ ರೈತರ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ರೈತರು ಮೊದಲು ಸಂಘಟಿತರಾಗುವ ಅವಶ್ಯಕತೆ ಇದೆ. ತಮಗೆ ಸಿಗಬೇಕಾದ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಮಾರುಕಟ್ಟೆಯಲ್ಲಿ ರೈತರ ಕೃಷಿ


ಉದಯವಾಹಿನಿ ಚಿತ್ರ

ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗಬೇಕು. 79 ವರ್ಷದಿಂದ ಹಳೆ ಕೃಷಿ ನೀತಿ ಜಾರಿಯಲ್ಲಿದ್ದು, ರೈತರಿಗೆ ಅನುಕೂಲವಾಗುವಂತೆ ತಿದ್ದುಪಡಿಯಾಗಬೇಕು. ಆಗ ಮಾತ್ರ ರೈತರು ಸಬಲರಾಗಲು ಸಾಧ್ಯ ಎಂದು ರೈತಸಂಘದ ಸಿ.ಪುಟ್ಟಸ್ವಾಮಿ ಅಭಿಪ್ರಾಯಪಟ್ಟರು. ಪೊಲೀಸರು, ಜನಸಾಮಾನ್ಯರ ನಡುವಿನ ಸಂಬಂಧ ಕುರಿತು ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್.ಎಚ್. ರಾಮಚಂದ್ರಯ್ಯ, ಗ್ರಾಮೀಣ ಕುಟುಂಬಗಳ ಆರ್ಥಿಕ ಸಬಲೀಕರಣಕ್ಕೆ ಬ್ಯಾಂಕುಗಳ ಕಾರ್ಯಯೋಜನೆ ಕುರಿತು ಜಿಲ್ಲಾ ಮಾರ್ಗದರ್ಶಿ ಬ್ಯಾಂಕಿನ ವ್ಯವಸ್ಥಾಪಕ ವೈ.ಎನ್. ಮೋಹನ್ ಕುಮಾರ್, ಭೂ ಸರ್ವೆ ವಿಧಾನ ಕುರಿತು ಡಿ.ಕೆ.ಪುಟ್ಟಸ್ವಾಮಿಗೌಡ ಉಪನ್ಯಾಸ ನೀಡಿದರು.

# ಜೆಟಿಡಿ ದಲಿತ ವಿರೋಧಿ ಹೇಳಿಕೆ ಖಂಡನೀಯ: ಭೀಮ್ ಸೇನೆ ಮುಖಂಡರು

• **ಉದಯವಾಹಿನಿ, ಮೈಸೂರು**

ಸಹಕಾರ ಸಂಘಗಳಲ್ಲಿ ದಲಿತರಿಗೆ ಮತ್ತು ಮಹಿಳೆಯರಿಗೆ ಅವಕಾಶ ನೀಡಿದರೆ ಸಹಕಾರ ಸಂಘಗಳ ಬಾಗಿಲು ಮುಚ್ಚಬೇಕಾಗುತ್ತದೆ ಎಂಬ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ ಖಂಡಿಸಿ ಕರ್ನಾಟಕ ಭೀಮ್ ಸೇನೆ ಮುಖಂಡರು ಗಾಂಧಿನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟಿಸಿದರು.

ಅಧಿವೇಶನದಲ್ಲಿ ಸಹಕಾರ ಸಂಘಗಳಲ್ಲಿ ದಲಿತರಿಗೆ ಮತ್ತು ಮಹಿಳೆಯರಿಗೆ ನಾಮ ನಿರ್ದೇಶಿತ ಸದಸ್ಯರ ನೇಮಕ ಮತ್ತು ರೋಸ್ಟರ್ ಪದ್ಧತಿಯಲ್ಲಿ ಅಧಿಕಾರ ಹಂಚಿಕೆ ಕಾಯ್ದೆ ತಿದ್ದುಪಡಿ ವಿಧೇಯಕವನ್ನು ಸಚಿವ ಎಚ್.ಕೆ.ಪಾಟೀಲ್ ಮಂಡಿಸಿದ್ದರು. ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಅವರು ವಿರೋಧ ವ್ಯಕ್ತಪಡಿಸಿ, ದಲಿತರನ್ನು ಅವಮಾನಿಸಿದ್ದಾರೆ. ಇವರ ಈ ದುರಹಂಕಾರದ ನಡವಳಿಕೆಯನ್ನು ಇಡೀ ದಲಿತ ಸಮೂಹ ಖಂಡಿಸುತ್ತದೆ ಎಂದು ಕಿಡಿ ಕಾರಿದರು. ಹೇಳಿಕೆಯು ಅವರ ನಡವಳಿಕೆ ಪುಷ್ಟೀಕರಿಸುತ್ತಿದೆ. ಜಿ.ಟಿ.ದೇವೇಗೌಡ, ಅವರ ಅಳಿಯ ನಡೆಸಿರುವ ಭೂ ಹಗರಣಗಳ ಬಗ್ಗೆ ಈಗಾಗಲೇ ಜನರಿಗೆ ಗೊತ್ತಿದೆ. ಇಂತಹ ಕ್ರಿಮಿನಲ್ ಪ್ರಕರಣ ಹೊಂದಿರುವವರು ದಲಿತರ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನೀಯ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಂಡಿರುವುದರಿಂದ ಇವರ ಸದಸ್ಯತ್ವವನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

# ಕಾಂಗ್ರೆಸ್ ಭವನ ಜಾಗ ಅಕ್ರಮವಾಗಿ ನೋಂದಣಿ: ಎಚ್.ಎಸ್.ರವಿಶಂಕರ್

• **ಉದಯವಾಹಿನಿ, ತುಮಕೂರು**



ನಗರದ ಮರಳೂರಿನ ಸರ್ವೆ ನಂ 87/2ರಲ್ಲಿ 2 ಎಕರೆ ಜಾಗವನ್ನು ಜಿಲ್ಲಾ ಕಾಂಗ್ರೆಸ್ ಭವನಕ್ಕೆ ಮಂಜೂರು ಮಾಡಿ ನೋಂದಣಿ ಮಾಡಿಸಿರುವುದು ವಿವಾದಕ್ಕೆ ಕಾರಣವಾಗಿದ್ದು, ಅಕ್ರಮವಾಗಿ ಮಾಡಿರುವ ನೋಂದಣಿ ರದ್ದುಪಡಿಸುವಂತೆ ಬಿಜೆಪಿ ಒತ್ತಾಯಿಸಿದೆ. ರಾಜೀವ್ ಗಾಂಧಿ ಅರ್ಬನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆಗೆ ಜಮೀನು ಕೋರಿ ರಾಜ್ಯ ಸಚಿವ ಸಂಪುಟ ಸಭೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ ಸಭೆಯಲ್ಲಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಮಂಜೂರು ಮಾಡಲಾಗಿದ್ದು, ಇದು ಗೊಂದಲದಿಂದ ಕೂಡಿದೆ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಎಸ್.ರವಿಶಂಕರ್ ಇಲ್ಲಿ ಆರೋಪಿಸಿದರು. ಸಚಿವ ಸಂಪುಟ ಸಭೆಯಲ್ಲಿ ಮಂಜೂರು ಮಾಡಿರುವ ಜಮೀನನ್ನು ನೋಂದಣಿ ಮಾಡಲು ಬರುವುದಿಲ್ಲ. ಕರ್ನಾಟಕ ನೋಂದಣಿ ಕಾಯ್ದೆ 1908 ಸೆಕ್ಷನ್ 17ರ ಪ್ರಕಾರ ಈ ನೋಂದಣಿ ಪತ್ರ ಮಾನ್ಯವಾಗುವುದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಮರಳೂರು ಗ್ರಾಮದ ಸರ್ವೆ ನಂ 87/1, 87/2ನಲ್ಲಿ ಒಟ್ಟು 4 ಎಕರೆ ಜಮೀನನ್ನು ಕಸ ಸಂಗ್ರಹ ಉದ್ದೇಶಕ್ಕೆ 1943ರಲ್ಲಿ ನಗರಸಭೆಗೆ ಭೂ ಸ್ವಾಧೀನವಾಗಿರುತ್ತದೆ.

ಈ ಜಮೀನಿನ ರೈತರು ನ್ಯಾಯಾಲಯದ ಮೊರೆ ಹೋಗಿದ್ದು, ವಿಚಾರಣೆ ನಡೆಯುತ್ತಿದೆ. ಆದರೂ ಕಾಂಗ್ರೆಸ್ ಭವನಕ್ಕೆ ಮಂಜೂರು ಮಾಡಲಾಗಿದೆ. ಪ್ರತ್ಯೇಕ ಪೋಡಿ ಇಲ್ಲದೆ ಬಹು ಮಾಲೀಕತ್ವ ಇರುವ ಸರ್ವೆ ಸಂಖ್ಯೆಯ ಭೂಮಿಗೆ ಎರಡೇ ದಿನದಲ್ಲಿ ಇ-ಖಾತಾ ಮಾಡಲಾಗಿದೆ. ಇ-ಖಾತೆ ಮಾಡಿ ಕೊಡಲು ಯಾವುದೇ ನಿಯಮ ಪಾಲಿಸಿಲ್ಲ ಎಂದು ದೂರಿದರು.

ಸಂಪುಟ ಸಭೆಯ ನಿರ್ಧಾರದಂತೆ ಮಾರ್ಗಸೂಚಿ ಮೌಲ್ಯದ ಶೇ. 5ರಷ್ಟು ಬೆಲೆ ವಿಧಿಸಿ ನೋಂದಣಿ ಮಾಡಬೇಕಿದೆ. ಆದರೆ ಷರತ್ತು ಉಲ್ಲಂಘಿಸಿ ಮಾರ್ಗಸೂಚಿ ದರಕ್ಕಿಂತಲೂ ಕಡಿಮೆ ಮೊತ್ತಕ್ಕೆ ನೋಂದಣಿ ಮಾಡಿಸಿ, ಮುದ್ರಾಂಕ ಶುಲ್ಕ ನೀಡದೆ ವಂಚಿಸಲಾಗಿದೆ. ಸರ್ವೆ ನಂ 87/2ರ ಜಮೀನಿಗೆ ಮಾರ್ಗಸೂಚಿ ದರ ಪ್ರತಿ ಚದರ ಮೀಟರ್‌ಗೆ 28 ಸಾವಿರವಿದ್ದು, ಎರಡು ಎಕರೆಗೆ 21.24 ಕೋಟಿಯಾಗುತ್ತದೆ. ಸಚಿವ ಸಂಪುಟದ ನಿರ್ಣಯದಂತೆ ಶೇ 5ರಷ್ಟು ಎಸ್.ಆರ್ ಮೌಲ್ಯವನ್ನು ಲೆಕ್ಕ ಹಾದರೆ 1.06 ಕೋಟಿಗೆ ನೋಂದಾಯಿಸಿ, 8.10 ಲಕ್ಷ ಮುದ್ರಾಂಕ ಶುಲ್ಕ ಪಾವತಿಸಬೇಕಿತ್ತು. ಆದರೆ 17 ಲಕ್ಷಕ್ಕೆ ನೋಂದಾಯಿಸಿ. 92,200 ಮುದ್ರಾಂಕ ಶುಲ್ಕ ಪಾವತಿಸಿ, ಸರ್ಕಾರಕ್ಕೆ ವಂಚಿಸಲಾಗಿದೆ ಎಂದು ಆರೋಪಿಸಿದರು.

**ಗೂಂಡಾ ಪೊಲೀಸರ ವಿರುದ್ಧ ಹೋರಾಟ**

ಕಾಂಗ್ರೆಸ್ ಭವನಕ್ಕೆ ಜಮೀನು ನೋಂದಣಿ ಮಾಡುತ್ತಿದ್ದ ಸಮಯದಲ್ಲಿ ಪ್ರಶ್ನಿಸಲು ನಗರದ ಉಪನೋಂದಣಾಧಿಕಾರಿ ಕಚೇರಿಗೆ ಹೋಗಿದ್ದ ಬಿಜೆಪಿ ಮುಖಂಡರ ಮೇಲೆ ಹಲ್ಲೆ ನಡೆಸಿದ ಗೂಂಡಾ ಪೊಲೀಸರ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ವೈ.ಎಚ್.ಹುಚ್ಚಯ್ಯ ಹೇಳಿದರು. ಪೊಲೀಸರು ರೌಡಿಗಳಂತೆ ವರ್ತಿಸಿ ತಾಲಿಬಾನ್ ಸಂಸ್ಕೃತಿ ತೋರಿಸಿದ್ದಾರೆ. ಕಾಂಗ್ರೆಸ್ ಪರವಾದ ಗೂಂಡಾಗಳಂತೆ ನಡೆದುಕೊಂಡಿದ್ದಾರೆ. ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

# ಚಿಕ್ಕಬಳ್ಳಾಪುರದಲ್ಲಿ ಖಾತೆ ಮಾಡಲು ಖ್ಯಾತೆ, ಜನರಿಗೆ ವ್ಯಥೆ


## ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಭೇಟಿ ನೀಡಿ, ಪ್ರಕ್ರಿಯೆಗೆ ಚುರುಕು ನೀಡುವಂತೆ ಸೂಚನೆ

• **ಉದಯವಾಹಿನಿ, ಚಿಕ್ಕಬಳ್ಳಾಪುರ**

ಇಲ್ಲಿನ ನಗರಸಭೆಯಲ್ಲಿ ಬಿ ಖಾತೆ ಕೊಡಿ ಎಂದು ದಾಖಲೆ ಕೊಟ್ಟವರು ಇನ್ನೂ ಖಾತೆಗಾಗಿ ಎದುರು ನೋಡುತ್ತಿದ್ದಾರೆ. ದಾಖಲೆ ಕೊಟ್ಟು ಡಬಲ್ ಟ್ಯಾಕ್ಸ್ ಕಟ್ಟಿ ಬಂದವರಿಗೆ ಮತ್ತೊಂದು ಸಾಲಿನ ಟ್ಯಾಕ್ಸ್ ಕಟ್ಟುವ ನೋಟಿಸ್ ಬಂದಿದೆ. ಆದರೆ ಬಿ ಖಾತೆ ಮಾತ್ರ ಇನ್ನೂ ಯಾರ ಕೈನೂ ಸೇರಿಲ್ಲ. ಖಾತೆ ಸಿಗದೇ ತೊಂದರೆಗೆ ಸಿಲುಕಿದ್ದ ಆಸ್ತಿ ಮಾಲೀಕರಿಗೆ ಬಿ ಖಾತೆ ಮಾಡಿಸಿಕೊಳ್ಳುವಂತೆ ಮನವಿ ಮಾಡಲಾಗಿತ್ತು. ಇದಕ್ಕೆ ದೊಡ್ಡ ಮಟ್ಟದ ಅಭಿಯಾನವೂ ನಡೆದಿತ್ತು. ಕೆಲವೇ ತಿಂಗಳಲ್ಲಿ ಬಿ ಖಾತೆ ಸಿಗುತ್ತೆ ಎಂದು ಕಾದಿದ್ದೇ ಬಂತು.. ನಗರದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿಗೆ ಖಾತೆ ಆಗಬೇಕು.

**ಖಾತೆ ಪಡಿಪಾಟಲು:** ಒಂದು ಮೂಲದ ಪ್ರಕಾರ ಚಿಕ್ಕಬಳ್ಳಾಪುರ ನಗರದಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿಗೆ ಬಿ ಖಾತೆ ಆಗಬೇಕಿದೆ. ಆದರೆ ಇದುವರೆಗೂ 3,400 ಸಾವಿರದಷ್ಟು ಅರ್ಜಿಗಳು ಬಂದಿವೆ. ಅವುಗಳಲ್ಲಿ 1000 ಅರ್ಜಿಗಳು ಸೂಕ್ತ ದಾಖಲೆಗಳಿಲ್ಲದೆ ತಿರಸ್ಕೃತಗೊಂಡಿವೆ. ಹೀಗಾಗಿ ಬಿ ಖಾತೆಗಾಗಿ ಅರ್ಜಿ ಕೊಟ್ಟವರು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ವಾಪಸ್ ಆಗಿದ್ದಾರೆ. ಅರ್ಹರಾದವರಿಗೂ ಇನ್ನೂ ಖಾತೆ ಸಿಕ್ಕಿಲ್ಲ.

**ಸಾವಿರಕ್ಕೂ ಹೆಚ್ಚು ಬಾಕಿ:** ಈಗ ಸಲ್ಲಿಸಿರುವ 3800ಕ್ಕೂ ಹೆಚ್ಚು ಅರ್ಜಿಗಳ ಪೈಕಿ ಅಂದಾಜು 2,900 ಮಂದಿ ಮಾತ್ರ ಬಿ ಖಾತೆ ನೀಡಲು ಅರ್ಹರಾಗಿದ್ದಾರೆ. ಅವುಗಳ ಪೈಕಿ 1090 ಮಂದಿಗೆ ಖಾತೆ ಮಾಡಲಾಗಿದೆ. ಆದರೆ ಇನ್ನುಳಿದ ಅರ್ಜಿಗಳಿಗೆ ಸಂಬಂಧಿಸಿದಂತೆ ಖಾತೆ ಮಾಡುವ ಪ್ರಕ್ರಿಯೆ ಇನ್ನೂ ನಡೆಯುತ್ತಿದೆ. ಹಲವು ತಿಂಗಳಿಂದ ಈ ಪ್ರಕ್ರಿಯೆ ನಡೆಯುತ್ತಿದ್ದರೂ ತಾರ್ಕಿಕ ಅಂತ್ಯವಾಡುವ




**ಅರ್ಹರಿಗೂ ದಕ್ಕದ ದಾಖಲೆ**

ಕೆಲಸಗಳನ್ನು ಮಾಡುತ್ತಿಲ್ಲ.

**ಮತ್ತೊಂದು ಹೊರೆ:** ರಾಜ್ಯ ಸರಕಾರದಿಂದ ಆದ ಮತ್ತೊಂದು ಎಡವಟ್ಟು ಎಂದರೆ ಆರ್ಥಿಕ ವರ್ಷದ ಕೊನೆ ತಿಂಗಳಲ್ಲಿ ಈ ಬಿ ಖಾತೆ ನೀಡುವುದನ್ನು ಜಾರಿಗೆ ತಂದದ್ದು. ಈಗಾಗಲೇ ಬಿ ಖಾತೆ ಪಡೆಯಲು ಡಬಲ್ ತೆರಿಗೆ ಕಟ್ಟಿರುವವರು ಈಗ ಹೊಸ ವರ್ಷದ ತೆರಿಗೆಯನ್ನು ಕಟ್ಟಬೇಕಾದ ಅನಿವಾರ್ಯತೆ ಎದುರಾಗಿದೆ. ಈಗಾಗಲೇ ಸಾಲ ಸೋಲ ಮಾಡಿ ಡಬಲ್ ತೆರಿಗೆ ಕಟ್ಟಿರುವವರು ಈಗ ಮತ್ತೊಂದು ತೆರಿಗೆ ಕಟ್ಟಲು ನಗರಸಭೆಯಿಂದ ನೋಟಿಸ್ ಬಂದಿದೆ. ಈ ಮತ್ತೊಂದು ಸಾಲಿನ ತೆರಿಗೆ ಕಟ್ಟಿದರಷ್ಟೇ ಖಾತೆ ಎನ್ನುವ ಪರಿಸ್ಥಿತಿ ಇದೆ.

**ಇನ್ನೂ ಸಿಕ್ಕಿಲ್ಲ ಖಾತೆ:** 1 ಸಾವಿರ ಕ್ಕೂ ಹೆಚ್ಚು ಖಾತೆ ಸಿದ್ಧವಾಗಿದ್ದರೂ ಫಲಾನುಭವಿಗಳಿಗೆ ಅಧಿಕೃತವಾಗಿ ವಿತರಣೆಯಾಗಿಲ್ಲ. ಮತ್ತೊಂದೆಡೆ ಬಿ ಖಾತೆ ವಿತರಣೆಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪವೂ ಕೇಳಿಬರುತ್ತಿದೆ. ಕೆಲವರಿಂದ 2 ಲಕ್ಷದವರೆಗೂ ಹಣ ಪೀಕಿರುವ ದೂರುಗಳು ಕೇಳಿಬಂದಿವೆ. ಸಾಕಷ್ಟು ಮಂದಿ ಸಾಚಾ ಎಂಬಂತೆ ಪೋಸು ನೀಡುತ್ತಿದ್ದಾರೆಯಾದರೂ ಮಾಡಿರೋದೆಲ್ಲಾ ಅಕ್ರಮ ಎಂಬ ಆರೋಪವನ್ನು ನಗರಸಭೆ ಸದಸ್ಯರೇ ಮಾಡುತ್ತಾರೆ.

**ವೇಗ ನೀಡಲು ಕಸರತ್ತು:** ಮಂದಗತಿಯಲ್ಲಿ ಸಾಗುತ್ತಿರುವ ಖಾತೆ ಆಂದೋಲನಕ್ಕೆ ವೇಗ ನೀಡಲು ರಾಜ್ಯ ಸರಕಾರ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಅಂದುಕೊಂಡಂತೆ ಖಾತೆ ನೀಡುವ ಪ್ರಕ್ರಿಯೆ ನಡೆಯುತ್ತಿಲ್ಲ. ಹೀಗಾಗಿ ಜಿಲ್ಲಾನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ನಗರಸಭೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಖಾತೆ ಪ್ರಕ್ರಿಯೆ ತಡವಾಗುತ್ತಿರುವ ಬಗ್ಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಆದಷ್ಟು ಬೇಗ ಖಾತೆ ಮಾಡುವ ಪ್ರಕ್ರಿಯೆ ನಡೆಯಬೇಕು ಎಂದು ಸೂಚನೆ ನೀಡಿದ್ದಾರೆ.

ಕೆಲವು ತಿಂಗಳಿಂದ ಖಾತೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಹೇಳಲಾಗುತ್ತಿದೆ ಯಾದರೂ ಮತ್ತೊಂದು ಸಾಲಿನ ತೆರಿಗೆ ಕಟ್ಟಿಸಿಕೊಳ್ಳುವುದು ಸೇರಿ ನಾನಾ ಕಾರಣಗಳಿಂದ ತಡವಾಗುತ್ತಲೇ ಬರುತ್ತಿದೆ.

ಹೀಗಾಗಿ ಈಗಲೂ ಸಾಕಷ್ಟು ಮಂದಿ ಖಾತೆ ಆಗುತ್ತೋ ಇಲ್ಲವೋ ಎನ್ನುವ ಗೊಂದಲದಲ್ಲೇ ಇದ್ದಾರೆ. ಆದರೆ ದುಡ್ಡು ಕೊಟ್ಟು ಖಾತೆ ಮಾಡಿಸಿಕೊಳ್ಳುವವರ ಸಂಖ್ಯೆಗೇನು ಕಡಿಮೆ ಇಲ್ಲ ಎಂದು ಕೆಲವು ನಗರಸಭೆ ಸದಸ್ಯರು ಆರೋಪಿಸುತ್ತಿದ್ದಾರೆ.

**ಯಾರು ಈ ಮಂಜುನಾಥ್..?:** ಸದ್ಯ ಜಿಲ್ಲಾನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾಗಿ ಬಂದಿರುವ ಮಂಜುನಾಥ್ ಅವರು ಈ ಹಿಂದೆ ನಗರಸಭೆಯ ಪೌರಾಯುಕ್ತರಾಗಿದ್ದರು. ಗಂಗಮ್ಮನಗುಡಿ ಮತ್ತು ಬಜಾರ್ ರಸ್ತೆ ತೆರವಿಗೆ ಸಂಬಂಧಿಸಿದಂತೆ ನಿರ್ದಾಕ್ಷಿಣ್ಯ ಕ್ರಮಕ್ಕೆ ಮುಂದಾಗಿದ್ದರು. ಆದರೆ ಕೆಲವರು ಮಂಜುನಾಥ್ ಅವರ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದರಿಂದ ಅರ್ಹತೆಯ ವಿಷಯದಲ್ಲಿ ಪೌರಯುಕ್ತ ಹುದ್ದೆಯನ್ನು ಬಿಟ್ಟು ಕೊಡಬೇಕಾಗಿ ಬಂದಿತ್ತು. ಇತ್ತೀಚೆಗೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾಗಿ ಬಂದಿದ್ದು ಈಗ ನಗರಸಭೆಗೆ ಭೇಟಿ ನೀಡಿ ಖಾತೆ ಪ್ರಕ್ರಿಯೆಗೆ ಚುರುಕು ಮುಟ್ಟಿಸುವ ಕೆಲಸ ಮಾಡಿದ್ದಾರೆ.

> ಬಿ ಖಾತೆ ಆಂದೋಲನ ಮಂದಗತಿಯಲ್ಲಿ ಸಾಗುತ್ತಿರುವ ಬಗ್ಗೆ ದೂರು ಬಂದ ಹಿನ್ನೆಲೆ ನಗರಸಭೆಗೆ ಭೇಟಿ ನೀಡಿ ಬೇಗ ಖಾತೆ ಮಾಡಿಕೊಡುವಂತೆ ಸೂಚನೆ ನೀಡಲಾಗಿದೆ. ಖಾತೆ ಮಾಡುವ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಸರಕಾರ ಸೂಚನೆ ನೀಡಿದ್ದು, ಆದಷ್ಟು ಬೇಗ ವಿಲೇವಾರಿ ಮಾಡಬೇಕಿದೆ.
> –**ಮಂಜುನಾಥ್**, ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ

> ಸಾಕಷ್ಟು ಮಂದಿ ಖಾತೆಗಾಗಿ ಅರ್ಜಿ ಸಲ್ಲಿಸಿದ್ದರೂ ಖಾತೆಗಳನ್ನು ಮಾಡುತ್ತಿಲ್ಲ. ಈಗಾಗಲೇ ಆಗಿರುವ ಖಾತೆಗಳನ್ನು ಖಾತೆದಾರರಿಗೆ ವಿತರಿಸಲು ಕ್ರಮ ಕೈಗೊಳ್ಳುತ್ತಿಲ್ಲ. ಪ್ರತಿನಿತ್ಯ ಜನರು ನಗರಸಭೆಗೆ ಅಲೆದಾಡುತ್ತಿದ್ದು ಜನರಿಗೆ ಸಾಕಷ್ಟು ತೊಂದರೆಯಾಗಿದೆ. ಆದಷ್ಟು ಬೇಗ ಖಾತೆ ಸಮಸ್ಯೆಯನ್ನು ಪರಿಹರಿಸಬೇಕಿದೆ.
> –**ಮಟಮಪ್ಪ**, ನಗರಸಭೆ ಸದಸ್ಯ

## ಮಿನಿ ನ್ಯೂಸ್

### ಸ್ವಾತಂತ್ರ್ಯೋತ್ಸಕ್ಕೆ ಅಡ್ಡಿ ಆರು ಮಂದಿ ವಿರುದ್ಧ ಪ್ರಕರಣ ದಾಖಲು

• **ಉದಯವಾಹಿನಿ, ಹಾರೋಹಳ್ಳಿ**

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಇಲ್ಲಿಯ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ 79ನೇ ಸ್ವಾತಂತ್ರ್ಯ ಉತ್ಸವ ಆಚರಣೆಗೆ ಅಡ್ಡಿಪಡಿಸಿದ ಆರೋಪದ ಮೇರೆಗೆ ಆರು ಮಂದಿ ವಿರುದ್ಧ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮಾರಂಭದ ವೇದಿಕೆಯಲ್ಲಿ, ಕಚೇರಿಗೆ ಧಾವಿಸಿ ತಹಶೀಲ್ದಾರ್ ಹರ್ಷವರ್ಧನ್ ಅವರೊಂದಿಗೆ ಏರು ಧ್ವನಿಯಲ್ಲಿ ವಾಗ್ವಾದಕ್ಕಿಳಿದ ಆರೋಪದ ಮೇಲೆ ವಾಲೆ ವೆಂಕಟೇಶ್, ಚಂದ್ರು, ಪ್ರಕಾಶ್, ಅಂಜನ್ ಮೂರ್ತಿ, ದೇವರಾಜು, ಕುಮಾರ್ ಎನ್ನುವವರ ವಿರುದ್ಧ ಕಂದಾಯ ನಿರೀಕ್ಷಕ ಬಿ.ಎನ್. ನರೇಶ್ ನೀಡಿದ ದೂರಿನ ಮೇರೆಗೆ ಹಾರೋಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಸಮಾರಂಭ ಮುಕ್ತಾಯ ಹಂತದ ವೇಳೆ ವೇದಿಕೆಗೆ ಧಾವಿಸಿದ ಆರು ಮಂದಿ ತಮಗೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಿಲ್ಲ ಎಂದು ಧಿಕ್ಕಾರ ಕೂಗಿದರು. ಆಚರಣೆಗೆ ಅಡ್ಡಿಪಡಿಸಿದರು ಎಂದು ದೂರಲಾಗಿದೆ.

### ಸೌಜನ್ಯಾ ಪ್ರಕರಣ: ನ್ಯಾಯ ಆಗ್ರಹಿಸಿ ಪಾದಯಾತ್ರೆ ಇಂದು

• **ಉದಯವಾಹಿನಿ, ಮೈಸೂರು**

ಧರ್ಮಸ್ಥಳದಲ್ಲಿ ಅಸಹಜ ಸಾವುಗಳ ಆರೋಪದ ತನಿಖೆ ನಡೆಸುತ್ತಿರುವ ಎಸ್ ಐಟಿಯನ್ನು ದುರ್ಬಲಗೊಳಿಸುವುದನ್ನು ಖಂಡಿಸಿ, ಸೌಜನ್ಯ ಅತ್ಯಾಚಾರ, ಹತ್ಯೆ ಪ್ರಕರಣಕ್ಕೆ ನ್ಯಾಯ ಒದಗಿಸಲು ಆಗ್ರಹಿಸಿ ಆ.22ರಂದು ಬೆಳಿಗ್ಗೆ 10.30ಕ್ಕೆ ಭಾರತ ಭೀಮ್ ಸೇನೆಯಿಂದ ನಗರದ ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹತ್ಯೆ ನಡೆದು 13 ವರ್ಷಗಳಾಗಿದ್ದು, ಇನ್ನೂ ಸತ್ಯಾಂಶ ಹೊರ ಬಂದಿಲ್ಲ, ತಪ್ಪಿತಸ್ಥರಿಗೆ ಶಿಕ್ಷೆ ಆಗಿಲ್ಲ. ಇದೇ ವೇಳೆ ವ್ಯಕ್ತಿಯೊಬ್ಬ ಧರ್ಮಸ್ಥಳದಲ್ಲಿ ತಾನು ಬಹಳಷ್ಟು ಶವ ಹೂತಿರುವುದಾಗಿ ತಿಳಿಸಿದ ಕಾರಣ ಎಸ್‌ಐಟಿ ತನಿಖೆ ನಡೆಯುತ್ತಿದೆ.

ಈ ತನಿಖೆ ವಿರುದ್ಧ ಪ್ರಭಾವ ಬೀರುವ ಕೆಲಸವನ್ನು ಕೆಲ ಪಕ್ಷಗಳ ರಾಜಕೀಯ ಮುಖಂಡರು ಮಾಡುತ್ತಿದ್ದಾರೆ. ಧರ್ಮಸ್ಥಳದ ಬಗ್ಗೆ ತಮಗೆಲ್ಲ ಗೌರವವಿದೆ. ಆದರೆ ಆರೋಪಗಳಿಂದ ಅದು ಹೊರಬರಬೇಕಾದ ಅಗತ್ಯವಿದೆ ಎಂದರು. ಪಾದಯಾತ್ರೆಯಲ್ಲಿ ಉರಿಲಿಂಗಪದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ನಟ ಚೇತನ್ ಅಹಿಂಸಾ ಭಾಗವಹಿಸುವರು. ಇತರ ಜಿಲ್ಲೆಗಳಲ್ಲೂ ಹಮ್ಮಿಕೊಳ್ಳುತ್ತಿದ್ದು, ಅಂತಿಮವಾಗಿ ಎಲ್ಲಾ ಜಿಲ್ಲೆಯವರೂ ಸೇರಿ ನ್ಯಾಯಕ್ಕಾಗಿ ಆಗ್ರಹಿಸಿ ಧರ್ಮಸ್ಥಳಕ್ಕೆ ಹೊರಡಲಾಗುವುದು ಎಂದರು.

### ಅಗರ-ಮಾಂಬಳ್ಳಿ ಠಾಣೆ: ಮನೆ ಮನೆಗೆ ಪೊಲೀಸ್ ಕಾರ್ಯಕ್ರಮ

• **ಉದಯವಾಹಿನಿ, ಯಳಂದೂರು**

ಮನೆಗೆ ಪೊಲೀಸ್ ಸೇವೆ ಒಂದು ಅತ್ಯುತ್ತಮ ಸೇವಾ ಕಾರ್ಯಕ್ರಮವಾಗಿದೆ. ಜನರ ಕುಂದು ಕೊರತೆ, ಸಮಸ್ಯೆಗಳನ್ನು ತಾಳ್ಮೆಯಿಂದ ಆಲಿಸಿ ಪರಿಹರಿಸುವ ನಿಟ್ಟಿನಲ್ಲಿ ಪೊಲೀಸರಿಗೆ ವರದಾನ ಆಗಲಿದೆ ಎಂದು ಸಬ್ ಇನ್ಸ್‌ಪೆಕ್ಟರ್ ಎನ್.ಕರಿಬಸಪ್ಪ ತಿಳಿಸಿದರು. ತಾಲ್ಲೂಕಿನ ಅಗರ-ಮಾಂಬಳ್ಳಿ ಠಾಣೆಗಳ ಗ್ರಾಮಗಳಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜನರೊಟ್ಟಿಗೆ ಸ್ನೇಹಪರ ಸಂಬಂಧ ಬೆಸೆಯುವ ಮೂಲಕ ಪೊಲೀಸ್ ವ್ಯವಸ್ಥೆ ಗಟ್ಟಿಗೊಳಿಸಬೇಕು. ಇದರಿಂದ ಜನಸ್ನೇಹಿ, ಆಡಳಿತ ಸ್ನೇಹಿಯಾಗಿಸುವ ಕಾರ್ಯಕ್ಕೆ ಪೊಲೀಸರಿಗೆ ಬಲ ಸಿಗಲಿದೆ. ಪೊಲೀಸರೊಡನೆ ನಾಗರಿಕರಲ್ಲಿ ಇರುವ ಹೆದರಿಕೆ ಮತ್ತು ತಪ್ಪು ಗ್ರಹಿಕೆ ಇದರಿಂದ ಕೊನೆಗೊಳ್ಳಲಿದೆ. ಜನರು ಸಹ ಪೊಲೀಸರು ಗ್ರಾಮಕ್ಕೆ ಬಂದಾಗ ಅಂತರ ಕಾಯ್ದುಕೊಳ್ಳದೆ ಆಪ್ತತೆ ಬೆಳೆಸಿಕೊಳ್ಳಬೇಕು ಎಂದರು. ಠಾಣೆಗೆ ಬರಲು ಈಗಲೂ ಮಹಿಳೆಯರು ಮತ್ತು ಅನಕ್ಷರಸ್ಥರು ಹಿಂಜರಿಯುತ್ತಾರೆ. ಆದರೆ, ಇನ್ನೂ ಮುಂದೆ ಪೊಲೀಸರೇ ಮನೆಯತ್ತ ಬರಲಿದ್ದಾರೆ. ಬೀಟ್ ಪೊಲೀಸರು ಬಂದಾಗ ಗ್ರಾಮದ ಸಮಸ್ಯೆ ಹೇಳಬೇಕು. ಪ್ರಕರಣಗಳಿಗೆ ಸಂಬಂಧಿಸಿ ಮಾಹಿತಿ ಇದ್ದರೆ ನೀಡಬೇಕು. ಇದರಿಂದ ಬಹುತೇಕ ಸಮಸ್ಯೆ, ತಪ್ಪು ಕಲ್ಪನೆ ಮನಸ್ಸಿನಿಂದ ದೂರಾಗುತ್ತದೆ. ಸಿನಿಮಾ ಇಲ್ಲವೇ ಧಾರಾವಾಹಿಯಲ್ಲಿ ತೋರಿಸುವಂತೆ ಆರಕ್ಷರ ಬಗ್ಗೆ ತಪ್ಪು ಕಲ್ಪನೆ ಇರಬಾರದು. ಸುರಕ್ಷತಾ ಭಾವದಿಂದ ಅವರನ್ನು ಕಾಣಬೇಕು ಎಂದರು.

### ಪಡಿತರ ರಾಗಿ ಅಕ್ರಮ ಸಾಗಣೆ ಇಬ್ಬರ ಬಂಧನ

• **ಉದಯವಾಹಿನಿ, ಗುಂಡ್ಲುಪೇಟೆ**

ಪಡಿತರ ರಾಗಿಯನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಗುಂಡ್ಲುಪೇಟೆ ಪೊಲೀಸರು ಪಟ್ಟಣದ ಊಟಿ ಗೇಟ್ ಬಳಿ ಮಾಲು ಸಮೇತ ಬಂಧಿಸಿದ್ದಾರೆ. ತಾಲ್ಲೂಕಿನ ಹಂಗಳಪುರದ ವಾಹನ ಚಾಲಕ ಸುರೇಶ್, ಹಂಗಳ ಗ್ರಾಮದ ಪ್ರಕಾಶ್ ಬಂಧಿತ ಆರೋಪಿಗಳು. ಇವರು ಗೂಡ್ ಆಟೊದಲ್ಲಿ ಹಂಗಳ ಗ್ರಾಮದ ಕಡೆಯಿಂದ ಪಡಿತರ ರಾಗಿ ಮೂಟೆಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಖಚಿತ ಮಾಹಿತಿ ಮೇರೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಜಯಕುಮಾರ್ ಮಾರ್ಗದರ್ಶನದಲ್ಲಿ ಪೊಲೀಸರು ಅಡ್ಡಗಟ್ಟಿ, ಆಟೊ ಪರಿಶೀಲಿಸಿದ್ದಾರೆ. ಯಾವುದೇ ದಾಖಲೆ ಇಲ್ಲದ ಪಡಿತರ ರಾಗಿ ಕಂಡುಬಂದಿದೆ. ಪೊಲೀಸರು ಮಾಲು ಸಮೇತ ಚಾಲಕ ಸುರೇಶ್, ಪ್ರಕಾಶ್ ಇಬ್ಬರನ್ನೂ ವಶಕ್ಕೆ ಪಡೆದಿದ್ದಾರೆ. 1,600 ಕೆ.ಜಿ ಪಡಿತರ ರಾಗಿ ವಶಕ್ಕೆ ಪಡೆದು, ಆಹಾರ ನಿರೀಕ್ಷಕರ ಸಮ್ಮುಖದಲ್ಲಿ ಜಪ್ತಿ ಮಾಡಿದ್ದಾರೆ.

### ಮಟ್ಟಣ್ಣವರ್, ತಿಮರೋಡಿ ವಿರುದ್ಧ ಕ್ರಮಕ್ಕೆ ಬಿಜೆಪಿ ಮನವಿ

• **ಉದಯವಾಹಿನಿ, ಮಂಡ್ಯ**

ಧರ್ಮಸ್ಥಳದ ಬಗ್ಗೆ ಅವಹೇಳನಕಾರಿ, ಸತ್ಯಕ್ಕೆ ದೂರವಾದ ಹೇಳಿಕೆ ನೀಡಿ ಶ್ರದ್ಧಾ ಕೇಂದ್ರವಾಗಿರುವ ಶ್ರೀಕ್ಷೇತ್ರಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ಮುಖಂಡರು ಒತ್ತಾಯಿಸಿದರು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎ.ಇ. ಗಂಗಾಧರಸ್ವಾಮಿ ಅವರಿಗೆ ಮನವಿ ಪತ್ರ ನೀಡಿದರು. ಅಪಪ್ರಚಾರ ಮಾಡುತ್ತಿರುವ ಗಿರೀಶ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮರೋಡಿ, ಸಮೀರ್, ಕಾಂಗ್ರೆಸ್ ಮುಖಂಡರಾದ ರಮ್ಯಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಧರ್ಮಸ್ಥಳದಲ್ಲಿ ನೂರಾರು ಮೃತದೇಹಗಳನ್ನು ಹೂಳಿದ್ದೇನೆ. ತನಿಖೆ ನಡೆಸಿ ಎನ್ನುವ ಅನಾಮಿಕ ವ್ಯಕ್ತಿ ಯಾರು ಎಂಬ ಬಗ್ಗೆ ಯಾರಿಗೂ ಮಾಹಿತಿಯಿಲ್ಲ. ಆತನ ಹಿಂದಿರುವ ಕಾಣದ ಕೈಗಳ ಬಗ್ಗೆ ಸಮಗ್ರ ತನಿಖೆಯಾಗಬೇಕು ಎಂದು ಆಗ್ರಹಿಸಿದರು. ಧರ್ಮಸ್ಥಳ ಗ್ರಾಮದಲ್ಲಿ ಅನಾಥ ಮೃತದೇಹಗಳನ್ನು ಹೂಳಿದ ವಿಚಾರಕ್ಕೆ ಸಂಬಂಧಿಸಿದಂತೆ ಅನಾಮಿಕನ ದೂರಿನ ಮೇರೆಗೆ ನಡೆಯುತ್ತಿರುವ ಎಸ್‌ಐಟಿ ತನಿಖೆಗೆ ಬಿಜೆಪಿಯ ಸಂಪೂರ್ಣ ಬೆಂಬಲ ಇದೆ. ಆದರೆ, ಧರ್ಮಸ್ಥಳ ಕ್ಷೇತ್ರದ ಬಗ್ಗೆ ಎಡಪಂಥೀಯರ ಸಹಿತ ಸಾಮಾಜಿಕ ಜಾಲತಾಣಗಳಲ್ಲಿ ತೇಜೋವಧೆ ನಡೆಯುತ್ತಿದ್ದು, ಈ ಬಗ್ಗೆ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅಂತರಾಳದಿಂದ... EDITORIAL

# ಒಳಮೀಸಲು ಚಾರಿತ್ರಿಕ ನಿರ್ಣಯ ಜಾರಿಗೊಳಿಸುವ ಬದ್ಧತೆ ಅಗತ್ಯ

ರಾಜ್ಯದಲ್ಲಿ ಗುರುತಿಸಲಾಗಿರುವ 101 ಪರಿಶಿಷ್ಟ ಜಾತಿಗಳಿಗೆ ಲಭ್ಯ ಇರುವ ಶೇ 17ರಷ್ಟು ಮೀಸಲಾತಿಯನ್ನು ಎಡಗೈ ಸಂಬಂಧಿತ ಜಾತಿಗಳಿಗೆ ಪ್ರವರ್ಗ 'ಎ' ಅಡಿ ಶೇ 6, ಬಲಗೈ ಜಾತಿಗಳಿಗೆ ಪ್ರವರ್ಗ 'ಬಿ' ಅಡಿ ಶೇ 6 ಹಾಗೂ ಅಲೆಮಾರಿಗಳೂ ಸೇರಿದಂತೆ ಸ್ಪೃಶ್ಯ ಜಾತಿಗಳಿಗೆ ಶೇ 5ರಷ್ಟು ಪ್ರಮಾಣವನ್ನು ಉಪ ವರ್ಗೀಕರಣ ಮಾಡುವ ನಿರ್ಧಾರವನ್ನು ಇದಕ್ಕಾಗಿಯೇ ನಡೆದ ಸಚಿವ ಸಂಪುಟದ ವಿಶೇಷ ಸಭೆ ಕೈಗೊಂಡಿತ್ತು. ಮಹತ್ವದ ತೀರ್ಮಾನದ ವಿವರ ನೀಡಿರುವ ಮುಖ್ಯಮಂತ್ರಿ, ಒಳ ಮೀಸಲಾತಿಯ ಆದೇಶ ಹೊರಡಿಸಿದ ಕೂಡಲೇ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು, ಒಂದು ಬಾರಿಗೆ ವಯೋಮಿತಿ ಸಡಿಲಿಸಲು ತೀರ್ಮಾನಿಸಿದ್ದೇವೆ ಎಂದಿದ್ದಾರೆ.

ತೆಲಂಗಾಣದ ಬಳಿಕ ದೇಶದಲ್ಲೇ ಒಳಮೀಸಲಾತಿ ಜಾರಿಯ ದಿಟ್ಟ ನಿರ್ಧಾರವನ್ನು ಕೈಗೊಂಡ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ಪರಿಶಿಷ್ಟ ಜಾತಿಯ ಮೀಸಲಾತಿಯ ಫಲವನ್ನು ಕೆಲವೇ ಜಾತಿಗಳು ದಕ್ಕಿಸಿಕೊಂಡಿದ್ದು, ಮೀಸಲಾತಿಯೆಂಬ ಚಿಮ್ಮುಹಲಗೆಯನ್ನು ಬಳಸಿಕೊಂಡು ಜೀವನಮಟ್ಟ ಸುಧಾರಿಸಿಕೊಳ್ಳುವ ಅವಕಾಶ. ಅಂಚಿನಲ್ಲಿರುವ ಜಾತಿಗಳಿಗೆ ಸಿಕ್ಕಿರಲಿಲ್ಲ ಎಂಬ ಕೂಗಿತ್ತು. ವಿವಿಧ ಸಂಘಟನೆಗಳು ಒಳಮೀಸಲಾತಿಯ ಬೇಡಿಕೆ ಮುಂದಿಟ್ಟುಕೊಂಡು ಹೋರಾಟವನ್ನು ನಡೆಸುತ್ತಲೇ ಬಂದಿದ್ದವು. ಒಳ ಮೀಸಲಾತಿ ವಿಷಯವು ಚುನಾವಣೆಯ ಹೊತ್ತಿನ ಭರವಸೆಯಾಗಿಯೇ ಉಳಿದುಬಂದಿತ್ತು. 2023ರ ವಿಧಾನಸಭೆ ಚುನಾವಣೆ ಪೂರ್ವದಲ್ಲಿ ಇದನ್ನು ಗಂಭೀರವಾಗಿ ಪರಿಗಣಿಸಿದ ಕಾಂಗ್ರೆಸ್ ಪಕ್ಷ, ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ, ಪಕ್ಷ ಅಧಿಕಾರಕ್ಕೆ ಬಂದರೆ ಒಳಮೀಸಲಾತಿ ಜಾರಿ ಮಾಡುವುದಾಗಿ ಘೋಷಿಸಿತ್ತು. ಅದನ್ನು ತನ್ನ ಪ್ರಣಾಳಿಕೆಯಲ್ಲೂ ಪ್ರತಿಪಾದಿಸಿತ್ತು. ಒಳಮೀಸಲಾತಿಗೆ ಸಂಬಂಧಿಸಿ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗವನ್ನು 2024ರ ನವೆಂಬರ್ 12ರಂದು ಸರ್ಕಾರ ರಚಿಸಿತು. ಸಮೀಕ್ಷೆ ನಡೆಸಿದ ಆಯೋಗ 2025ರ ಆಗಸ್ಟ್ 1ರಂದು ತನ್ನ ವರದಿ ಸಲ್ಲಿಸಿತು. 101 ಮೂಲ ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿದ ಆಯೋಗ, ಪ್ರವರ್ಗ ಎ ಗೆ ಶೇ 1 (59 ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಜಾತಿಗಳು), ಪ್ರವರ್ಗ 'ಬಿ'ಗೆ ಶೇ 6 (18 ಎಡಗೈ ಜಾತಿಗಳು), ಪ್ರವರ್ಗ 'ಸಿ'ಗೆ ಶೇ 5 (17 ಬಲಗೈ ಜಾತಿಗಳು), ಪ್ರವರ್ಗ 'ಡಿ'ಗೆ ಶೇ 4 (ಭೋವಿ, ಲಂಬಾಣಿ, ಕೊರಮ, ಕೊರಚ), ಪ್ರವರ್ಗ 'ಇ'ಗೆ ಶೇ 1ರಂತೆ (3 ಜಾತಿಗಳು) ಹಂಚಿಕೆ ಮಾಡಿತ್ತು. ಸಚಿವ ಸಂಪುಟ ಸಭೆಯಲ್ಲಿ ಆಯೋಗದ ವರದಿಯನ್ನು ಮಂಡಿಸಿದ ಬಳಿಕ, ಅದರ ಮಾಹಿತಿಯು ಬಹಿರಂಗವಾಯಿತು. ವರದಿಯೇ ಅವೈಜ್ಞಾನಿಕವಾಗಿದೆ ಎಂದ ಬಲಗೈ ಸಂಬಂಧಿತ ಜಾತಿ ಸಂಘಟನೆಗಳು, ಪರಿಷ್ಕರಿಸದೇ ಜಾರಿ ಮಾಡಕೂಡದು ಎಂದು ಹೋರಾಟದ ಹಾದಿ ಹಿಡಿದವು. ವರದಿ ಜಾರಿಗೊಳಿಸಲೇಬೇಕು ಎಂದು ಎಡಗೈ ಸಂಬಂಧಿತ ಜಾತಿಯವರು ಪಟ್ಟು ಹಿಡಿದರು. ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ಐದು ಪ್ರವರ್ಗಗಳಾಗಿ ಉಪವರ್ಗೀಕರಣ ಮಾಡುವ ಆಯೋಗದ ಶಿಫಾರಸನ್ನು ಪರಿಷ್ಕರಿಸಿದ ಸರ್ಕಾರ, ಮೂರು ಪ್ರವರ್ಗಗಳಾಗಿ ವಿಂಗಡಣೆ ಮಾಡುವ ನಿರ್ಧಾರ ಕೈಗೊಂಡಿದೆ.

> ಒಳಮೀಸಲು ಜಾರಿಗೊಳಿಸುವ ಚಾರಿತ್ರಿಕ ನಿರ್ಣಯವನ್ನು ರಾಜ್ಯ ಸರ್ಕಾರ ಕೈಗೊಂಡಿದೆ. ಆದರೆ, ಜನಪದರಿಗೆ ನ್ಯಾಯ ದೊರಕಿಸಿಕೊಡುವ ಕೆಲಸವಿನ್ನೂ ಅಪೂರ್ಣವಾಗಿ ಉಳಿದಿದೆ.ಪರಿಶಿಷ್ಟ ಜಾತಿಯೊಳಗೆ ಒಳಮೀಸಲಾತಿ ಕಲ್ಪಿಸಬೇಕು ಎಂಬ ಮೂರು ದಶಕಗಳಿಗೂ ಹೆಚ್ಚಿನ ಸುದೀರ್ಘ ಹೋರಾಟ ಕೊನೆಗೂ ಫಲಿಸಿದೆ. ಈ ಚಾರಿತ್ರಿಕ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಗೊಂಡಿದೆ.

ಅಲೆಮಾರಿ ಸಮುದಾಯಗಳಿಗೆ ಶಿಫಾರಸು ಮಾಡಿದ್ದ ಪ್ರವರ್ಗ ಎ ಅಡಿ ಇದ್ದ ಶೇ 1ರಷ್ಟನ್ನು ಪ್ರವರ್ಗ ಸಿ ಅಡಿ ತಂದು ಸ್ಪೃಶ್ಯ ಪಟ್ಟಿಗೆ ವರ್ಗಾಯಿಸಲಾಗಿದೆ. ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಜಾತಿಗಳಿಗೆ ಪ್ರವರ್ಗ ಇ ಅಡಿ ಶಿಫಾರಸು ಮಾಡಿದ್ದ ಶೇ 1ರಷ್ಟು ಮೀಸಲಾತಿಯನ್ನು ಬಲಗೈ ಸಂಬಂಧಿತ ಜಾತಿಗಳಿಗೆ ಮರು ಹಂಚಿಕೆ ಮಾಡಿ ಶೇ 6ಕ್ಕೆ ಹೆಚ್ಚಿಸಲಾಗಿದೆ. ತಾಂತ್ರಿಕ ಕಾರಣಗಳಿಗಾಗಿ ಕೆಲವು ಜಾತಿಗಳನ್ನು ಉಪ ವರ್ಗೀಕರಣ ಮಾಡಿ, ಮೂರೇ ಪ್ರವರ್ಗದಡಿ ಒಳಮೀಸಲಾತಿ ಹಂಚಿಕೆ ಮಾಡಲಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ.ನಾಗಮೋಹನದಾಸ್ ಆಯೋಗ ಅತಿ ಹಿಂದುಳಿದವರೆಂದು ಗುರುತಿಸಲಾಗಿದ್ದ ಅಲೆಮಾರಿ, ಅರೆ ಅಲೆಮಾರಿ ಸಮುದಾಯದವರನ್ನು ಭೋವಿ, ಲಂಬಾಣಿ ಜಾತಿಯವರು ಇರುವ ಪ್ರವರ್ಗ 'ಸಿ'ಗೆ ಸೇರ್ಪಡೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ತಮಗೆ ನ್ಯಾಯ ಸಿಕ್ಕಿಲ್ಲ ಎಂದು ಅಲೆಮಾರಿಗಳು ಹೋರಾಟ ಮುಂದುವರಿಸಿದ್ದಾರೆ. ನಿಜವಾಗಿಯೂ ತಬ್ಬಲಿಗಳಾಗಿರುವ ಈ ಸಮುದಾಯವನ್ನು ಗುರುತಿಸಿರುವ ವಿಧಾನ ಸಮರ್ಥನೀಯವಲ್ಲ. ತಳಸ್ತರದ ನೋವು ಆಲಿಸಿ ನ್ಯಾಯ ಕೊಡಿಸುವ ಕೆಲಸವನ್ನು ಸರ್ಕಾರ ಆದ್ಯತೆ ಮೇರೆಗೆ ಮಾಡಬೇಕಿದೆ.


ಒಳಮೀಸಲಾತಿ ಜಾರಿಯ ನಿರ್ಧಾರ ಪ್ರಕಟಿಸಿರುವ ಮುಖ್ಯಮಂತ್ರಿಯವರು, ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆ ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿ ವರದಿ ನೀಡಲು ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗ ರಚಿಸುವುದಾಗಿ ಹೇಳಿದ್ದಾರೆ. ಸರ್ಕಾರದ ತೀರ್ಮಾನದಲ್ಲಿ ಮಾರ್ಪಾಡುಗಳ ಅಗತ್ಯ ಕಂಡುಬಂದರೆ ರಾಷ್ಟ್ರೀಯ ಜನಗಣತಿಯಲ್ಲಿನ ಅಂಕಿ-ಅಂಶಗಳನ್ನು ಆಧರಿಸಿ ಬದಲಾವಣೆಗೆ ಒಳಪಡಿಸುವ ಷರತ್ತಿಗೆ ಬದ್ಧವಾಗಿದೆ' ಎಂದೂ ಹೇಳಿದ್ದಾರೆ. ಶಿಫಾರಸು ಜಾರಿಯಿಂದ ತಮಗೆ ಘೋರ ಅನ್ಯಾಯವಾಗಿದೆ ಎಂಬ ಭಾವಿಸಿರುವ ಜನಪದರಿಗೆ ಶಾಶ್ವತ ಆಯೋಗ ಹಾಗೂ ರಾಷ್ಟ್ರೀಯ ಜನಗಣತಿಯ ದತ್ತಾಂಶಗಳ ಮೂಲಕ ನ್ಯಾಯ ಕೊಡಿಸುವ ಕೆಲಸ ಆಗಬೇಕಿದೆ. ಆಗಷ್ಟೆ, ಸಾಮಾಜಿಕ ನ್ಯಾಯ ನೈಜವಾಗಿ ಸಾಕಾರಗೊಂಡಂತೆ ಆಗುತ್ತದೆ. ಶಿಕ್ಷಣ, ಉದ್ಯೋಗ ಮತ್ತಿತರ ಸೌಲಭ್ಯ ಕಲ್ಪಿಸುವ ಮೂಲಕ ಉಪವರ್ಗೀಕರಣದ ಲಾಭ ಆಯಾ ಸಮುದಾಯಗಳಿಗೆ ದಕ್ಕುವಂತೆ ನೋಡಿಕೊಳ್ಳಬೇಕಾದ ಹೊಣೆಯೂ ಸರ್ಕಾರದ ಮೇಲಿದೆ.

---



ಕಲಾ ಸಾಹಿತ್ಯ
**ಕೃಷ್ಣಪ್ಪ ಲೇಖಕರು**
**ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು**

# ಪುರಸ್ಕೃತರು ಪ್ರೊ:ಯು ಆರ್ ಅನಂತಮೂರ್ತಿರವರ 11ನೇ ವರ್ಷದ ಪುಣ್ಯಸ್ಮರಣೆ



**ಉದಯವಾಹಿನಿ, ವಿಶೇಷ**

ಪ್ರೊ:ಯು ಆರ್ ಅನಂತಮೂರ್ತಿರವರು ಡಿಸೆಂಬರ್ 21, 1932 ರಂದು ಶಿವಮೊಗ್ಗ ಜಿಲ್ಲೆ ಮೇಳಿಗೆಯಲ್ಲಿ ಜನಿಸಿದರು. ತಂದೆ ರಾಜಗೋಪಾಲಾಚಾರ್ಯ ತಾಯಿ ಸತ್ಯಭಾಮ ಅವರ ಆಶೀರ್ವಾದದಿಂದ ಚಿಕ್ಕವಯಸ್ಸಿನಿಂದಲೂ ಸಂಸ್ಕಾರ ಜೊತೆಯಲ್ಲಿ ಗುಣ ಮಟ್ಟದ ಶಿಕ್ಷಣವನ್ನು ಇಂಟರ್ಮೀಡಿಯೆಟ್ ರವರೆಗೂ ಶಿವಮೊಗ್ಗದಲ್ಲಿ ಮುಗಿಸಿದರು.

ನಂತರ 1956ರಲ್ಲಿ ಇಂಗ್ಲಿಷ್ ಭಾಷಾ ಸಾಹಿತ್ಯದಲ್ಲಿ ಚಿನ್ನದ ಪದಕದೊಂದಿಗೆ ಎಂಎ ಪದವಿಗಳಿಸಿದರು.

ಶಿವಮೊಗ್ಗ,ಹಾಸನ ಕಾಲೇಜು ಮತ್ತು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿದ್ದರು. ನಂತರ ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನಲ್ಲಿ ರೀಡರ್ ಆಗಿದ್ದರು. ಸನ್ಮಾನ್ಯರು ಪ್ರಮುಖ ಲೇಖಕರಲ್ಲಿ ಒಬ್ಬರಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ವೈಚಾರಿಕ, ಸೈದ್ಧಾಂತಿಕ ಮತ್ತು ವೈಜ್ಞಾನಿಕ ದೃಷ್ಟಿ ಉಳ್ಳವರಾಗಿ,ಲೋಹಿಯಾ ವಿಚಾರಧಾರೆಯ ಪ್ರಭಾವಕ್ಕೊಳಗಾದ ಇವರು ಸಮಾಜವಾದ ಸಿದ್ಧಾಂತಗಳನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಜನಕ್ಕೆ ಮುಟ್ಟಿಸಿದ ಬರಹಗಾರರಾಗಿದ್ದರು. ವಿಚಾರವಾದಿ, ಸಂವೇದನಾಶೀಲರಾಗಿ, ಕಥೆ-ಕಾದಂಬರಿ,ವಿಮರ್ಶಾ ಲೇಖನಗಳ ಮೂಲಕ ಹೊಸ ಅಲೆಯನ್ನು ಎಬ್ಬಿಸಿದ ಅನನ್ಯ ಬರಹಗಾರರು ಎಂಬ ಕೀರ್ತಿಗೆ ಇವರು ಭಾಜನರಾಗಿದ್ದರು. ಎಂದೆಂದಿಗೂ ಮುಗಿಯದ ಕಥೆ,ಪ್ರಶ್ನೆ, ಮೌನಿ, ಆಕಾಶ ಮತ್ತು ಬೆಕ್ಕು ಎಂಬ ಕಥಾ ಸಂಕಲನ ರಚಿಸಿದ್ದಾರೆ. ಸಂಸ್ಕಾರ,ಭಾರತೀಪುರ, ಅವಸ್ಥೆ,ಭವ,ದಿವ್ಯ ಇವರು ಬರೆದ ಕಾದಂಬರಿಗಳಾಗಿವೆ.

ಅಜ್ಜನ ಹೆಗಲು ಸುಕ್ಕುಗಳು,ಮಿಥುನ, ಹದಿನೈದು ಪದ್ಯಗಳು ಇವರು ಬರೆದ ಕವಿತಾ ಸಂಕಲನಗಳಾಗಿವೆ.


ಪ್ರಜ್ಞೆ ಮತ್ತು ಪರಿಸರ, ಸನ್ನಿವೇಶ, ಸಮಕ್ಷಮ, ಪೂರ್ವಾಪರ, ಬೆತ್ತಲೆ ಪೂಜೆ ಏಕೆ ಕೂಡದು, ಸಂಸ್ಕೃತಿ ಮತ್ತು ಅಡಿಗ ಮೊದಲಾದ ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಮಿಥುನ ಸಂಕಲನದ ಕವಿತೆಗಳಲ್ಲಿ ಅವರ ಸಂವೇದನೆ ಚಿಂತನೆ ಹಾಗೂ ಸಂಸ್ಕೃತಿ ಪರವಾದ ಅವರ ತೀಕ್ಷ್ಣ ಸ್ವರೂಪದ ಅಲೋಚನೆಗಳ ಅಭಿವ್ಯಕ್ತಿಯನ್ನು ಗುರುತಿಸಬಹುದಾಗಿದೆ. ಗಾಂಧಿ, ಮಾರ್ಕ್ಸ್,ಲೋಹಿಯಾ ಚಿಂತನೆಗಳು ಜಾತಿ-ಮತ, ಧರ್ಮ, ನೀತಿ ಮಾನವ ಸ್ವಭಾವಗಳು ಎಲ್ಲವೂ ಅವರ ಸೂಕ್ಷ್ಮ ಪರಿಶೀಲನೆಗೆ ಒಳಪಟ್ಟಿವೆ.

ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿ ಕನ್ನಡ ಕಾದಂಬರಿ ಲೋಕದಲ್ಲಿ ಒಂದು ಪ್ರಮುಖ ಸಾಮಾಜಿಕ ಕಾದಂಬರಿ ಎನಿಸಿದೆ. ಹಾಗೂ ಭಾರತೀಪುರ ದೇಶದ ಸಮಕಾಲೀನ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುವ ಕೃತಿಯಾಗಿದೆ. ಅನಂತಮೂರ್ತಿಯವರ ಸಾಧನೆ ಸಿದ್ದಿಗಳಿಗೆ ಸಂದ ಪ್ರಶಸ್ತಿಗಳು ಹಲವಾರು; ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಮಾಸ್ತಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಗೊರೂರು ಪ್ರಶಸ್ತಿ,ಶಿಕರ್ ಸನ್ಮಾನ್ ಪ್ರಶಸ್ತಿ,ಹೋಮಿ ಬಾಬಾ ಪ್ರಶಸ್ತಿ ಮೊದಲಾದ ಪ್ರಶಸ್ತಿ-ಪುರಸ್ಕಾರಗಳು ದೊರೆತಿವೆ. ಕಲ್ಕತ್ತಾದ ರವೀಂದ್ರ ಭಾರತಿ ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿದೆ. ಅನಂತಮೂರ್ತಿಯವರು 69 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದರು. 1994 ರಲ್ಲಿ ಇವರ ಸಮಗ್ರ ಸಾಹಿತ್ಯಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. 1998 ರಲ್ಲಿ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಅನಂತಮೂರ್ತಿಯವರು ಕನ್ನಡದ ಮಹತ್ವದ ಬರಹಗಾರರಲ್ಲಿ ಒಬ್ಬರಾಗಿದ್ದು, ತಮ್ಮ ಸೃಜನಶೀಲ ಕೃತಿಗಳು, ಭಾಷಣಗಳು, ಲೇಖನಗಳ ಮೂಲಕ ನಾಡಿನ ಜನತೆಯನ್ನು ಬೌದ್ಧಿಕವಾಗಿ ಕ್ರಿಯಾಶೀಲ ಗೊಳಿಸಿದ್ದಾರೆ. ತಮ್ಮ ಆಳವಾದ ಅಧ್ಯಯನ, ವೈಚಾರಿಕತೆ,ಗಹನವಾದ ಚಿಂತನೆ, ಭಾಷಾ ಪ್ರಬುದ್ಧತೆ ಇವುಗಳಿಂದ ಕನ್ನಡ ಸಾಹಿತ್ಯಕ್ಕೆ ಒಂದು ಭದ್ರವಾದ ತಳಹದಿ ಹಾಕಿಕೊಟ್ಟಿದ್ದಾರೆ.


ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿ ಕನ್ನಡ ಸಾಹಿತ್ಯ,ಕಲೆ,ಸಂಸ್ಕೃತಿ ಮಹತ್ವವನ್ನು ವಿದೇಶಗಳಲ್ಲಿ ಪ್ರಚುರಪಡಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿಗಳಿಸಿ ಕೊಟ್ಟಿರುವ ಸಂಗತಿ ಸಕಲ ಕನ್ನಡಿಗರಿಗೂ ಹೆಮ್ಮೆ ತಂದಿದೆ. ಸನ್ಮಾನ್ಯರು ವಯೋಸಹಜದಿಂದಾಗಿ ತನ್ನ 82ನೇ ವಯಸ್ಸಿನಲ್ಲಿ ಅಂದರೆ ಆಗಸ್ಟ್ 22, 2014 ರಂದು ನಿಧನರಾದರು. ಇಂತಹ ಮೇರು ಸಾಹಿತಿಯನ್ನು ಭಾರತೀಯರಾದ ನಾವುಗಳು ಅವರ 11 ನೇ ವರ್ಷದ ಪುಣ್ಯಸ್ಮರಣೆಯ ದಿನದಂದು ಸ್ಮರಿಸಿ ನೆನೆಯುತ್ತಾ ಸನ್ಮಾನ್ಯರ ಆತ್ಮಕ್ಕೆ ಶಾಂತಿ ಮತ್ತು ಸದ್ಗತಿ ದೊರಕಲೆಂದು ಆ ಭಗವಂತನಲ್ಲಿ ಪ್ರಾರ್ಥಿಸೋಣ.


---

# ಭಾದ್ರಪದ ಮಾಸದ ಪ್ರಯುಕ್ತ ಪ್ರೋಷ್ಟಪದಿ ಭಾಗವತ ಧಾರ್ಮಿಕ ಪ್ರವಚನ










• **ಉದಯವಾಹಿನಿ, ಬೆಂಗಳೂರು**

**ವಿಜಯ ಮಧ್ವ ಸಂಘ :** ಶ್ರೀ ಚಂದ್ರಶೇಖರ ಆಚಾರ್ಯರಿಂದ ಆಗಸ್ಟ್ 24 ರಿಂದ ಸೆಪ್ಟೆಂಬರ್ 7ರ ವರೆಗೆ ಪ್ರತಿದಿನ ಬೆಳಗ್ಗೆ 10-30ಕ್ಕೆ ಮತ್ತು ಶ್ರೀ ಜಿ.ಪಿ. ನಾಗರಾಜಾಚಾರ್ಯರಿಂದ ಆಗಸ್ಟ್ 24 ರಿಂದ 28ರ ವರೆಗೆ ಪ್ರತಿದಿನ ಸಂಜೆ 6-15ಕ್ಕೆ ಪ್ರೋಷ್ಟಪದಿ ಭಾಗವತಪ್ರವಚನ.ಸ್ಥಳ : ವಿಜಯ ಮಧ್ವ ಸಂಘ, 37/2, 2ನೇ ಮುಖ್ಯರಸ್ತೆ, ಗಂಗಾಧರ ಬಡಾವಣೆ, ವಿಜಯನಗರ, ಬೆಂಗಳೂರು-560040



**ಶ್ರೀ ವ್ಯಾಸರಾಜ ಮಠ ಸೋಸಲೆ :** ಶ್ರೀ ಕಲ್ಲಾಪುರ ಪವಮಾನಾಚಾರ್ಯರಿಂದ ಆಗಸ್ಟ್ 24 ರಿಂದ ಸೆಪ್ಟೆಂಬರ್ 7ರ ವರೆಗೆ ಪ್ರೋಷ್ಟಪದಿ ಭಾಗವತ ಪ್ರವಚನ. ಪ್ರತಿದಿನ ಸಂಜೆ 4-30ಕ್ಕೆ. ಸ್ಥಳ : ಶ್ರೀ ವ್ಯಾಸರಾಜ ಮಠ (ಸೋಸಲೆ),, 5ನೇ ಮುಖ್ಯರಸ್ತೆ, ರಾಜಾಜಿನಗರ, 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು-560010

**ಬನಶಂಕರಿ ಸರ್ವಜ್ಞ ಸೇವಾ ಬಳಗ :** ಡಾ||ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ಆಗಸ್ಟ್ 24 ರಿಂದ 31ರ ವರೆಗೆ ಪ್ರೋಷ್ಟಪದಿ ಭಾಗವತ ಪ್ರವಚನ. ಪ್ರತಿದಿನ ಸಂಜೆ 6-30ಕ್ಕೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಹೊಸಕೆರೆಹಳ್ಳಿ, ಬೆಂಗಳೂರು-560085

**ಶ್ರೀ ರಾಘವೇಂದ್ರ, ಸೇವಾ ಸಮಿತಿ:** ಶ್ರೀ ಖೇಡಾ ಪ್ರಮೋದಾಚಾರ್ಯರಿಂದ ಆಗಸ್ಟ್ 24 ರಿಂದ ಸೆಪ್ಟೆಂಬರ್ 7ರ ವರೆಗೆ ಪ್ರೋಷ್ಟಪದಿ ಭಾಗವತ ಪ್ರವಚನ. ಪ್ರತಿದಿನ ಸಂಜೆ 7-00ಕ್ಕೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಬೆಂಗಳೂರು-560003

**ಶ್ರೀ ಗುರುರಾಘವೇಂದ್ರ ಸೇವಾ ಸಮಿತಿ;** ಶ್ರೀ ಹೊಳಲಗುಂದ ಜಯತೀರ್ಥಚಾರ್ಯರಿಂದ ಆಗಸ್ಟ್ 24 ರಿಂದ ಸೆಪ್ಟೆಂಬರ್ 7ರ ವರೆಗೆ ಪ್ರೋಷ್ಟಪದಿ ಭಾಗವತ ಪ್ರವಚನ. ಪ್ರತಿದಿನ ಸಂಜೆ 7-00ಕ್ಕೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಬೆಂಗಳೂರು-560021

---

# ಗಣೇಶನಿಗೆ ಪ್ರಿಯವಾದ ಪಾನ್ ಲಡ್ಡು ಮಾಡಿ! ರುಚಿ ಮಾತ್ರ ಸೂಪರ್

- ತುರಿದ ಖೋವಾ - 1 ಕಪ್
- ತಾಜಾ ತೆಂಗಿನಕಾಯಿ ತುರಿ - ಅರ್ಧ ಕಪ್
- ಸಕ್ಕರೆ ಪುಡಿ (ಅಥವಾ ಕಲ್ಲು ಸಕ್ಕರೆ ಪುಡಿ ಬಳಸಬಹುದು) - ಅರ್ಧ ಕಪ್
- ತಾಜಾ ವೀಳ್ಯದೆಲೆಗಳು (ನೈಸ್ ಆಗಿ ಕತ್ತರಿಸಿದ್ದು) 8 ರಿಂದ 10
- ಏಲಕ್ಕಿ ಪುಡಿ - ಅರ್ಧ ಚಮಚ
- ಗ್ರೀನ್ ಪಾನ್ ಮಸಾಲಾ - 2 ದೊಡ್ಡ ಚಮಚ
- ಕತ್ತರಿಸಿದ ಡ್ರೈಫ್ರೂಟ್ಸ್ (ಬಾದಾಮಿ, ಗೋಡಂಬಿ, ಪಿಸ್ತಾ) - ಕಾಲು ಕಪ್
- ತುಪ್ಪ - 2 ದೊಡ್ಡ ಚಮಚ , ಗುಲಾಬಿ ಬಣ್ಣ - ಸ್ವಲ್ಪ

ಗಣೇಶ ಚತುರ್ಥಿಗೆ ದಿನಗಣನೆ ಆರಂಭವಾಗಿದೆ. ಈ ಶುಭ ಸಂದರ್ಭದಲ್ಲಿ ಭಕ್ತರು ತಮ್ಮ ಪ್ರೀತಿಯ ಗಣಪನಿಗೆ ವಿಶೇಷ ಖಾದ್ಯಗಳನ್ನು ಅರ್ಪಿಸಲು ಬಯಸುತ್ತಾರೆ. ಮೋದಕಗಳ ಜೊತೆಗೆ ಹೊಸ, ವಿಶಿಷ್ಟವಾದ ಸಿಹಿ ಪದಾರ್ಥಗಳನ್ನು ತಯಾರಿಸಲು ಬಯಸುವವರಿಗೆ ಪಾನ್ ಲಡ್ಡು ಒಂದು ಅತ್ಯುತ್ತಮ ಆಯ್ಕೆಯಾಗಿದೆ. ಇದು ರುಚಿಕರವಾಗಿದ್ದು, ತಯಾರಿಸಲು ಸುಲಭವಾಗಿದೆ. ಇದರ ವಿಶಿಷ್ಟ ರುಚಿ, ಆಕರ್ಷಕ ನೋಟ ಎಲ್ಲರ ಗಮನ ಸೆಳೆಯುತ್ತದೆ. ಈ ಗಣೇಶ ಚತುರ್ಥಿಗೆ ವಿಶೇಷವಾದ ಪಾನ್ ಲಡ್ಡುಗಳನ್ನು ತಯಾರಿಸುವ ಮೂಲಕ ಅತಿಥಿಗಳ ಮೆಚ್ಚುಗೆ ಗಳಿಸಬಹುದು. ಗಣೇಶ ಚತುರ್ಥಿಯು ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ.

ವಿಶೇಷವಾಗಿ, ಈ ಹಬ್ಬವು ಭಾರತದಲ್ಲಿ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳಲ್ಲಿ ಅತ್ಯಂತ ಅದ್ದೂರಿಯಾಗಿ ನಡೆಯುತ್ತದೆ. ಈ ಬಾರಿ ಗಣೇಶ ಚತುರ್ಥಿ ಆಗಸ್ಟ್ 27 ರಂದು ಬಂದಿದೆ. ಈ ಹಬ್ಬವು ಒಟ್ಟು 10 ದಿನಗಳ ಕಾಲ ನಡೆಯಲಿದೆ. ಭಕ್ತರು ಗಣೇಶ ಮೂರ್ತಿಗಳನ್ನು ಮನೆಗಳಲ್ಲಿ ಅಥವಾ ಸಾರ್ವಜನಿಕ ಪೆಂಡಾಲ್‌ಗಳಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುತ್ತಾರೆ. ಮೋದಕ, ಲಾಡು, ಮತ್ತು ಇತರ ಸಿಹಿ ತಿಂಡಿಗಳನ್ನು ನೈವೇದ್ಯವಾಗಿ ಅರ್ಪಿಸಲಾಗುತ್ತದೆ. ಈ ಬಾರಿ ನೀವು ಪಾನ್ ಲಡ್ಡು ಮಾಡಬಹುದು.



**ಪಾನ್ ಲಡ್ಡು ತಯಾರಿಸುವ ವಿಧಾನ :** ಮೊದಲು ಒಂದು ಬಾಣಲೆಯಲ್ಲಿ ತುಪ್ಪ ಬಿಸಿ ಮಾಡಿ. ಖೋವಾವನ್ನು ಹಾಕಿ ಕಂದು ಬಣ್ಣ (ಬ್ರೌನ್) ಬರುವವರೆಗೆ ನಿಧಾನವಾಗಿ ಹುರಿಯಿರಿ. ನಂತರ ತಾಜಾ ತೆಂಗಿನಕಾಯಿ ತುರಿ ಮತ್ತು ಕತ್ತರಿಸಿದ ಡ್ರೈಫ್ರೂಟ್ಸ್‌ಗಳಾದ ಬಾದಾಮಿ, ಗೋಡಂಬಿ, ಪಿಸ್ತಾ ಹಾಕಿ. 2 ನಿಮಿಷಗಳ ಕಾಲ ಚೆನ್ನಾಗಿ ಮಿಕ್ಸ್ ಮಾಡಿ. ಮಿಶ್ರಣ ತಣ್ಣಗಾದ ನಂತರ, ಅದಕ್ಕೆ ಕತ್ತರಿಸಿದ ವೀಳ್ಯದೆಲೆ, ಏಲಕ್ಕಿ ಪುಡಿ, ಗ್ರೀನ್ ಪಾನ್ ಮಸಾಲಾ, ಸಕ್ಕರೆ ಪುಡಿಯನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಈಗ ಮಿಶ್ರಣವನ್ನು ಸಣ್ಣಲಡ್ಡುಗಳಾಗಿ ಮಾಡಿ (ಕಟ್ಟಿ). ಮಿಶ್ರಣ ಸ್ವಲ್ಪ ಒಣಗಿದಂತೆ ಅನಿಸಿದರೆ, ಸ್ವಲ್ಪ ಬಿಸಿ ಹಾಲು ಸೇರಿಸಿ ಮಿಕ್ಸ್ ಮಾಡಬಹುದು. ತಯಾರಾದ ಪಾನ್ ಲಡ್ಡುಗಳನ್ನು ತಣ್ಣಗಾಗಲು ಬಿಡಿ. ಬಳಿಕ ಗಣೇಶನಿಗೆ ಪೂಜೆಗೆ ಅಥವಾ ನೈವೇದ್ಯವಾಗಿ ಅರ್ಪಿಸಬಹುದು. ಈ ಪಾನ್ ಲಡ್ಡು ಖಾದ್ಯವು ಸುಲಭವಾಗಿದ್ದು, ಹಬ್ಬದ ಸಂಭ್ರಮವನ್ನು ಹೆಚ್ಚಿಸುತ್ತದೆ.

**ಈ ರೀತಿಯೂ ಲಡ್ಡು ಮಾಡಬಹುದು :** ಮೊದಲಿಗೆ, ವೀಳ್ಯದೆಲೆಯನ್ನು ಸಣ್ಣಗೆ ಹೆಚ್ಚಿಟ್ಟುಕೊಳ್ಳಬೇಕು ಅಥವಾ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಕೊಳ್ಳಬೇಕು. ಇದು ಲಡ್ಡು ತಯಾರಿಕೆಯ ಪ್ರಥಮ ಹಂತವಾಗಿದೆ. ನಂತರ, ಒಂದು ಬಟ್ಟಲಿನಲ್ಲಿ ತುರಿದ ತೆಂಗಿನಕಾಯಿ, ಖೋಯಾ ಮತ್ತು ದಪ್ಪ ಹಾಲನ್ನು ಒಟ್ಟಿಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಈ ಮಿಶ್ರಣವು ಲಡ್ಡಿಗೆ ಮುಖ್ಯ ಆಧಾರವಾಗಿರುತ್ತದೆ. ಇದಕ್ಕೆ ರುಬ್ಬಿದ ವೀಳ್ಯದೆಲೆ, ಏಲಕ್ಕಿ ಪುಡಿ, ಫೆನ್ನೆಲ್ ಬೀಜಗಳು, ಸಣ್ಣಗೆ ಹೆಚ್ಚಿದ ಗೋಡಂಬಿಯನ್ನು ಸೇರಿಸಿ ಚೆನ್ನಾಗಿ ಬೆರೆಸಬೇಕು. ಎಲ್ಲಾ ಪದಾರ್ಥಗಳು ಸಮನಾಗಿ ಬೆರೆಯುವಂತೆ ನೋಡಿಕೊಳ್ಳಿ. ಈ ತಯಾರಾದ ಮಿಶ್ರಣವನ್ನು ಸುಮಾರು 10 ನಿಮಿಷಗಳ ಕಾಲ ರೆಫ್ರಿಜರೇಟರ್‌ನಲ್ಲಿ ಇಡಬೇಕು. ಇದು ಮಿಶ್ರಣವನ್ನು ಗಟ್ಟಿಯಾಗಿಸಿ ಲಡ್ಡು ತಯಾರಿಸಲು ಅನುಕೂಲ ಮಾಡಿಕೊಡುತ್ತದೆ. ನಂತರ, ಮಿಶ್ರಣದಿಂದ ಸಣ್ಣ ಉಂಡೆಗಳನ್ನು ಮಾಡಿ, ಅವುಗಳ ಮಧ್ಯದಲ್ಲಿ ಸ್ವಲ್ಪ ಗುಲ್ಕಂಡ್ ಇಟ್ಟು ಮತ್ತೆ ಚೆನ್ನಾಗಿ ಉಂಡೆಗಳನ್ನು ಕಟ್ಟಬೇಕು. ಇದು ಪಾನ್ ಲಡ್ಡಿಗೆ ವಿಶೇಷ ರುಚಿ ನೀಡುತ್ತದೆ. ಅಂತಿಮವಾಗಿ, ಈ ಉಂಡೆಗಳನ್ನು ತೆಂಗಿನಕಾಯಿ ಪುಡಿಯಲ್ಲಿ ಖುಸ್ ಸಿರಪ್, ತೆಂಗಿನಕಾಯಿ ಮಿಶ್ರಣದಲ್ಲಿ ಸುತ್ತಿ ಅಲಂಕರಿಸಬೇಕು. ಇಷ್ಟು ಮಾಡಿದರೆ ರುಚಿಕರವಾದ ಪಾನ್ ಲಡ್ಡು ಸಿದ್ಧ.

---

# ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಷಡ್ಯಂತ್ರಕ್ಕೆ ಕಠಿಣ ಕ್ರಮ ಕೈಗೊಳ್ಳಿ!

• **ಉದಯವಾಹಿನಿ, ಬೆಂಗಳೂರು**

ಕೊಟ್ಯಾಂತರ ಹಿಂದೂಗಳ ಭಕ್ತಿಭಾವದ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ದುರುದ್ದೇಶಿತ ಪ್ರಚಾರ ಹಿಂದೂ ಸಮಾಜದಲ್ಲಿ ಭಾರೀ ಆಕ್ರೋಶವನ್ನು ಉಂಟುಮಾಡಿದೆ. ಅನಾಮಿಕನ ಹೇಳಿಕೆಯನ್ನು ಆಧರಿಸಿ ತನಿಖೆ ನಡೆದರೂ ಯಾವುದೇ ಸತ್ಯ ಹೊರಬಾರದೆ ಇರುವ ಸಂದರ್ಭದಲ್ಲಿ, ಕೆಲವು ಯೂಟ್ಯೂಬ್ ಚಾನೆಲ್‌ಗಳು ಹಾಗೂ ಅಂತರಾಷ್ಟ್ರೀಯ ಮಾಧ್ಯಮಗಳು ಸುಳ್ಳು ವರದಿಗಳನ್ನು ಪ್ರಸಾರ ಮಾಡಿರುವುದು ತೀವ್ರ ಖಂಡನೀಯ. ಇದು ಕೇವಲ ತಾತ್ಕಾಲಿಕ ಘಟನೆ ಅಲ್ಲ, ಹಿಂದೂ ಧಾರ್ಮಿಕ ಕ್ಷೇತ್ರಗಳ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಪಿತೂರಿಯ ಭಾಗವೆಂಬುದು ಸ್ಪಷ್ಟವಾಗಿದೆ.



ಈ ಹಿನ್ನೆಲೆಯಲ್ಲಿ ಇಂದು ಹಿಂದೂ ರಾಷ್ಟ್ರ ಸಮನ್ವಯ ಸಮಿತಿಯ ನೇತೃತ್ವದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮತ್ತು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಶ್ರೀ. ಮೋಹನ್ ಗೌಡ, ಯುವ ಬ್ರಿಗೇಡ್‌ನ ಶ್ರೀ. ಚಂದ್ರಶೇಖರ್, ಶ್ರೀರಾಮ ಸೇನೆಯ ಶ್ರೀ.ಸುಂದರೇಶ್ ನರ್ಗಲ್, ಸೇವಾ ಕನ್ನಡಿಗ ಟ್ರಸ್ಟ್‌ನ ಶ್ರೀ.ಲಕ್ಷ್ಮಣ್ ಗೌಡ, ಹಿಂದೂ ಮುಖಂಡರಾದ ಶ್ರೀ.ಎಂ.ಎಲ್. ಶಿವಕುಮಾರ, ಶ್ರೀ. ಶರತ್ ಕುಮಾರ್ ಸೇರಿದಂತೆ ಹಲವಾರು ಹಿಂದೂ ಮುಖಂಡರು, ವಕೀಲರು ಮಹಿಳೆಯರು ಉಪಸ್ಥಿತರಿದ್ದರು. ಮಾನ್ಯ ಜಿಲ್ಲಾಧಿಕಾರಿಗಳು ಮನವಿಯನ್ನು ಸ್ವೀಕರಿಸಿ ಮುಖ್ಯಮಂತ್ರಿಗಳಿಗೆ ತಲುಪಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

**ಬೇಡಿಕೆಗಳು**

- ಧರ್ಮಸ್ಥಳದ ಅಪಮಾನ ಮಾಡಿದವರ ಮೇಲೆ ಎಸ್‌ಐಟಿ ಮೂಲಕ ಸಂಪೂರ್ಣ ತನಿಖೆ ನಡೆಸಬೇಕು.
- ಸುಳ್ಳು, ಅಪಪ್ರಚಾರ ನಡೆಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು.
- ಹಿಂದೂ ಧಾರ್ಮಿಕ ಕೇಂದ್ರಗಳನ್ನು ಎಡಪಂಥೀಯ ಒತ್ತಡ, ಅಪಪ್ರಚಾರದಿಂದ ರಕ್ಷಿಸಲು ಶಾಶ್ವತ ವ್ಯವಸ್ಥೆ ಮಾಡಬೇಕು.

---

# ರಾಮಾಯಣ



ಶ್ರೀರಾಮನು ಅರಣ್ಯದಲ್ಲಿದ್ದ ಋಷಿಗಳನ್ನು ಸಂದರ್ಶಿಸಿದ್ದು

• ಹಿಂದಿನ ಸಂಚಿಕೆಯಿಂದ

## 116 ನೆಯ ಅಧ್ಯಾಯ

ಲಕ್ಷ್ಮಣನು ಕೆಣಕಲ್ಪಟ್ಟ ಕೃಷ್ಣಸರ್ಪದಂತೆ ನಿಟ್ಟುಸಿರುಬಿಡುತ್ತ ಶ್ರೀರಾಮನನ್ನು ಕುರಿತು ಎಲೈ ಸ್ವಾಮಿಯೆ, ನೀನು ಸಮಸ್ತ ಪ್ರಾಣಿಗಳಿಗೂ ಒಡೆಯನಾದ ದೇವೇಂದ್ರನಿಗೆ ಸಮಾನನಾದವನು. ಅಂಥ ನೀನು ಹೀಗೆ ಅನಾಥನಂತೆ ಕಣ್ಣೀರುಬಿಡುವುದು ಉಚಿತವಲ್ಲ. ಶಿಷ್ಯನಾದ ನಾನಿರುವಾಗ ನಿನಗೆ ದುಃಖವೇನು ? ನಾನು ಒಂದೇ ಬಾಣದಿಂದ ಈ ರಾಕ್ಷಸನನ್ನು ಕೊಂದು ಆತನ ರಕ್ತದಿಂದ ಈ ಭೂಮಿಯಲ್ಲಿರುವ ಭೂತಭೇತಾಳಗಳಿಗೆ ತೃಪ್ತಿ ಮಾಡುತ್ತೇನೆ. ಪೂರ್ವದಲ್ಲಿ ರಾಜ್ಯಾಧಿವತ್ಯವನ್ನು ಬಯಸಿ ನಮ್ಮನ್ನು ವನಕ್ಕೆ ಕಳುಹಿಸಿದ ಭರತನ ಮೇಲೆ ಹುಟ್ಟಿದಂಥ ಕೋಪವನ್ನು ಈ ವಿರಾಧನ ಮೇಲೆ ತೋರಿಸುತ್ತೇನೆ. ದೇವೇಂದ್ರನು ಕೋಪಿಸಿಕೊಂಡು ವಜ್ರಾಯುಧವನ್ನು ಪರ್ವತದ ಮೇಲೆ ಬಿಟ್ಟಂತೆ ನನ್ನ ಭುಜಬಲಪರಾಕ್ರಮದಿಂದ ಒಂದು ಬಾಣವನ್ನು ಇವನ ವಕ್ಷಸ್ಥಳದಲ್ಲಿ ಪ್ರಯೋಗಿಸುತ್ತೇನೆ. ಅದರಿಂದ ಈ ರಾಕ್ಷಸನು ಗಾಯವಡೆದು ಸುರುಳಿಕೊಂಡು ಬೀಳುವನು. ನನ್ನ ಸಾಮರ್ಥ್ಯವನ್ನು ನೋಡು ಎಂದು ನುಡಿದನು.

**ವಿರಾಧನು ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋದದ್ದು:**

ಆಮೇಲೆ ವಿರಾಧನು ತನ್ನ ಗಂಭೀರವಾದ ಧ್ವನಿಯು ಸಮಸ್ತ ವನಾಂತರದಲ್ಲಿಯೂ ಪ್ರತಿಧ್ವನಿಮಾಡುವ ಹಾಗೆ ರಾಮಲಕ್ಷ್ಮಣರನ್ನು ಕುರಿತು ಎಲೇ ಪ್ರಾಣಿಗಳಿರಾ, ನೀವಾರು ಎಲ್ಲಿಂದ ಬಂದಿರಿ ಯಾವ ದಿಕ್ಕಿಗೆ ಹೋಗಬೇಕು ನಿಮ್ಮ ಹೆಸರೇನು ನಿಮ್ಮ ಕುಲವಾವುದು ನೀವಾರ ಮಕ್ಕಳು ಎಂದು ಕೇಳಿದನು.

ಶ್ರೀರಾಮನು ಕಿಡಿಯುದುರುತ್ತಿದ್ದ ಮುಖವುಳ್ಳ ವಿರಾಧನನ್ನು ಕುರಿತು ಎ ರಾಕ್ಷಸ ನಮ್ಮದು ಇಕ್ಷ್ವಾಕುವಂಶ, ನಮ್ಮ ತಂದೆಯು ದಶರಥ ಮಹಾರಾಜ, ನಮ್ಮ ಹೆಸರು ರಾಮಲಕ್ಷ್ಮಣರು. ನೀನಾರು ನಿನ್ನ ಸ್ವರೂಪವನ್ನು ತಿಳಿಯ ಹೇಳು. ನೀನು ಏನು ಕಾರಣ ಈ ದಂಡಕಾರಣ್ಯದಲ್ಲಿ ಸಂಚರಿಸುತ್ತಿದ್ದೀಯೆ ಎಂದು ಕೇಳಿದನು. ವಿರಾಧನು ಎಲೈ ರಾಮನೆ, ನಾನು ಜವನ ಕುಮಾರನು. ನನ್ನ ತಾಯಿಯು ಶತಪ್ರದೆ. ನನ್ನ ಹೆಸರು ವಿರಾಧ. ನಾನು ಪೂರ್ವದಲ್ಲಿ ಬ್ರಹ್ಮದೇವನನ್ನು ಕುರಿತು ಉಗ್ರವಾದ ತಪಸ್ಸನ್ನು ಮಾಡಿ ಆತನು ಪ್ರಸನ್ನನಾಗಲು ಲೋಕದಲ್ಲಿ ಶಸ್ತ್ರಾಸ್ತ್ರಗಳಿಂದ ಗಾಯವಡೆಯದಂತೆ ವರವನ್ನು ಬೇಡಿಕೊಂಡನು. ಆದ್ದರಿಂದ ನಾನು ನಿಮ್ಮ ಶಸ್ತ್ರಾಸ್ತ್ರಗಳಿಗೆ ಸಾಧ್ಯನಾಗುವವನಲ್ಲ. ನೀವು ಈ ಸ್ತ್ರೀಯ ಮೇಲಣ ಅಪೇಕ್ಷೆಯನ್ನು ಬಿಟ್ಟು ನಿಮ್ಮ ದಾರಿಗೊಂಡು ಶೀಘ್ರವಾಗಿ ಓಡಿಹೋಗಿರಿ. ನಾನು ನಿಮ್ಮ ಮೇಲಣ ದಯೆಯಿಂದ ನಿಮ್ಮನ್ನು ಪ್ರಾಣಸಹಿತವಾಗಿ ಬಿಡುವೆನು ಎಂದು ನುಡಿದನು. ಶ್ರೀರಾಮನು ಕೋಪಾಟೋಪದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ವಿಕಟಾಂಗನಾದ ವಿರಾಧನನ್ನು ನೋಡಿ ಎಲೇ ನೀ ರಾಕ್ಷಸ ನಿನ್ನ ಜನ್ಮವನ್ನು ಸುಡು. ನಿನಗೆ ಅಂತ್ಯಕಾಲವು ಸಂನಿಹಿತವಾಯಿತು. ನೀನು ರಣರಂಗದಲ್ಲಿ ಇದಿರಾದರೆ ಜೀವಸಹಿತವಾಗಿ ತಿರುಗಿ ಹೋಗಲಾರೆ ಎಂದು ನುಡಿದು ಬಿಲ್ಲಿಗೆ ಹೆದೆಯನ್ನೇರಿಸಿ ಕೂರಂಬುಗಳನ್ನು ಹೂಡಿ ವಿರಾಧನ ಮೇಲೆ ಪ್ರಯೋಗಿಸಿದನು.

ಮುಂದುವರಿಯುವುದು...


---

# ಹೃದಯ ಗರ್ಭದಲ್ಲೊಂದು ಅಗ್ನಿಪಥ



**ವಿಶ್ವಾಸ್.ಡಿ.ಗೌಡ**

**ಉದಯವಾಹಿನಿ, ವಿಶೇಷ**




ಸಾವಿರಾರು ವರ್ಷಗಳ ಇತಿಹಾಸ ಇರುವ ಕನ್ನಡ ಸಾಹಿತ್ಯವು ವಿಶ್ವದಾದ್ಯಂತ ಹೆಸರು ಮಾಡುತ್ತಿದೆ. ಇತ್ತೀಚೆಗೆ ಕನ್ನಡ ಸಾಹಿತ್ಯಕ್ಕೆ ಬುಕ್ಕರ್ ಪ್ರಶಸ್ತಿ ದೊರೆಯುವುದರ ಮೂಲಕ ವಿಶ್ವ ಪಥದಲ್ಲಿ ಕನ್ನಡಕ್ಕೆ ಇರುವ ಗೌರವವನ್ನು ಎತ್ತಿ ತೋರಿದೆ. ಸಾಹಿತ್ಯ ಎಂಬುವುದು ಒಂದು ತಪಸ್ಸಿನ ಅಧ್ಯಾಯ ಎಂದರೆ ತಪ್ಪಾಗಲಾರದು. ಆದಿಕವಿ ಪಂಪ, ರನ್ನ, ಜನ್ನ, ನಾಗವರ್ಮ, ಕುಮಾರವ್ಯಾಸ, ಕುವೆಂಪು, ದ.ರಾ.ಬೇಂದ್ರೆ, ಮೂರ್ತಿರಾಯರು ಸೇರಿದ ಹಾಗೆ ಸಾವಿರಾರು ಸಾಹಿತಿಗಳು ತಮ್ಮ ರಚನೆಯ ಸಾಹಿತ್ಯವನ್ನು ಕನ್ನಡ ಲೋಕಕ್ಕೆ ಅರ್ಪಣೆ ಮಾಡಿದ್ದಾರೆ. ತಮ್ಮ ರಚನೆ ಮಾಡಿರುವ ಸಾಹಿತ್ಯದ ಮೂಲಕ ಸಮಾಜಕ್ಕೆ ಅನೇಕ ಸಂದೇಶವನ್ನು ನೀಡುವುದರ ಮೂಲಕ ಹೊಸ ಯುಗವನ್ನೇ ಸೃಷ್ಟಿ ಮಾಡಿದ್ದಾರೆ.

ಕನ್ನಡ ಸಾಹಿತ್ಯ ಎಂಬುದು ಇತ್ತೀಚೆಗೆ ಓದುಗರಿಲ್ಲದೆ ದೂರ ಉಳಿದಿದ್ದರೂ ಬರಹಗಾರರಿಂದ ಈ ಸಾಹಿತ್ಯವು ಇಂದಿಗೂ ಉನ್ನತ ಸ್ಥಾನಕ್ಕೆ ತಲುಪುತ್ತಿದೆ. ಕಥೆ ಕವನ ನಾಟಕ ಕಾದಂಬರಿ ಸೇರಿದ ಹಾಗೆ ಎಲ್ಲಾ ಬಗೆಯ ಸಾಹಿತ್ಯವು ಕನ್ನಡ ಲೋಕದಲ್ಲಿ ಮತ್ತು ವಿಶ್ವದಲ್ಲಿ ಹೆಸರುವಾಸಿಯಾಗಿದೆ. ಇತ್ತೀಚೆಗೆ ಯುವ ಬರಹಗಾರರು ಸಮಾಜಕ್ಕೆ ಬೇಕಾಗುವಂತಹ ಮಾಹಿತಿಗಳನ್ನು ತಮ್ಮ ಸಾಹಿತ್ಯದಲ್ಲಿ ಬರೆಯುತ್ತಿರುವುದು ನಿಜಕ್ಕೂ ಶ್ಲಾಘನೆ ವಿಷಯ. ಕನ್ನಡ ಸಾಹಿತ್ಯದ ಮೂಲಕ ಸಮಾಜದ ಬದಲಾವಣೆ ಮತ್ತು ಸಮಾಜದಲ್ಲಿ ನಡೆಯುತ್ತಿರುವ ಧೋರಣೆಗಳ ಬಗ್ಗೆ ನೇರವಾಗಿ ಪದ್ಯಗಳ ಮೂಲಕ ಹೇಳುವುದರಿಂದ ಎಲ್ಲರ ಮನಸ್ಥಿತಿಗೆ ಬೇಗ ತಲುಪುತ್ತದೆ. ಇಂತಹ ಕೆಲಸವನ್ನು ಮಾಡುತ್ತಿರುವ ನಮ್ಮ ಮುತ್ತೇಶ್ ಮೆಣಸಿನಕಾಯಿ ರವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಇವರು ಸಾರಿಗೆ ಇಲಾಖೆಯ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದರು ಸಾಹಿತ್ಯದಲ್ಲಿ ಅಭಿವೃದ್ಧಿ ಮಾಡಿಸಿಕೊಂಡಿರುವುದು ನಿಜಕ್ಕೂ ಸಂತೋಷದ ವಿಷಯ. ಇವರು ಕೆಲಸದ ಜೊತೆಯಲ್ಲಿ ಸಾಹಿತ್ಯವನ್ನು ಪ್ರವೃತ್ತಿಯಾಗಿ ಬೆಳೆಸಿಕೊಂಡು ಎಲ್ಲಾ ವಿಭಾಗದಲ್ಲೂ ಸಮಾಜಕ್ಕೆ ಬೇಕಾದ ಸಾಹಿತ್ಯವನ್ನು ರಚನೆ ಮಾಡುತ್ತಿದ್ದಾರೆ ಇವರು ಹೀಗೆ ಅನೇಕ ಸಾಹಿತ್ಯವನ್ನು ರಚನೆ ಮಾಡಿ ಸಮಾಜಕ್ಕೆ ಒಂದು ಸಂದೇಶ ನೀಡಲಿ ಎಂದು ನಾನು ಅವರಿಗೆ ಹೇಳಬಯಸುತ್ತೇನೆ.

ಇನ್ನು ನಮ್ಮ ಸಂಸ್ಥೆಯಾದ ಅಗ್ನಿಶಾಮಕ ತುರ್ತು ಸೇವಾ ಇಲಾಖೆ ಕುರಿತು ಇವರು ರಚನೆ ಮಾಡಿರುವ ಕಾದಂಬರಿಯೂ ನಿಜಕ್ಕೂ ತುಂಬಾ ಉತ್ತಮವಾಗಿದೆ. ಇವರು ತಮ್ಮ ಕೆಲಸದ ಒತ್ತಡದ ನಡುವೆಯೂ ಒಂದು ಸಂಸ್ಥೆ ಬಗ್ಗೆ ಆಳವಾದ ಮಾಹಿತಿಯನ್ನು ಪಡೆದು ಕಾದಂಬರಿಯನ್ನು ಬರೆದಿರುವುದು ನಿಜಕ್ಕೂ ಸಂತೋಷದ ವಿಷಯ. ನಮ್ಮ ಸಂಸ್ಥೆಯ ಬಗ್ಗೆ ಆಳವಾದ ಮಾಹಿತಿಯನ್ನು ಪಡೆದುಕೊಂಡು ಅದನ್ನು ಕಥೆ ರೂಪ ಕೇಳಿಸಿರುವುದು ಒಂದು ಪಾತ್ರಗಳಿಗೆ ಜೀವ ಕೊಟ್ಟಿರುವುದು ಮತ್ತು ಒಂದು ಸಂಸ್ಥೆ ಬಗ್ಗೆ ಅಪಾರವಾದ ಗೌರವ ಇಟ್ಟುಕೊಂಡು ಆ ಸಂಸ್ಥೆಯಲ್ಲಿ ನಡೆಯುತ್ತಿರುವ ಮಾಹಿತಿಯನ್ನು ಜನರಿಗೆ ನೇರವಾಗಿ ತಲುಪಿಸುತ್ತಿರುವ ಕೆಲಸಕ್ಕೆ ನಾವೆಲ್ಲರೂ ಮೆಚ್ಚಲೇಬೇಕು. ಅಗ್ನಿ ಮತ್ತು ಅಪಘಾತ ಅವಗಡ ನಡೆದರೆ ಎಲ್ಲರೂ ನೆನಪು ಮಾಡಿಕೊಳ್ಳುವುದು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ.




ಈ ಅಗ್ನಿಶಾಮಕ, ತುರ್ತು ಸೇವಾ ಇಲಾಖೆಯು ಅಪಾಯ ಎಂದಾಗಲೇ ಎಲ್ಲರ ಮನಕೆ ತಟ್ ಎಂದು ಬರುತ್ತದೆ.

ಇಲ್ಲಿ ಯಾವ ರೀತಿ ಸೇವೆ ಸಲ್ಲಿಸುತ್ತಿದ್ದಾರೆ ಎಂಬುದು ಜನರಿಗೆ ಸರಿಯಾದ ಮಾಹಿತಿ ಇಲ್ಲ. ಇಲ್ಲಿರುವ ಸಿಬ್ಬಂದಿಗಳು ಜೀವವನ್ನು ಕೈನಲ್ಲಿ ಹಿಡಿದುಕೊಂಡು ಕೆಲಸ ಮಾಡುತ್ತಿದ್ದಾರೆ ಎಂದು ಜನರು ಇಂದಿಗೂ ತಿಳಿದಿಲ್ಲ. ಈ ಸಂಸ್ಥೆಯು ಜನರಿಗೆ ಯಾವ ರೀತಿ ಉಪಯೋಗ ಆಗುತ್ತಿದೆ ಎಂಬ ಮಾಹಿತಿಯು ಸರಿಯಾಗಿಗೊತ್ತಿಲ್ಲ. ಇದನ್ನೆಲ್ಲ ಮುತ್ತೇಶ್ ಮೆಣಸಿನಕಾಯಿರವರು ಅವರ ಕಾದಂಬರಿಯಲ್ಲಿ ಬರೆದು ಸಾಹಿತ್ಯದ ರೂಪದಲ್ಲಿ ಎಲ್ಲರಿಗೂ ತಲುಪುಸುತ್ತಿರುವುದು ನಿಜಕ್ಕೂ ಸಂತೋಷದ ವಿಷಯ. ಇವರು ಇನ್ನಷ್ಟು ಸಾಹಿತ್ಯವನ್ನು ಬರೆಯಲಿ. ಎಲ್ಲಾ ಸಂಸ್ಥೆಗಳ ಬಗ್ಗೆ ಸಾಹಿತ್ಯವನ್ನು ರಚಿಸಿ ಜನರಿಗೆ ಅರಿವು ಮೂಡಿಸಲಿ. ಇವರ ಸಾಹಿತ್ಯ ಜೀವನವು ಸುಖವಾಗಿರಲಿ. ಇನ್ನಷ್ಟು ಮತ್ತಷ್ಟು ಪುಸ್ತಕಗಳನ್ನು ಬರೆಯಲಿ ಎಂದು ಹಾರೈಸುತ್ತೇನೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ನಿಮ್ಮ ವಿಶ್ವಾಸ ಮತ್ತು ಚೈತನ್ಯ ಇಂದು ಅಧಿಕವಾಗಿರುತ್ತದೆ. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು.

**ವೃಷಭ** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, , ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ.

**ಮಿಥುನ** ಇಂದು ಮನೆಯಲ್ಲಿ ನೀವು ಇತರರನ್ನು ಮುಜುಗರಪಡಿಸದೇ ನಿಮ್ಮ ಕುಟುಂಬದ ಅವಶ್ಯಕತೆಗಳಿಗೆ ಹೊಂದಿಕೊಳ್ಳಲು ಯತ್ನಿಸಬೇಕು. ಪ್ರೀತಿಯ ಸಂತೋಷವನ್ನು ಅನುಭವಿಸಬಹುದು.

**ಕರ್ಕಾಟಕ** ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**ಸಿಂಹ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು.

**ಕನ್ಯಾ** ನೀವು ಆರಾಮವಾಗಿ ವಿಶ್ರಾಂತಿ ಪಡೆಯಬೇಕು. ನೀವು ಆನಂದಿಸುವ ಮತ್ತು ಆಸಕ್ತಿಗಳು ಮತ್ತು ವಿಷಯಗಳಲ್ಲಿ ತೊಡಗಿಕೊಳ್ಳಿ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ.

**ತುಲಾ** ಆರೋಗ್ಯ ಚೆನ್ನಾಗಿರುತ್ತದೆ. ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ. ಹಣದ ನಷ್ಟವಾಗಬಹುದು.

**ವೃಶ್ಚಿಕ** ನಿಮ್ಮ ಪ್ರಿಯತಮೆ ಇಡೀ ದಿನ ನಿಮಗಾಗಿ ಪರಿತಪಿಸುತ್ತಾಳೆ. ಒಂದು ಅಚ್ಚರಿಯನ್ನು ಯೋಜಿಸಿ ಮತ್ತು ಇದನ್ನು ನಿಮ್ಮ ಜೀವನದ ಅತ್ಯಂತ ಸುಂದರ ದಿನವನ್ನಾಗಿ ಮಾಡಿ.

**ಧನಸ್ಸು** ನಗು ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಏಕೆಂದರೆ ಮನೆಯ ಯಾವುದೇ ಹಿರಿಯ ಸದಸ್ಯ ನಿಮಗೆ ಹಣವನ್ನು ನೀಡಬಹುದು.

**ಮಕರ** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ.

**ಕುಂಭ** ಪ್ರಣಯ ಹೃದಯವನ್ನು ಆಳುತ್ತದೆ. ನೀವು ಹಿಂದಿನಿಂದಲೂ ಕೆಲಸದಲ್ಲಿ ಯಾರಾದರ ಜೊತೆಗಾದರೂ ಮಾತನಾಡಲು ಪ್ರಯತ್ನಿಸುತ್ತಿದ್ದಲ್ಲಿ, ನಿಮ್ಮ ಅದೃಷ್ಟ ಖುಲಾಯಿಸುತ್ತದೆ.

**ಮೀನ** ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ.

### ಮುಂದಿನ 5 ವರ್ಷಗಳಲ್ಲಿ 1 ಲಕ್ಷ ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆ ಜೈವಿಕ ಇಂಧನ ಕ್ಷೇತ್ರದಲ್ಲಿ ನಿರೀಕ್ಷಿಸಲಾಗಿದೆ

# ರಾಜ್ಯದಲ್ಲಿ ನೂತನ ಜೈವಿಕ ಇಂಧನ ನೀತಿ ಶೀಘ್ರ ಜಾರಿ

• ಉದಯವಾಹಿನಿ, ಗದಗ

ನಗರದ ಗ್ರಾಮೀಣಾಭಿವೃದ್ಧಿ ವಿವಿಯಲ್ಲಿ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ವತಿಯಿಂದ ಸದ್ಭಾವನ ದಿವಸ್, ಅಕ್ಷಯ ಊರ್ಜಾ ದಿವಸ್ ಮತ್ತು ವಿಶ್ವ ಜೈವಿಕ ಇಂಧನ ದಿನಾಚರಣೆ ಜರುಗಿತು.

**ವಿಶ್ವ ಜೈವಿಕ ಇಂಧನ ದಿನಾಚರಣೆ**

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಜೈವಿ ಮಂಡಳಿ ಅಧ್ಯಕ್ಷ ಎಸ್. ಈ. ಸುಧೀಂದ್ರ, ರಾಜ್ಯದಲ್ಲಿ ಈಗಾಗಲೇ ನೂತನ ಜೈವಿಕ ಇಂಧನ ನೀತಿಯ ರಚನೆಯ ಕುರಿತು ಎಲ್ಲಾ ಪೂರ್ವಭಾವಿ ಕಾರ್ಯ ಚಟುವಟಿಕೆಗಳನ್ನು ಪೂರ್ಣಗೊಳಿಸಿದೆ. ಶೀಘ್ರದಲ್ಲಿಯೇ ನೂತನ ಜೈವಿಕ ಇಂಧನ ನೀತಿಯು ರಾಜ್ಯ ಸರ್ಕಾರದಿಂದ ಘೋಷಣೆಯಾಗಲಿದೆ. ಈಗಾಗಲೇ ಅನುಷ್ಠಾನ ಪ್ರಕ್ರಿಯೆ ಮಾರ್ಗ ಸೂಚಿಗಳನ್ನು ಸಿದ್ಧಗೊಳಿಸಲಾಗಿದೆ ಎಂದು ಸುದೀಂಧ್ರ, ತಿಳಿಸಿದರು.

ಮುಂದಿನ 5 ವರ್ಷಗಳಲ್ಲಿ 1 ಲಕ್ಷ ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿಕೆ ಜೈವಿಕ ಇಂಧನ ಕ್ಷೇತ್ರದಲ್ಲಿ ನಿರೀಕ್ಷಿಸಲಾಗಿದೆ. 3 ಲಕ್ಷಕ್ಕೂ ಹೆಚ್ಚಿನ ಪ್ರತ್ಯಕ್ಷ ಹಾಗೂ ಪರೋಕ್ಷ ಉದ್ಯೋಗ ಸೃಜನೆ, ರೈತರ ಕುಟುಂಬಗಳ ಆದಾಯದ ಹೆಚ್ಚಳ, ಯುವ ಉದ್ದಿಮೆದಾರರಿಗೆ ಪ್ರೋತ್ಸಾಹ ದೊರೆಯಲಿದ್ದು, ಮುಂದಿನ ಐದು ವರ್ಷಗಳು ಕರ್ನಾಟಕ ರಾಜ್ಯದಲ್ಲಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಯಲ್ಲಿ ನಿರ್ಣಾಯಕವಾಗಲಿದೆ ಎಂದರು.

ಸದ್ಭಾವನಾ ದಿವಸ್ ಹಾಗೂ ಊರ್ಜಾ ದಿವಸ್ 21ನೇ ಶತಮಾನದ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ಹಾಗೂ ಜೀವ ವಿಜ್ಞಾನಕ್ಕೆ ಮುನ್ನುಡಿ ಬರೆದ ದಿನಾಚರಣೆ. ರಾಷ್ಟ್ರೀಯ ಐಕ್ಯತೆ, ಸಾಮಾಜಿಕ ಸೌಹಾರ್ದತೆ ಮತ್ತು ಸಹಿಷ್ಣತೆ ಕುರಿತು ಜನತೆಯಲ್ಲಿ ಅರಿವು ಮತ್ತು ಜಾಗೃತಿ ಮೂಡಿಸುವುದು ಈ ಊರ್ಜಾ ದಿವಸ್ ಮುಖ್ಯ ಉದ್ದೇಶವಾಗಿದೆ. ರಿನೀವಬಲ್ ಎನರ್ಜಿ ಕುರಿತು ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಅರಿವು ಮತ್ತು ಜಾಗೃತಿ ಮೂಡಿಸುವುದಾಗಿದೆ.

ಈ ವಿಶ್ವ ಜೈವಿಕ ಇಂಧನ ದಿನಾಚರಣೆಯ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯು ರಾಜ್ಯದಲ್ಲಿ ಜೈವಿಕ ಇಂಧನ ಕುರಿತು ಈಗಾಗಲೇ ಅರಿವು ಮತ್ತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲಾಗುತ್ತಿದೆ. ಪ್ರಸ್ತುತ ಸನ್ನಿವೇಶದಲ್ಲಿ ಜೈವಿಕ ಇಂಧನ ಕ್ಷೇತ್ರದ ಉನ್ನತಿಕರಣ , ವಾಣಿಜ್ಯೀಕರಣ ಅತ್ಯಗತ್ಯವಾಗಿದೆ



ಉದಯವಾಹಿನಿ ಚಿತ್ರ

> ರಾಜ್ಯ ಸರ್ಕಾರ ರಿನೀವಬಲ್ ಎನರ್ಜಿಗಳಾದ ಸೋಲಾರ್, ವಿಂಡ್ ಎನರ್ಜಿ ಕ್ಷೇತ್ರದಲ್ಲಿ ರಾಜ್ಯವು ಉತ್ತಮ ಸಾಧನೆ ಮಾಡಲು ಈಗಾಗಲೇ ಹಲವಾರು ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಪ್ರಸ್ತುತ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗೂ ಸರ್ಕಾರ ಆಸಕ್ತಿ ತೋರಿದೆ. ನೂತನ ಜೈವಿಕ ಇಂಧನ ನೀತಿಯು ಈ ಕ್ಷೇತ್ರದ ಅಭಿವೃದ್ಧಿಗೆ ವೇಗವರ್ಧಕವಾಗಲಿದೆ.
> -ಸುಧೀಂದ್ರ, ಅಧ್ಯಕ್ಷ

ಬೇರೆ ಬೇರೆ ರಾಜ್ಯಗಳಲ್ಲಿ ಜೈವಿಕ ಇಂಧನ ಕ್ಷೇತ್ರದಲ್ಲಿ ಗಣನೀಯವಾಗಿ ಜೈವಿಕ ಇಂಧನ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದು ಮಂಡಳಿಯೂ ಸಹ ಈ ದಿಶೆಯಲ್ಲಿ ಕಾರ್ಯಯೋಜನೆ ರೂಪಿಸುವುದು ಅನಿವಾರ್ಯವಾಗಿದೆ ಎಂದು ಎಸ್ ಈ ಸುಧೀಂದ್ರ

**ದೇಶದ ಅಭಿವೃದ್ಧಿಗೆ ಪೂರಕ**

ಗದಗ ಅರಣ್ಯ ಸಂರಕ್ಷಾಧಿಕಾರಿ ಸಂತೋಷ ಕೆಂಚಪ್ಪಣ್ಣವರ ಮಾತನಾಡಿ, ದೇಶದಲ್ಲಿ ಹಸಿರು ಕ್ರಾಂತಿ, ಕ್ಷೀರ ಕ್ರಾಂತಿ ನಡೆದಿದೆ. ಈಗ ಜೈವಿಕ ಕ್ರಾಂತಿ ನಡೆದಿರುವುದು ದೇಶದ ಅಭಿವೃದ್ಧಿಗೆ ಪೂರಕ ಆಗಲಿದೆ. ಈ ಮೊದಲು ಗಿಡಮರಗಳಿಂದ ಉತ್ಪದಾನೆ ಆಗುವ ಇಂಧನಗಳಿಗೆ ಮಾತ್ರ ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಇತ್ತೀಚಿಗೆ ಕಬ್ಬಿನಿಂದ ಎಥೆನಾಲ್ ಉತ್ಪಾದನೆ ಹೆಚ್ಚಾಗುತ್ತಿದೆ. ಕಬ್ಬಿನ ಕಸದಿಂದ ಸುಟ್ಟು ಬರುವ ಕಚ್ಚಾ ವಸ್ತುಗಳಿಂದ ವಿದ್ಯುತ್ ಉತ್ಪಾದನೆ ಆಗುತ್ತಿದೆ. ಸಕ್ಕರೆ ಕಾರ್ಖಾನೆಗಳಿಂದ ಜೈವಿಕ ಇಂಧನ ಅಧಿಕ ಉತ್ಪಾದನೆ ಆಗುತ್ತಿರುವುದು ಇಂಧನ ವಲಯಕ್ಕೆ ಶಕ್ತಿ ತುಂಬಿದೆ. ಪುನರ್ಬಳಕೆ ಇಂಧನ ಬಳಕೆ ಇತ್ತೀಚಿನ ದಿನಗಳಲ್ಲಿ ಅಧಿಕವಾಗುತ್ತಿದೆ. ಪರಿಸರ ರಕ್ಷಣೆ ಮತ್ತು ಸಂಪನ್ಮೂಲಗಳ ಸಮರ್ಪಕ ಬಳಕೆಯಿಂದ ಪುನರ್ಬಳಕೆ ಇಂಧನ ಉದ್ದೇಶ ಸಾಕಾರವಾಗಲಿದೆ. ಜೈವಿಕ ಇಂಧನದಿಂದ ವಿದೇಶದಿಂದ ಇಂಧನ ಆಮದು ಕಡಿಮೆ ಆಗಲಿದೆ. ಜೈವಿಕ ಇಂಧನದಿಂದ ಹಸರೀಕರಣ ಹೆಚ್ಚಾಗಲಿದೆ ಎಂದರು ಸಂತೋಷ ಕೆಂಚಪ್ಪನ್ನವರ ಹೇಳಿದರು.

ಎಂದರು. ಯುವಕ, ಯುವತಿಯರು ಉದ್ಯಮಶೀಲತೆ ಬೆಳಸಿಕೊಂಡು ಇತರರಿಗೆ ಉದ್ಯೋಗ ನೀಡಬೇಕು. ಎಲ್ಲರೂ ಒಗ್ಗಟ್ಟಾಗಿದ್ದರೆ ಸಾಧನೆ ಮಾಡಬಹುದು. ನಮ್ಮನ್ನು ವಿಭಜಿಸುವ ಶಕ್ತಿಗಳಿಂದ ಎಚ್ಚರ ಇರಬೇಕು. ವಿಭಜಿಸುವ ಶಕ್ತಿಯನ್ನು ನಾಶ ಮಾಡಿ ಸಾಧನೆಗೆ ಗಮನ ಕೊಡಬೇಕು. ಅಂದಾಗ ಮಾತ್ರ ಸದ್ಭಾವನ ದಿವಸ ಆಚರಣೆ ಸಾರ್ಥಕ ಆಗುತ್ತದೆ ಎಂದರು.

ಜೈವಿಕ ಇಂಧನ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಶಿವಶಂಕರ ಮಾತನಾಡಿ, ಶುಚಿತ್ವಕ್ಕೆ ಮೊದಲ ಆದ್ಯತೆ ನೀಡಬೇಕು. ಮುಂದಿನ 30 ವರ್ಷಗಳಲ್ಲಿ ಭಾರತ ಬಲಿಷ್ಠ ರಾಷ್ಟ್ರವಾಗಲಿದೆ. ಇಂದಿನ ವಿದ್ಯಾರ್ಥಿಗಳು ಬಲಿಷ್ಠ ರಾಷ್ಟ್ರದ ಭಾಗ ಆಗಲಿದ್ದಾರೆ. ಹಾಗಾಗಿ ಇಂದಿನ ವಿದ್ಯಾರ್ಥಿಗಳು ಸಂಪನ್ಮೂಲಗಳ ಸಮರ್ಪಕ ಬಳಕೆಗೆ ಒತ್ತು ನೀಡಬೇಕು. ಬದುಕಿಗೆ ಆಹಾರ, ವಸತಿ, ಶಿಕ್ಷಣ ಎಷ್ಟು ಮುಖ್ಯವೋ ಶಕ್ತಿಯು ಅಷ್ಟೇ ಮುಖ್ಯ. ಇಂಧನ ಶಕ್ತಿ ಅಗತ್ಯತೆಗಳಲ್ಲಿ ಒಂದಾಗಿದೆ. ಜೈವಿಕ ಪುನರ್ಬಳಕೆ ಇಂಧನವು ಭವಿಷ್ಯದಲ್ಲಿ ಅನಿವಾರ್ಯತೆ ಆಗಲಿದೆ ಎಂದರು.

## ಹೊಸ ಸೇತುವೆ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ

• ಉದಯವಾಹಿನಿ, ಬೆಳಗಾವಿ

ಜಿಲ್ಲೆಯಲ್ಲಿ ನಿರಂತರ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಗೋಕಾಕ್ ನಗರದ ಲೋಳಸೂರ ಸೇತುವೆ ಸಂಪೂರ್ಣ ಮುಳುಗಡೆಯಾಗಿದ್ದು, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಮುಳುಗಡೆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮುಳುಗಡೆಯಾಗಿರುವ ಸೇತುವೆಗಳನ್ನು ಸಮೀಕ್ಷೆ ನಡೆಸಿ, ಹೊಸ ಸೇತುವೆ ನಿರ್ಮಾಣಕ್ಕೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ನದಿ ತೀರದ ಗ್ರಾಮಗಳಲ್ಲಿ ಮುಳುಗಡೆ ಪ್ರದೇಶದ ಜನರನ್ನು ಸ್ಥಳಾಂತರಿಸಲು ಈಗಾಗಲೇ ಸೂಚನೆ ನೀಡಲಾಗಿದೆ ಎಂದರು. ಕೊಯ್ನಾ ಜಲಾಶಯ ಮತ್ತು ಪಂಚಗಂಗಾ ನದಿಯಿಂದ 12 ಸಾವಿರ ಕ್ಯೂಸೆಕ್ಸ್ ನೀರು ಸಂಗ್ರಹಣೆಯಾಗಿ ಹರಿಯುತ್ತಿದೆ ಅಲ್ಲಿಂದ ಧೂದಗಂಗಾ-ವೇದಗಂಗಾ ಜೋಡಣೆಯಾಗಿ 1 ಲಕ್ಷ 48 ಸಾವಿರ ಕ್ಯೂಸೆಕ್ಸ್ ನೀರು ಕೃಷ್ಣ ನದಿಗೆ ಬಂದಿದೆ. ಸದ್ಯಕ್ಕೆ ಹಿಪ್ಪರಗಿ ಬ್ಯಾರೇಜ್ ಹತ್ತಿರ 1 ಲಕ್ಷ 12 ಸಾವಿರ ನೀರು ಹರಿದು ಆಲಮಟ್ಟಿ



ಉದಯವಾಹಿನಿ ಚಿತ್ರ

ಜಲಾಶಯ ಸೇರಲಿದ್ದು ಈಗಾಗಲೇ ಮುಖ್ಯ ಇಂಜಿನಿಯರ್ ಗೆ ಮಾಹಿತಿ ನೀಡಲಾಗಿದೆ. ಆಲಮಟ್ಟಿ ಜಲಾಶಯದಿಂದ ಹೆಚ್ಚು ಸಂಗ್ರಹಣೆಯಾದ ನೀರನ್ನು ಈಗಾಗಲೇ ಬಿಡಗುಡೆ ಮಾಡಲಾಗುತ್ತಿದೆ. ಹಿಡಕಲ್ ಜಲಾಶಯದಿಂದ 36 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡಲಾಗುತ್ತಿದೆ. ರೈತರಿಗೆ ತೊಂದರೆಯಾಗಿದಂತೆ ಹಂತ ಹಂತವಾಗಿ ಮುನ್ನೆಚ್ಚರಿಕೆ ವಹಿಸಿಕೊಂಡು ನೀರು ಬಿಡುಗಡೆ ಸೂಚಿಸಲಾಗಿದೆ.

ಮುಳುಗಡೆಯಾಗಿರುವ ಲೋಳಸೂರು ಸೇತುವೆ ಮೇಲೆ ಜನರು ಸಂಚರಿಸಿದಂತೆ ಬ್ಯಾರಿಕೇಡ್ ಹಾಕಿ ತಹಶೀಲ್ದಾರ್ ಅವರಿಂದ ಸ್ಥಳೀಯರಿಗೆ ಸೂಚನೆ ನೀಡಲಾಗಿದೆ. ಮಳೆ ಪ್ರಮಾಣ ಸ್ವಲ್ಪ ಕಡಿಮೆಯಾದರೂ ಸಹ ಮುಂಜಾಗೃತಿಯಿಂದ 2 ದಿನ ರೆಡ್ ಅಲರ್ಟ್ ಘೋಷಿಸಲಾಗಿದೆ.

## ಡಿ. ದೇವರಾಜು ಅರಸು 110ನೇ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾ ಆಯುಷ್ ಇಲಾಖೆ ವತಿಯಿಂದ ಮಕ್ಕಳಿಗೆ ಚ್ಯವನಪ್ರಾಶ್ ವಿತರಣೆ

• ಉದಯವಾಹಿನಿ, ಚಿತ್ರದುರ್ಗ

ಡಿ. ದೇವರಾಜ್ ಅರಸ್ ಅವರು ಕೇವಲ ರಾಜಕಾರಣಿಯಾಗಿರಲಿಲ್ಲ, ಅವರು ದೀನ ದಲಿತರು, ಮಹಿಳೆಯರು, ಮತ್ತು ಶೋಷಿತರ ಪರವಾಗಿ ಸದಾ ಧ್ವನಿ ಎತ್ತುತ್ತಿದ್ದರು. ಅವರ ಆಡಳಿತಾವಧಿಯಲ್ಲಿ ಅನೇಕ ಜನಪರ ಯೋಜನೆಗಳು ಜಾರಿಗೆ ಬಂದವು. ಆ ಮಹನೀಯರ ಜನ್ಮದಲ್ಲಿ ಪಾದಗೊಳ್ಳುವುದು ಹೆಮ್ಮೆಯ ವಿಷಯವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಕುಮಾರಸ್ವಾಮಿ ಅಪ್ರಾಯಪಟ್ಟಿದ್ದಾರೆ. ಜಿಲ್ಲಾಡಳಿತ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯಿಂದ ಚಿತ್ರದುರ್ಗದಲ್ಲಿ ಆಯೋಜಿಸಲಾದ ದೇವರಾಜ ಅರಸು ಜನ್ಮ ದಿನಾಚರಣೆಯಲ್ಲಿ ಮಾತನಾಡಿ ಅವರು, ದೇವರಾಜು ಅರಸು ಅವರು ಹಿಂದುಳಿದ ವರ್ಗಗಳು ದಲಿತರು ಮತ್ತು ವಿಶೇಷವಾಗಿ ಎಲ್ಲಾ ಜಾತಿಯ ಬಡವರ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಕೆಲಸ ಮಾಡಿದ ಮಹಾನ್ ವಿಚಾರವಾದಿ ಎಂದರು.

ಇದೇ ವೇದಿಕೆಯಲ್ಲಿ ಆಯುಷ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ



ಉದಯವಾಹಿನಿ ಚಿತ್ರ

**ಮಕ್ಕಳ ಅಮೂಲಾಗ್ರ ಬೆಳವಣಿಗೆಗೆ ಸಹಕಾರಿ**

ಸಹಯೋಗದೊಂದಿಗೆ ಕರ್ನಾಟಕ ಸರ್ಕಾರ ಆಯುಷ್ ಇಲಾಖೆ ಇವರ ಮಹತ್ವಾಕಾಂಕ್ಷಿ ಕಾರ್ಯಕ್ರಮ ಚಿತ್ರದುರ್ಗ ಜಿಲ್ಲೆಯ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಚ್ಯವನ ಪ್ರಾಶ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಗೆ ಆಯುಷ್ ಇಲಾಖೆಯ ಚ್ಯವನಪ್ರಾಶ್ ವಿತರಿಸಿ ಮಾತನಾಡಿದ ಹಿಂದುಳಿದವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪುಷ್ಪಲತಾ ಭಾವಿಮತ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಯಂತಿ ಅಂಗವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿದ್ಯಾರ್ಥಿ ನಿಲಯದಲ್ಲಿದ್ದು ಪ್ರಸಕ್ತ ವರ್ಷದಲ್ಲಿ ಎಸ್ಎಸ್ಎಲ್‌ಸಿ ಹಾಗೂ ಪಿಯುವಾರ್ಷಿಕ ಪರೀಕ್ಷೆ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳು, ಪಿಎಚ್‌ಡಿ ಪದವಿ ಪಡೆದ ಸೇರಿದಂತೆ ಇತರೆ ಶೈಕ್ಷಣಿಕ ಸಾಧನೆ ತೋರಿದ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಹಾಗೂ ಬಿಸಿಎಂ ಇಲಾಖೆ ವಿವಿಧವಿದ್ಯಾರ್ಥಿ ನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಡುಗೆಯವರಿಗೆ ಸನ್ಮಾನಿಸಲಾಯಿತು.



> ಚ್ಯವನಪ್ರಾಶ್ ಮಕ್ಕಳಲ್ಲಿ ತೂಕವನ್ನು ಹೆಚ್ಚು ಮಾಡುವಲ್ಲಿ ಬಹಳ ಸಹಕಾರಿ ಹಾಗೂ ದೇಹಕ್ಕೆ ಪೂರಕವಾದ ಪೋಷಕಾಂಶಗಳನ್ನು ನೀಡುತ್ತದೆ ಇದರಿಂದ ಮಕ್ಕಳ ಅಮೂಲಾಗ್ರ, ಬೆಳವಣಿಗೆಗೆ ಸಹಕಾರಿಯಾಗುತ್ತದೆ
> -ಡಾ. ಚಂದ್ರಕಾಂತ್ ನಾಗಸಮುದ್ರ, ಜಿಲ್ಲಾ ಆಯುಷ್ ಅಧಿಕಾರಿ

## ರಸ್ತೆ ಬದಿ ನಿಂತಿದ್ದ ವೃದ್ಧೆಯ ಸರ ಕಳ್ಳತನ: ಆರೋಪಿ ಅರೆಸ್ಟ್

• ಉದಯವಾಹಿನಿ, ನೆಲ್ಯಾಡಿ

ಗ್ರಾಮದ ಪಡುಬೆಟ್ಟು ರಸ್ತೆ ಬದಿ ನಿಂತಿದ್ದ ಅಲಿಮಮ್ಮ (65) ಎಂಬವರ ಕುತ್ತಿಗೆಯಿಂದ 10 ಪವನ್ ತೂಕದ ಸರವನ್ನು ಸೆಳೆದೊಯ್ದ ಆರೋಪಿ ಸುಳ್ಯದ ಅಲೆಟ್ಟಿ ನಿವಾಸಿ ಅಬ್ದುಲ್ ರಹಿಮಾನ್ (31) ಎಂಬಾತನನ್ನು ಉಪ್ಪಿನಂಗಡಿ ಪೊಲೀಸರು ನೆಕ್ಕಿಲಾಡಿಯಲ್ಲಿ ಬಂಧಿಸಿ ಚಿನಾಭರಣವನ್ನು ವಶಪಡಿಸಿಕೊಂಡಿದ್ದಾರೆ. ಬೈಕ್‌ನಲ್ಲಿ ಬಂದ ಇಬ್ಬರು ಯುವಕರು ವೃದ್ಧೆಯನ್ನು ಮಾತನಾಡಿಸಿ ಬಳಿಕ ಕುತ್ತಿಗೆಯಲ್ಲಿದ್ದ ಸರವನ್ನು ಸೆಳೆದೊಯ್ದ ಕುರಿತು ದೂರು ನೀಡಲಾಗಿತ್ತು. ವೃತ್ತ ನಿರೀಕ್ಷಕ ರವಿ ಬಿ.ಎಸ್. ಅವರ ತಂಡ ಕಾರ್ಯಾಚರಣೆ ನಡೆಸಿದೆ. ದರೋಡೆಗೆ ಬಳಸಿದ ಬೈಕ್ ಮತ್ತು ಅಂದಾಜು 4.54 ಲಕ್ಷ ರೂ. ಮೌಲ್ಯದ ಚಿನ್ನದ ಸರವನ್ನು ವಶಪಡಿಸಿಕೊಂಡಿದ್ದಾರೆ. ಕೃತ್ಯಕ್ಕೆ ಬಳಸಿದ ಬೈಕ್ ಕೂಡ ಮೈಸೂರು ನಗರದ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಿಂದ ಕದಿಯಲ್ಪಟ್ಟದ್ದು ಎಂದು ತಿಳಿದುಬಂದಿದೆ.

## ಶಾಲಾ ಬಸ್‌ಗೆ ಖಾಸಗಿ ಬಸ್ ಢಿಕ್ಕಿ ವಿದ್ಯಾರ್ಥಿಗಳು ಅಪಾಯದಿಂದ ಪಾರು

• ಉದಯವಾಹಿನಿ ಬಂಟ್ವಾಳ

ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುತ್ತಿದ್ದ ಶಾಲಾ ಬಸ್‌ಗೆ ಖಾಸಗಿ ಬಸ್ಸೊಂದು ಹಿಂದಿನಿಂದ ಢಿಕ್ಕಿ ಹೊಡೆದಿದ್ದು, ವಿದ್ಯಾರ್ಥಿಗಳು ಅಪಾಯದಿಂದ ಪಾರಾದ ಘಟನೆ ಪುಣಚದ ಮಲ್ಲಿಕಟ್ಟೆ ಎಂಬಲ್ಲಿ ಬೆಳಗ್ಗೆ ಸಂಭವಿಸಿದೆ. ಶಾಲಾ ಬಸ್ ಪುಣಚದಿಂದ ಪುತ್ತೂರು ಕಡೆಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ತೆರಳುತ್ತಿತ್ತು. ಈ ವೇಳೆ ಶಾಲಾ ಬಸ್‌ಗೆ ಪುಣಚದ ಮಲ್ಲಿಕಟ್ಟೆ ತಿರುವಿನಲ್ಲಿ ಹಿಂದಿನಿಂದ ಬಂದ ಖಾಸಗಿ ಬಸ್ ಢಿಕ್ಕಿ ಹೊಡೆದಿದೆ ಎನ್ನಲಾಗಿದೆ.

ಘಟನೆಯಲ್ಲಿ ಖಾಸಗಿ ಬಸ್ನ ಮುಂಭಾಗ ಸಂಪೂರ್ಣ ಜಖಂ ಆಗಿದ್ದು, ಹಲವು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅದೃಷ್ಟವಶಾತ್, ಅಪಘಾತ ಸಂಭವಿಸಿದ ಸಮಯದಲ್ಲಿ ಶಾಲಾ ಬಸ್‌ನ ಹಿಂಭಾಗದಲ್ಲಿ ಯಾವುದೇ ವಿದ್ಯಾರ್ಥಿಗಳು ಕುಳಿತಿರದ ಕಾರಣ, ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ.

## ರಾಜೀವಗಾಂಧಿ,ಅರಸು ಜನ್ಮದಿನಾಚರಣೆ

• ಉದಯವಾಹಿನಿ ವಿಜಯಪುರ

ಮಾಜಿ ಪ್ರಧಾನಿ ದಿ.ರಾಜೀವಗಾಂಧಿಜಿಯವರ 81ನೇ ಜನ್ಮದಿನಾಚರಣೆ ಹಾಗೂ ಕರ್ನಾಟಕ ಸರಕಾರದ ಮಾಜಿ ಮುಖ್ಯ ಮಂತ್ರಿಗಳಾದ ದಿ.ಡಿ.ದೇವರಾಜ ಅರಸರವರ 110ನೇ ಜನ್ಮದಿನಾಚರಣೆಯನ್ನು ಜಿಲ್ಲಾ ಕಾಂಗ್ರೇಸ್ ಕಾರ್ಯಾಲಯದಲ್ಲಿ ಆಚರಿಸಲಾಯಿತು.ದೇಶಕ್ಕೆ ಗಣಕಯಂತ್ರಗಳನ್ನು ಪರಿಚಯಿಸಿದ ದಿ.ರಾಜೀವಗಾಂಧಿಜಿಯವರು ಪಂಚಾಯತರಾಜ ವ್ಯವಸ್ಥೆಯನ್ನು ಜಾರಿಗೆತಂದುಅಧಿಕಾರ ವಿಕೇಂದ್ರಿಕರಣಗೊಳಿಸಿದ್ದಲ್ಲದೆ, 18 ವರ್ಷದಯುವಕರಿಗೆ ಮತದಾನದ ಹಕ್ಕನ್ನು ನೀಡಿದರು. ಅಂತಹ ಮಹಾನ ನಾಯಕರಿಗೆ ಗೌರವ ಪೂರ್ವಕವಾಗಿ ನಮನಗಳನ್ನು ಸಲ್ಲಿಸಲಾಯಿತು.



ಉದಯವಾಹಿನಿ ಚಿತ್ರ

## ಶಾಲೆಯ ಅತಿಥಿ ಶಿಕ್ಷಕರನ್ನು ಏಕಾಏಕಿ ಹಿಂಪಡೆದ ಶಿಕ್ಷಣಾಧಿಕಾರಿ ಮಕ್ಕಳ ಶಿಕ್ಷಣ ಕುಂಠಿತಕ್ಕೆ ಬಿಇಓ ಹೊಣೆ: ಗೋಪಾಲ ಆರೋಪ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಗಾರಂಪಳ್ಳಿ ಸರ್ಕಾರಿ ಶಾಲೆಯಲ್ಲಿನ ಅತಿಥಿ ಶಿಕ್ಷಕರನ್ನು ಏಕಾಏಕಿ ಕ್ಷೇತ್ರ ಶಿಕ್ಷಣಾಧಿಕಾರಿಯವರು ಹಿಂಪಡೆದ ಕಾರಣ ಮಕ್ಕಳಿಗೆ ಪಾಠ ಹೇಳಲು ಶಿಕ್ಷಕರಿಲ್ಲದಂತೆ ಆಗಿದೆ ಇದರಿಂದ ಮಕ್ಕಳಿಗೆ ಶಿಕ್ಷಣ ಕುಂಠಿತವಾಗಲು ಶಿಕ್ಷಣಾಧಿಕಾರಿಗಳೇ ಹೊಣೆ ಎಂದು ಯುವ ಹೋರಾಟಗಾರ ಗೋಪಾಲ ಪೂಜಾರಿ ಗಾರಂಪಳ್ಳಿ ಆರೋಪಿಸಿದರು.

ತಾಲ್ಲೂಕಿನ ಗಾರಂಪಳ್ಳಿ ಗ್ರಾಮದ ಸಮಸ್ತ ನಾಗರಿಕ ಹೋರಾಟ ಸಮಿತಿ ವತಿಯಿಂದ ಗಾರಂಪಳ್ಳಿ ವೃತ್ತದ ರಾಜ್ಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದ ಅವರು,ಜೂನ್ ಜುಲೈ ಶೈಕ್ಷಣಿಕ ವರ್ಷ ಅತಿಥಿ ಶಿಕ್ಷಕರಿಗೆ ನೇಮಕ ಮಾಡಿಕೊಂಡು ಎರಡು ತಿಂಗಳು ಸಲ್ಲಿಸಿದ ನಂತರ ಈಗ ಏಕಾಏಕಿ ಬಿಇಓ ಅವರು ತೆಗೆದು ಹಾಕಿರುವುದರಿಂದ ಸರಕಾರಿ ಶಾಲೆಯಲ್ಲಿ ಓದುತ್ತಿರುವ ಕೂಲಿ ಸಕಾರ್ಮಿಕರ ಬಡವರ ಮಕ್ಕಳ ಶಿಕ್ಷಣ



ಉದಯವಾಹಿನಿ ಚಿತ್ರ

ಮೊಟಕುಗೊಂಡಂತೆ ಆಗಿದೆ ಇದಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೇರ ಹೊಣೆಗಾರರಾಗಿದ್ದಾರೆ. ಅದಕ್ಕಾಗಿ ಮಕ್ಕಳ ಮುಂದಿನ ಭವಿಷ್ಯಕ್ಕೆಗಾಗಿ ಗಾರಂಪಳ್ಳಿ ಗ್ರಾಮಕ್ಕೆ ಕಾಯಂ ಶಿಕ್ಷಕರ ನೇಮಕ ಮಾಡಿಕೊಳ್ಳಬೇಕು ಹಾಗೂ ಈಗ ತೆಗೆದಿರುವಂಥಹ ಅತಿಥಿ ಶಿಕ್ಷಕರನ್ನು ಮಕ್ಕಳ ಭವಿಷ್ಯಕ್ಕೆ ತುಂಬಾ ಅಗತ್ಯವಿದ್ದು ಇವರನ್ನು ಮುಂದುವರಿಸಬೇಕು ಎಂದರು. ಎಸ್‌ಡಿಎಂಸಿ ಅಧ್ಯಕ್ಷ ವೀರಶೆಟ್ಟಿ ಪೂಜಾರಿ, ಗಾರಂಪಳ್ಳಿ ಮಾಜಿ ಗ್ರಾ.ಪಂ. ಅಧ್ಯಕ್ಷ ಸುಭಾಷ್ ಗುತ್ತೇದಾರ್, ಗಂಗಾಧರ ಕುಲಕರ್ಣಿ, ಸಂಗನಬಸಯ್ಯ ಮಠ, ದೇವಿಂದ್ರಪ್ಪಾ ಬುಳ್ಳಾ, ಮೌನೇಶ್ ಮುಸ್ತಾರಿ, ಸೋಮಶೇಖರ ಪಾಟೀಲ, ನಂದಕುಮಾರ ಬಿರಾದಾರ, ಉಸ್ಮಾನ್ ಅಲಿ, ಬಸವರಾಜ ಪಾಟೀಲ, ರಜನಿಕಾಂತ ಬುಳ್ಳಾ, ಶ್ರೀಮಂತ, ಮಲ್ಲು ದೇವರ, ಬಸವರಾಜ ದೇಶಮುಖ, ಅಣ್ಣರಾವ ದಂಡೀನ್, ಅಮೃತ ಮಡಿವಾಳ ಅನೇಕರಿದ್ದರು.

> ಗಾರಂಪಳ್ಳಿ ಗ್ರಾಮದ ವ್ಯಾಪ್ತಿಗೆ ಬರುವಂತ ಮುಲ್ಲಾಮಾರಿ ಸೇತುವೆಗೆ ಹಿಂದೆ ಇರುವಂತ ಮಾದರಿಯಲ್ಲಿ ರೈತರು ನೀರು ತುಂಬಿಕೊಳ್ಳಲು ಹಾಗೂ ಧನಕರುಗಳಿಗೆ ನೀರು ಕುಡಿಯಲು ಮೆಟ್ಟಲ್ಲಿನ ವ್ಯವಸ್ಥೆ ಕಲ್ಪಿಸಿ,ಗಾರಂಪಳ್ಳಿ-ಎಂಪಳ್ಳಿ- ಮೋತಕಪಳ್ಳಿ-ಬೀರನಹಳ್ಳಿ-ತುಮಕುಂಟಾ ಮಾರ್ಗವಾಗಿ ಬೀದರ್ ಜಿಲ್ಲೆಗೆ ಹೋಗಲು ಬಸ್ಸಿನ ವ್ಯವಸ್ಥೆ ಕಲ್ಪಿಸಬೇಕು -ಚಂದ್ರಶೇಖರ ಗುತ್ತೇದಾರ ಈಡಿಗಾ ಸಮಾಜದ ಅಧ್ಯಕ್ಷ

## ಗಡಿಕೇಶ್ವಾರ ಸೊಲ್ಲಾಪುರ ಸಿದ್ಧರಾಮೇಶ್ವರ ಪುರಾಣ

• ಉದಯವಾಹಿನಿ,ಚಿಂಚೋಳಿ

ಒಂದು ಕಾಲದಲ್ಲಿ ವೈಷ್ಣವ,ಶೈವ ಮತ್ತು ಜೈನ ಧರ್ಮಗಳ ಸಂಗಮ ತಾಣವಾಗಿದ್ದ ಗಡಿಕೇಶ್ವಾರ ಗ್ರಾಮದಲ್ಲಿ ಸುಮಾರು ಹತ್ತು ಶತಮಾನಗಳ ಹಿಂದಿನ ಚಾರಿತ್ರ್ಯಿಕವಾಗಿ ಶ್ರೀಶೈಲ ಮಲ್ಲಿಕಾರ್ಜುನ ದೇವಾಲಯಕ್ಕೆ ನೂತನ ಗೋಪುರ ನಿರ್ಮಿಸಿ ಕಳಸಾರೋಹಣ ನಿಮಿತ್ತ ಆಯೋಜಿಸಿದ್ದ ಸೊಲ್ಲಾಪುರ ಸಿದ್ಧರಾಮೇಶ್ವರ ಪುರಾಣ ಔಚಿತ್ಯ ಪೂರ್ಣವಾಗಿದೆ ಎಂದು ಪತ್ರಕರ್ತ ಜಗನ್ನಾಥ ಶೇರಿಕಾರ ತಿಳಿಸಿದರು.

ತಾಲ್ಲೂಕಿನ ಗಡಿಕೇಶ್ವಾರ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಗೋಪುರ ನಿರ್ಮಿಸಿ ಕಳಸಾರೋಸಣ ನಿಮಿತ್ತ ಹಮ್ಮಿಕೊಂಡ ಸೊಲ್ಲಾಪುರ ಸಿದ್ಧರಾಮೇಶ್ವರ ಪುರಾಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯಾವುದೇ ಧಾರ್ಮಿಕ ಕಾರ್ಯಕ್ರಮ ಒಂದು ನೆಪವಾಗಿದೆ. ನೆಪದಲ್ಲಿ ಹಮ್ಮಿಕೊಂಡ ಪುರಾಣ ಪ್ರವಚನಗಳು ಸಮಾಜಕ್ಕೆ ನೀಡುವ ಸಂದೇಶ ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೇ



ಉದಯವಾಹಿನಿ ಚಿತ್ರ

ಕಾರ್ಯಕ್ರಮಕ್ಕೆ ಅರ್ಥ ಬರುತ್ತದೆ ಜತೆಗೆ ಜೀವನವೂ ಸಾರ್ಥಕವಾಗುತ್ತದೆ ಎಂದರು. ನಿವೃತ್ತ ಉಪನ್ಯಾಸಕ ರೇವಣಸಿದ್ದಪ್ಪ ದುಕಾನ ಮಾತನಾಡಿ ಮಾನವ ಜೀವನ ಅತ್ಯಂತ ಶ್ರೇಷ್ಠವಾಗಿದೆ, ಇದನ್ನು ವ್ಯರ್ಥಗೊಳಿಸಿಕೊಳ್ಳದೇ ಸತ್ಕಾರ್ಯ ಮತ್ತು ಪರೋಪ ಕಾರ್ಯಗಳ ಮೂಲಕ ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎಂದರು.

ಕೃಷಿಕ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಭೂಶೆಟ್ಟಿ,ಚಿಮ್ಮಾಈದಲಾಯಿ ಹಿರೇಮಠದ ವಿಜಯ ಮಹಾಂತೇಶ್ವರ ಶಿವಾಚಾರ್ಯರು ಮಾತನಾಡಿದರು. ಸುಲೇಪೇಟದ ಟೆಂಗಿನಮಠದ ಸಿದ್ದಯ್ಯಸ್ವಾಮಿ ಸಾನಿಧ್ಯ ವಹಿಸಿದ್ದರು.

## ಹಿಂದೂ ಮಹಾಗಣಪತಿ ಪ್ರತಿಷ್ಠಾಪನೆ: ಗೋವು ಪೂಜೆ ಧ್ವಜಾರೋಹಣ

• ಉದಯವಾಹಿನಿ ಸಿಂಧನೂರು

ಹಿಂದೂ ಧರ್ಮದ ಪ್ರಕಾರ ಮಹಾಗಣಪತಿ ಉತ್ಸವ ಸಮಿತಿ ಇವರ ವತಿಯಿಂದ ನಡೆದ ನಗರದ ಗಂಗಾವತಿ ರಸ್ತೆಯಲ್ಲಿನ ಹಿಂದೂ ಮಹಾ ಗಣಪತಿ ಪ್ರತಿಷ್ಠಾಪನೆ ಸ್ಥಳದಲ್ಲಿ ನಡೆದ ಗೋವು ಪೂಜೆ ಭೂಮಿ ಪೂಜೆ ಭಾಗವತ್ ಧ್ವಜಾರೋಹಣ ನೆರವೇರಿಸಿದರು

ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಿಜೆಪಿ ಮುಖಂಡ ಕೆ. ಕರಿಯಪ್ಪ ನವರು ಹಿಂದೂ ಮಹಾಗಣಪತಿ ಉತ್ಸವ ಕಾರ್ಯಕ್ಕೆ ಚಾಲನೆ ನೀಡಿ ಗಣಪತಿ ಉತ್ಸವವು ಯಶಸ್ವಿಯಾಗಲಿ ಎಂದು ಈ



ಉದಯವಾಹಿನಿ ಚಿತ್ರ

ವರ್ಷವೂ ಗಣಪತಿ ಪ್ರತಿಷ್ಠಾಪನೆ ಮಾಡಲಾಗುತ್ತದೆ.

ಮಹಾ ಗಣಪತಿಗೆ ವಿವಿಧ ಪೂಜೆ ಸಂಸ್ಕೃತಿಕ ರೈತರು ಗೋಷ್ಟಿ ಇತರರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಸಾರ್ವಜನಿಕರು ವಿಘ್ನೇಶ್ವರ ನಲ್ಲಿ ಪ್ರಾರ್ಥಿಸಿ ಆಶೀರ್ವಾದ ಪಡೆದುಕೊಳ್ಳಬೇಕು ಎಂದು ಹೇಳಿದರು. ನಗರ ಪ್ರಾಧಿಕಾರದ ಅಧ್ಯಕ್ಷ ಬಾಬು ಗೌಡ ಬಾದರ್ಲಿ. ಮುಖಂಡರಾದ ರಾಜೇಶ್ ಅಮರೇಗೌಡ ವಿರುಪಾಪುರು ಬಸವರಾಜ ಬಂಗಾರ ಶೆಟ್ಟರ್ ಕೆ ಮರಿಯಪ್ಪ.ಕೆ ಹನುಮೇಶ. ಕೆ ರಾಜಶೇಖರ್. ವೀರೇಶ್ ಹಟ್ಟಿ. ನೀಲಮ್ಮ ಹೂಗಾರ್.. ಸುರೇಶ್ ಹಂಚ್ಯೋಳಿ ಸುರೇಶ್ ನಕ್ಕುಂಟಿ. ಶಿವ ಹಿರೇಮಠ ಮನೋಹರ್ ಬಸವರಾಜ ಸಾಲಗುಂದಾ . ರವಿ ಉಪ್ಪಾರ ಗೋವಿಂದ ಉಪ್ಪಾರ. ರವಿ ಮಾನ್ವಿ. ಸುಮಿತ್ ತಡಕಲ್ ಸಿದ್ಧ ಜೇನೂರ . ಮುದುಕಪ್ಪ ವೀರೇಶ ಸೇರಿದಂತೆ ಹಾಗೂ ಹಿಂದೂ ಮಹಾಗಣಪತಿ ಉತ್ಸಾಹ ಮಿತಿಯ ಅಧ್ಯಕ್ಷರು, ಸಪದಾಧಿಕಾರಿಗಳು, ಎಲ್ಲಾ ಹಿಂದೂ ಸಮಾಜದ ಬಾಂಧವರು ಉಪಸ್ಥಿತರಿದ್ದರು.

### ತಕ್ಷಣ ಸ್ವಚ್ಛತೆ ಕೈಗೊಂಡು ಸೊಳ್ಳೆ ನಿಯಂತ್ರಣಕ್ಕೆ ಕಠಿಣ ಕ್ರಮಕ್ಕೆ ಮುಂದಾಗಿ ಉಮೇಶ ಕೆ. ಮುದ್ನಾಳ ಆಗ್ರಹ

# ಸೊಳ್ಳೆಗಳ ಹಾವಳಿಯಿಂದ ಜನ ಜಾನುವಾರು ಪರದಾಟ

• ಉದಯವಾಹಿನಿ ಯಾದಗಿರಿ

ತಾಲ್ಲೂಕಿನ ಯಾದಗಿರಿ ಮತಕ್ಷೇತ್ರ ವ್ಯಾಪ್ತಿಗೆ ಬರುವ ಜಿಲ್ಲಾಡಳಿತ ಭವನದಿಂದ ಕೇವಲ 3 ಕೀ.ಮೀ. ಅಂತರದಲ್ಲಿರುವ ಅಬ್ಬೆತುಮಕೂರ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರು ಮೂಲಭೂತ ಸೌಕರ್ಯ ಕಾಣದೇ ಸರಿಯಾಗಿ ಸಿಸಿ ರಸ್ತೆ ಚರಂಡಿ ಇಲ್ಲದ ಕಾರಣ ಚರಂಡಿ ನೀರು ತಗ್ಗು ಗುಂಡಿಗಳಲ್ಲಿ ನಿಂತು ಗಬ್ಬೆದ್ದು ನಾರುತ್ತಿದೆ ಸಾರ್ವಜನಿಕರಿಗೆ ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ ಎಂದು ಅಖಿಲ ಭಾರತೀತಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಹಾಗೂ ಸಾಮಾಜಿಕ ಹೋರಾಟಗಾರ ಉಮೇಶ ಕೆ. ಮುದ್ನಾಳ ರವರ ಜಿಲ್ಲಾಡಳಿತಕ್ಕೆ ಪ್ರಶ್ನಿಸಿದ್ದಾರೆ.

ಈ ಕುರಿತು ಸ್ಥಳಕ್ಕೆ ಸಂಜೆ 6.00 ಗಂಟೆಗೆ ಭೇಟಿ ನೀಡಿ ಗ್ರಾಮದ ಉದ್ದಕ್ಕೂ ಸಂಚಾರ ಮಾಡಿದ ಅವರು ಜಿಟಿಜಿಟಿ ಮಳೆಯಲ್ಲಿ ಕೈಯಲ್ಲಿ ಛತ್ರಿ ಹಿಡಿದು ದಿಢೀರನೆ ಪ್ರತಿಭಟನೆ ಅನಿವಾರ್ಯವಾಯಿತು . ಗ್ರಾಮದಲ್ಲಿ ಜನರಿಗೆ ಶುದ್ಧ ಕುಡಿಯುವ ನೀರಿನ ಮತ್ತು ಮೂಲ ಸೌಲಭ್ಯ ವಿಲ್ಲದೇ ಸಮಸ್ಯೆಯಾಗುತ್ತಿದೆ. ಕೂಡಲೇ





ಉದಯವಾಹಿನಿ ಚಿತ್ರ

**ಛತ್ರಿ ಹಿಡಿದು ವಿನೂತನ ಪ್ರತಿಭಟನೆ**

ಚರಂಡಿ ಸ್ವಚ್ಛತೆ ಮಾಡಿ, ತಗ್ಗುಗುಂಡಿ ಮರಮದಿಂದ ಮುಚಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಮತ್ತು ಬ್ಲಿಚಿಂಗ್ ಪೌಡರ ಸಿಂಪರಣೆ ಮಾಡಿ, ಸೊಳ್ಳೆಗಳ ನಿಯಂತ್ರಣಕ್ಕೆ ಫಾಗಿಗಿಂಗ್ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಸಂಬಂದಪಟ್ಟ ಅಧಿಕಾರಿಗಳು ಗ್ರಾಮಕ್ಕೆ ಬೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿ ನಿರ್ಹಲಕ್ಷ್ಯ ವಹಿಸಿದ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಗ್ರಾಮಕ್ಕೆ ಪೈರೆಕೆಯಾಗುತ್ತಿರುವ ಕುಡಿಯುವ ನೀರು ಅಲ್ಲಲ್ಲಿ ಸೋರಿಕೆಯಾಗಿ ಕಲುಶಿತ ನೀರು ಮಿಶ್ರವಾಗಿ ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಜನರು ಜೀವನ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮದಲ್ಲಿ ತಗ್ಗು ಗುಂಡಿಗಳಲ್ಲಿ ನೀರು ನಿಂತು ಸೊಳ್ಳೆಗಳ ಉತ್ಪತ್ತಿ ಸ್ಥಾನವಾಗಿ ಮಾರ್ಪಟ್ಟಿದೆ. ಗ್ರಾಮದಲ್ಲಿ ವಿದ್ಯುತ ಕಂಬ ಬಾಗಿ ನಿಂತಿದೆ. ವಿದ್ಯುತ ತಂತಿ ಕೆಳಗೆ ಜೋತು ಬಿದ್ದು, ಸಾರ್ವಜನಿಕರ ಅನಾಹುತಕ್ಕೆ ಆಹ್ವಾನ ನೀಡುತ್ತಿದೆ. ಕೂಡಲೇ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದರು. ಆದ್ದರಿಂದ ತಕ್ಷಣ ತಂಡ ರಚಿಸಿ ತನಿಖೆ ಮಾಡಬೇಕು ಕಲುಷಿತ ನೀರಿನಿಂದ ಸಾಕಷ್ಟು ಸಾವು ನೋವು ಪ್ರಕರಣ ವರದಿಯಾಗುತ್ತಿವೆ. ಆದ್ದರಿಂದ ತಕ್ಷಣ ಜನಬಳಕೆಗೆ ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛತೆಗೆ ಮುಂದಾಗಬೇಕು ಕೂಡಲೇ ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಮುಂದೆ ಆಗುವ ಅನಾಹುತಗಳಿಗೆ ಅಧಿಕಾರಿಗಳೇ ನೇರ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

**ಅಧಿಕಾರಿಗಳು ದಿವ್ಯ ನಿರ್ಲಕ್ಷ್ಯ**

ಸ್ವಾತಂತ್ರ್ಯ ಸಿಕ್ಕೂ 79 ವರ್ಷಗಳಿ ಗತಿಸಿದರು. ಗ್ರಾಮಗಳಲ್ಲಿ ಇನ್ನೂ ಶುದ್ದ ಕುಡಿಯುವ ನೀರು ಮೂಲಭೂತ ಸೌಕರ್ಯ ಒದಗಿಸುವುದಕ್ಕೆ ಪ್ರತಿಭಟನೆ ಮೂಲಕ ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಅಧಿಕಾರಿಗಳು ದಿವ್ಯ ನಿರ್ಲಕ್ಷವೇ ಕಾರಣ.

ಈ ವೇಳೆ ಮಲ್ಲೇಶ ಬೋವಿನ್, ನಾಗಪ್ಪ, ಮಹೇಶ, ನಿಲ್ಲಮ್ಮ, ಸಂಪತ, ರಡ್ಡೆಪ್ಪ, ಯೇಸಪ್ಪ, ನಿಂಗಪ್ಪ, ಸುಕಮಾರ, ಸುಮಂತ್, ಶಾಂತಪ್ಪ, ಬೆಂಜಪ್ಪ, ರಾಜಪ್ಪ, ಕರೇಪ್ಪ, ಈಶಪ್ಪ, ಜಗಪ್ಪ, ಬೆಸಿವಾನ್, ಮಲ್ಲು, ಸಿದ್ದಪ್ಪ, ಯಂಕಪ್ಪ, ಬನ್ನಿಬಸವ, ಬಸವರಾಜಪ್ಪ, ಶಿವಪ್ಪ, ಈಶಪ್ಪ, ಕಾಶಪ್ಪ, ರಡ್ಡೆಪ್ಪ, ಸೇರಿದಂತೆ ಅನೇಕ ಗ್ರಾಮಸ್ಥರು ಮತ್ತು ಮಹಿಳೆಯರು ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

# 2025ರ ಅತಿದೊಡ್ಡ ವೈಮಾನಿಕ ದಾಳಿ

**ಮಾಸ್ಕೋ:** ರಷ್ಯಾವು ಈ ವರ್ಷದ ಅತ್ಯಂತ ದೊಡ್ಡ ವೈಮಾನಿಕ ದಾಳಿಗಳಲ್ಲಿ ಒಂದನ್ನು ಉಕ್ರೇನ್ ಮೇಲೆ ನಡೆಸಿದ್ದು, ರಾತ್ರೋರಾತ್ರಿ 574 ಡ್ರೋನ್‌ಗಳು, 40 ಕ್ಷಿಪಣಿಗಳನ್ನು ಉಡಾಯಿಸಿದೆ ಎಂದು ಉಕ್ರೇನ್ ವಾಯುಪಡೆ ಗುರುವಾರ ಖಚಿತಪಡಿಸಿದೆ.

ಉಕ್ರೇನ್ ಪಶ್ಚಿಮ ಭಾಗಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆಸಲಾಗಿದ್ದು, ಇದರಲ್ಲಿ ಕನಿಷ್ಠ ಒಬ್ಬ ವ್ಯಕ್ತಿ ಮೃತಪಟ್ಟು, 15 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಶ್ಚಿಮ ಉಕ್ರೇನ್‌ನಲ್ಲಿರುವ ಅಮೇರಿಕ ಮೂಲದ ಪ್ರಮುಖ ಎಲೆಕ್ಟ್ರಾನಿಕ್ಸ್ ತಯಾರಿಕಾ ಕಂಪನಿಯ ಮೇಲೆ ರಷ್ಯಾ ದಾಳಿ ಮಾಡಿದೆ ಎಂದು ಉಕ್ರೇನ್‌ನ ವಿದೇಶಾಂಗ ಸಚಿವ ಆಂಡ್ರಿ ಸಿಬಿಹಾ ಹೇಳಿದ್ದಾರೆ. ಉಕ್ರೇನ್ ಪಶ್ಚಿಮ ಭಾಗ ಯುದ್ಧಭೂಮಿಯಿಂದ ದೂರ ಇದ್ದು, ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳು ಒದಗಿಸಿದ ಮಿಲಿಟರಿ ನೆರವಿನ ಸಾಗಣೆ ಮತ್ತು ಸಂಗ್ರಹವನ್ನು ಇಲ್ಲಿ ನಡೆಸಲಾಗುತ್ತದೆ. ಇದೀಗ ಇದೇ ಭಾಗವನ್ನು ಗುರಿಯಾಗಿಸಿ ರಷ್ಯಾ ದಾಳಿ ಮಾಡಿದೆ.

**ಶಾಂತಿ ಮಾತುಕತೆಗಳ ನಡುವೆಯೇ ದಾಳಿ:** ಮೂರು ವರ್ಷಗಳ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ನೇತೃತ್ವದಲ್ಲಿ ಶಾಂತಿ ಮಾತುಕತೆಗಳು ಪುನರಾರಂಭಗೊಂಡಿರುವ ಹೊತ್ತಲ್ಲೇ ಈ ಭೀಕರ ದಾಳಿ ನಡೆದಿದೆ. ಈ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಉಕ್ರೇನ್ ಅಧ್ಯಕ್ಷ ವಾಲ್ಡಿಮರ್ ಝೆಲೆನ್ಸ್ಕಿ, ಯಾವುದೇ ಬದಲಾವಣೆಗಳೇ ಆಗಿಲ್ಲ ಎಂಬಂತೆ ರಷ್ಯಾ ದಾಳಿ ನಡೆಸಿದೆ ಎಂದು ಕಿಡಿಕಾರಿದ್ದಾರೆ.



**ಚರ್ಚೆಗಳು ಮತ್ತೆ ಚುರುಕು**

**ಶಾಂತಿ ಮಾತುಕತೆಯ ಬಗ್ಗೆ ರಷ್ಯಾ ಗಂಭೀರವಾಗಿಲ್ಲ ಎಂದು ದೂರಿರುವ ಅವರು, ಅಂತಾರಾಷ್ಟ್ರೀಯ ಸಮುದಾಯವು ಕಠಿಣ ನಿರ್ಬಂಧಗಳ ಮೂಲಕ ಇನ್ನಷ್ಟು ಒತ್ತಡ ಹೇರಬೇಕು ಎಂದು ಆಗ್ರಹಿಸಿದ್ದಾರೆ. ವಾಲ್ಡಿಮರ್ ಝೆಲೆನ್ಸ್ಕಿ ಅವರು ತಮ್ಮ ಮಿತ್ರರಾಷ್ಟ್ರಗಳಿಂದ ನ್ಯಾಟೋದ 'ಆರ್ಟಿಕಲ್ 5' ಮಾದರಿಯ ಭದ್ರತಾ ಖಾತರಿಯನ್ನು ಪಡೆಯಲು ತೀವ್ರವಾಗಿ ಪ್ರಯತ್ನ ನಡೆಸುತ್ತಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಖಾತರಿಗಳಿಗೆ ಬೆಂಬಲ ನೀಡುವ ಸಕಾರಾತ್ಮಕ ಸಂಕೇತಗಳನ್ನು ನೀಡಿದ ನಂತರ ಈ ಚರ್ಚೆಗಳು ಮತ್ತೆ ಚುರುಕು ಪಡೆದುಕೊಂಡಿವೆ.**

ಕಾಫಿ ಮಷಿನ್‌ಗಳಂತಹ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವ ಸಾಮಾನ್ಯ ನಾಗರಿಕ ಉದ್ಯಮವನ್ನು ರಷ್ಯಾ ಗುರಿಯಾಗಿಸಿದೆ ಎಂದು ಅವರು ಆರೋಪಿಸಿದ್ದಾರೆ.

ಮುಂದಿನ 7 ರಿಂದ 10 ದಿನಗಳಲ್ಲಿ ಭದ್ರತಾ ಖಾತರಿಗಳ ಚೌಕಟ್ಟು ಸ್ಪಷ್ಟವಾಗಲಿದೆ ಎಂದು ಝೆಲೆನ್ಸ್ಕಿ ನಿರೀಕ್ಷಿಸುತ್ತಿದ್ದಾರೆ. ಇದರ ಆಧಾರದ ಮೇಲೆ, ಅವರು ರಷ್ಯಾದ ಅಧ್ಯಕ್ಷ ವಾಲ್ಡಿಮರ್ ಪುಟಿನ್ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ತ್ರಿಪಕ್ಷೀಯ ಸಭೆಯನ್ನು ನಡೆಸುವ ಗುರಿಯನ್ನು ಹೊಂದಿದ್ದಾರೆ. ಈ ಸಭೆಗೆ ಸ್ವಿಟ್ಜರ್ಲೆಂಡ್, ಆಸ್ಟ್ರಿಯಾ ಅಥವಾ ಟರ್ಕಿಯನ್ನು ಸಂಭಾವ್ಯ ಸ್ಥಳಗಳಾಗಿ ಪರಿಗಣಿಸಲಾಗುತ್ತಿದೆ.

# ಹೆಚ್‌ಡಿಡಿ ನಿವಾಸಕ್ಕೆ ಎನ್‌ಡಿಎ ಉಪ ರಾಷ್ಟ್ರಪತಿ ಅಭ್ಯರ್ಥಿ ರಾಧಾಕೃಷ್ಣನ್ ಭೇಟಿ



**ನವದೆಹಲಿ:** ಎನ್‌ಡಿಎ ಮೈತ್ರಿಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿ ಸಿ.ಪಿ.ರಾಧಾಕೃಷ್ಣನ್ ಅವರು ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡ ಅವರ ದೆಹಲಿ ನಿವಾಸಕ್ಕೆ ಭೇಟಿ ನೀಡಿದರು. ಮಾಜಿ ಪ್ರಧಾನಿಗಳ ನಿವಾಸಕ್ಕೆ ಆಗಮಿಸಿದ ರಾಧಾಕೃಷ್ಣನ್ ಅವರನ್ನು ಕೇಂದ್ರ ಉಕ್ಕು, ಬೃಹತ್ ಕೈಗಾರಿಕೆಗಳ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಗೌರವಪೂರ್ವಕವಾಗಿ ಬರಮಾಡಿಕೊಂಡರು. ತಮ, ಪ್ರಧಾನಿಗಳ ನಡುವಿನ ಬಾಂಧವ್ಯವನ್ನು ಸರಿಸಿದ ರಾಧಾಕೃಷ್ಣನ್ ಅವರು, ಎನ್‌ಡಿಎ ಮೈತ್ರಿಕೂಟದ ಉಪ ರಾಷ್ಟ್ರಪತಿ ಅಭ್ಯರ್ಥಿ ಆಗಿರುವ ತಮಗೆ ಬೆಂಬಲ ನೀಡಿದ್ದಾಗಿ ಅಭ್ಯರ್ಥಿಯಾಗಿ ಧನ್ಯವಾದ ತಿಳಿಸಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದರಾದ ಮಲ್ಲೇಶ್ ಬಾಬು, ಡಾ. ಸಿ.ಎನ್.ಮಂಜುನಾಥ್, ಜೆಡಿಎಸ್ ಪಕ್ಷದ ಹಿರಿಯ ನಾಯಕ ವೆಂಕಟರಾವ್ ನಾಡಗೌಡ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿನೋದ್ ತಾವಡೆ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು. ಈ ವೇಳೆ ಮಾಜಿ ಪ್ರಧಾನಿಗಳು ಹಾಗೂ ಕೇಂದ್ರ ಸಚಿವರು ಸಿ.ಪಿ.ರಾಧಾಕೃಷ್ಣನ್ ಅವರಿಗೆ ಶುಭ ಹಾರೈಸಿದರು.

# ಮನೆಗೆ ನುಗ್ಗಿ ಮಹಿಳೆಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದ ದುಷ್ಕರ್ಮಿ

**ಕಣ್ಣೂರು:** ದುಷ್ಕರ್ಮಿಯೊಬ್ಬ ಮನೆಗೆ ನುಗ್ಗಿ ಮಹಿಳೆಗೆ ಬೆಂಕಿ ಹಚ್ಚಿ ಕೊಲೆ ಮಾಡಿರುವ ಭೀಕರ ಘಟನೆ ಕೇರಳದ ಕಣ್ಣೂರು ಜಿಲ್ಲೆ ಕುಟ್ಟಿಯತ್ತೂರ್‌ಬಳಿಯ ಉರುವಾಂಚಲ್‌ನಲ್ಲಿ ನಡೆದಿದೆ. ಪ್ರವೀಣಾ (39) ಕೊಲೆಯಾದ ಮಹಿಳೆ ದುಷ್ಕರ್ಮಿ ನೀರು ಕೇಳುವ ನೆಪದಲ್ಲಿನ ಮನೆಗೆ ನುಗ್ಗಿ ಆಕೆಯನ್ನು ಸುಟ್ಟು ಹಾಕಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನೆ ನಡೆದ ಸಮಯದಲ್ಲಿ ಪ್ರವೀಣಾ ಅವರ ಮಾವ,ಅತ್ತೆ ಹಾಗೂ ಅವರ ಅತ್ತಿಗೆಯ ಮಕ್ಕಳು ಮನೆಯಲ್ಲಿದ್ದರು ಎಂದು ನೆರೆಹೊರೆಯವರು ತಿಳಿಸಿದ್ದಾರೆ. ಪ್ರವೀಣಾ ಅವರ ಪತಿ ಅಜೀಜ್ ವಿದೇಶದಲ್ಲಿದ್ದಾರೆ. ಜಿಜೇಶ್ ಎಂಬಾತ ಅತಿಕ್ರಮಣ ಮಾಡಿ ಪ್ರವೀಣಾ ಅವರಿಗೆ ಬೆಂಕಿ ಹಚ್ಚಿದ್ದಾನೆ ಎಂದು ಹೇಳಲಾಗುತ್ತಿದ್ದು ಆತನಿಗೂ ಸುಟ್ಟ ಗಾಯವಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.ಜಿಜೇಶ್ ಮೊದಲು ಮನೆ ಬಾಗಿಲಿಗೆ ಬಂದು ನೀರು ಕೇಳಿದ್ದಾನೆ ನಂತರ, ಮನೆಗೆ ಪ್ರವೇಶಿಸಿ ಅಡುಗೆ ಮನೆಗೆ ಪ್ರವೀಣಾ ನಡೆದುಕೊಂಡು ಹೋಗುತ್ತಿದ್ದಾಗ ತಂದಿದ್ದ ಪೆಟ್ರೋಲ್ ಬಾಟಲಿಯನ್ನು ಆಕೆಯ ಮೇಲೆ ಸುರಿದು ಬೆಂಕಿ ಹಚ್ಚಿದ್ದಾನೆ. ಪ್ರವೀಣಾ ಕಿರುಚಾಟ ಕೇಳಿ, ನೆರೆಹೊರೆಯವರು ಬಂದು ಬೆಂಕಿಯನ್ನು ನಂದಿಸಿದರು, ನಂತರ ಶೇ. 70 ಕ್ಕೂ ಹೆಚ್ಚು ಸುಟ್ಟಗಾಯಗಳಿಂದ ಬಳಲುತ್ತಿದ್ದ ಮಹಿಳೆಯನ್ನು ಪರಿಯಾರಂನಲ್ಲಿರುವ ಕಣ್ಣೂರು ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸಾಗಿಸಲಾಯಿತು, ಅಲ್ಲಿ ಅವರು ಸಾವನ್ನಪ್ಪಿದರು ಎಂದು ಪೊಲೀಸರು ತಿಳಿಸಿದ್ದಾರೆ.

## ಎಲ್ಲವನ್ನೂ ಬದಿಗಿಡಿ, ಮೋದಿ ಅವರೊಂದಿಗೆ ಮಾತನಾಡಿ; ನಿಕ್ಕಿ ಹ್ಯಾಲಿ ಮಾತು ಕೇಳಿದರೆ ಟ್ರಂಪ್ ಉದ್ಧಾರ

# ಪ್ರಧಾನಿ ಮೋದಿ- ಟ್ರಂಪ್ ನೇರ ಸಭೆಗೆ ಕರೆ

**ವಾಷಿಂಗ್ಟನ್:** ಪ್ರತಿಯೊಬ್ಬರಿಗೂ ನಮ್ಮವರು, ತಮ್ಮವರು ಅಂತಾ ಇರುತ್ತಾರೆ. ವ್ಯಕ್ತಿಗೆ ಕುಟುಂಬದ ಸದಸ್ಯರು, ಗೆಳೆಯರು ಇದ್ದರೆ, ಸರ್ಕಾರಗಳಿಗೆ ಆಪ್ತ ಸಲಹೆಗಾರರು ಆಪತ್ಬಾಂಧವರಾಗಿರುತ್ತಾರೆ. ಈ ಬಂಧುಗಳ ಸಲಹೆ ಕೇಳದಿದ್ದರೆ, ವ್ಯಕ್ತಿಯಾಗಲಿ ಸರ್ಕಾರವಾಗಲಿ, ದೇಶವೇ ಆಗಲಿ ನೆಮ್ಮದಿಯಿಂದ ಬಾಳಲು ಸಾಧ್ಯವಿಲ್ಲ. ಅದೇ ರೀತಿ ಜಗತ್ತಿನೊಂದಿಗೆ ಸುಂಕ ಯುದ್ಧ ನಡೆಸುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್,ತಮಗೆ ಯಾರ ಸಲಹೆಯೂ ಬೇಡ ಎಂಬಂತೆ ದರ್ಪದಿಂದ ವರ್ತಿಸುತ್ತಿದ್ದಾರೆ. ಆದರೆ ಟ್ರಂಪ್ ಅವರಿಗೆ ಅವರ ಆಪ್ತರು ಎಚ್ಚರಿಕೆ ನೀಡುತ್ತಲೇ ಬರುತ್ತಿದ್ದು, ಅದರಲ್ಲೂ ವಿಶೇಷವಾಗಿ ಭಾರತದೊಂದಿಗೆ ವೈರತ್ವ ಬೇಡ ಎಂದು ಸಲಹೆ ನೀಡುತ್ತಿದ್ದಾರೆ. ಡೊನಾಲ್ಡ್ ಟ್ರಂಪ್ ಈ ಆಪ್ತರ ಮಾತು ಕೇಳುತ್ತಾರಾ ಎಂಬುದು ಈಗ ಪ್ರಶ್ನೆ.



**ಅಖಾಡಕ್ಕಿಳಿದ ನಿಕ್ಕಿ ಹ್ಯಾಲಿ:** ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ಹೇರಿರುವ ಡೊನಾಲ್ಡ್ ಟ್ರಂಪ್ ಅವರಿಗೆ, ಅಮೆರಿಕದಿಂದ ಭಾರತ ಹಂತ ಹಂತವಾಗಿ ದೂರ ಸರಿಯುತ್ತಿದೆ ಎಂಬ ಅರಿವೇ ಇಲ್ಲವಾಗಿದೆ. ಭಾರತದ ಗೆಳೆತನ ಕಳೆದುಕೊಂಡರೆ ಏನು ನಷ್ಟ ಎಂಬುದರ ಬಗ್ಗೆ ಅಮೆರಿಕ ಅಧ್ಯಕ್ಷರಿಗೆ ಯಾರಾದರೂ ಕಿವಿ ಹಿಂಡಿ ಹೇಳಬೇಕಿದೆ. ಆ ಕೆಲಸವನ್ನು ಈಗ ವಿಶ್ವಸಂಸ್ಥೆಗೆ ಅಮೆರಿಕದ ಮಾಜಿ ರಾಯಭಾರಿ ನಿಕ್ಕಿ ಹ್ಯಾಲಿ ಮಾಡಿದ್ದಾರೆ.

ಹೌದು, ಭಾರತೀಯ ಮೂಲದ ರಿಪಬ್ಲಿಕನ್ ನಾಯಕಿ ನಿಕ್ಕಿ ಹ್ಯಾಲಿ ಅವರು, ಡೊನಾಲ್ಡ್ ಟ್ರಂಪ್ ಅವರ ಭಾರತದ ಸರಕುಗಳ ಮೇಲೆ ಶೇ. 50ರಷ್ಟು ಸುಂಕ ನಿರ್ಧಾರವನ್ನು ಪ್ರಶ್ನಿಸಿದ್ದಾರೆ. ಚೀನಾವನ್ನು ಎದುರಿಸಲು ನಮಗೆ ಭಾರತದ ಗೆಳೆತನ ಅಗತ್ಯವಾಗಿದ್ದು, ಯಾವ ಕಾರಣಕ್ಕೂ ನಾವು ಭಾರತದ ಸ್ನೇಹವನ್ನು ಕಳೆದುಕೊಳ್ಳಬಾರದು ಎಂದು ನಿಕ್ಕಿ ಹ್ಯಾಲಿ ಅಮೆರಿಕ ಅಧ್ಯಕ್ಷರಿಗೆ ಅಗತ್ಯ ಸಲಹೆ ನೀಡಿದ್ದಾರೆ. ಭಾರತದ ವಿರುದ್ಧದ ಟ್ರಂಪ್ ಸುಂಕ ಸಮರವನ್ನು ತಪ್ಪಾದ ನಿರ್ಧಾರ ಎಂದು ಕರೆದಿರುವ ನಿಕ್ಕಿ ಹ್ಯಾಲಿ, ನವದೆಹಲಿಯೊಂದಿಗಿನ ವ್ಯಾಪಾರ ಸಂಬಂಧದಲ್ಲಿ ಶಾಶ್ವತ ಬಿರುಕು ಉಂಟಾಗಲು ವಾಷಿಂಗ್ಟನ್ ಅವಕಾಶ ನೀಡಬಾರದು ಎಂದು ಆಗ್ರಹಿಸಿದ್ದಾರೆ. ನಿಕ್ಕಿ ಹ್ಯಾಲಿ ಅವರ ಇತ್ತೀಚಿನ ಭಾರತ ಸಂಬಂಧ ಹಾಳು ಮಾಡಿಕೊಂಡರೆ ಅಮೆರಿಕಕ್ಕೆ ನಷ್ಟ ಎಂಬ ಹೇಳಿಕೆ ಟ್ರಂಪ್ ಆಡಳಿತಕ್ಕೆ ಎಚ್ಚರಿಕೆಯ ಕರೆಗಂಟೆಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಭಾರತ-ಅಮೆರಿಕ ಸಂಬಂಧಗಳಲ್ಲಿನ ಯಾವುದೇ ಬಿರುಕು, ನವದೆಹಲಿ ಮತ್ತು ವಾಷಿಂಗ್ಟನ್ ನಡುವಿನ ಸ್ನೇಹ ಸಂಬಂಧವನ್ನು ಕೆಡಿಸಲು ಚೀನಾಗೆ ಅವಕಾಶ ಮಾಡಿಕೊಡುತ್ತದೆ. ಟ್ರಂಪ್ ಆಡಳಿತ ಯಾವುದೇ ಕಾರಣಕ್ಕೂ ಈ ತಪ್ಪು ಮಾಡಬಾರದು. ನಾವು ಭಾರತವನ್ನು ಮಾತುಕತೆಯ ಮೇಜಿನ ಮೇಲೆ ಕರೆತರುವ ತುರ್ತು ಅವಶ್ಯಕತೆ ಇದೆ ಎಂದು ನಿಕ್ಕಿ ಹ್ಯಾಲಿ ಅಭಿಪ್ರಾಯಪಟ್ಟಿದ್ದಾರೆ.



**ಉಭಯ ದೇಶಗಳಿಗೂ ಸಲಹೆ**

**ಚೀನಾದ ಹೆಚ್ಚುತ್ತಿರುವ ಜಾಗತಿಕ ಪ್ರಭಾವವನ್ನು ಎದುರಿಸಲು, ಭಾರತ, ಅಮೆರಿಕದ ಹಂಚಿಕೆಯ ಗುರಿಯನ್ನು ನಾವು ಯಾವ ಕಾರಣಕ್ಕೂ ಕಳೆದುಕೊಳ್ಳಬಾರದು. ವಿಶ್ವದ ಎರಡು ದೊಡ್ಡ ಪ್ರಜಾಪ್ರಭುತ್ವಗಳ ನಡುವಿನ ದಶಕಗಳ ಸ್ನೇಹ ಮತ್ತು ಸದ್ಭಾವನೆಯು ಪ್ರಸ್ತುತ ಪ್ರಕ್ಷುಬ್ಧತೆಯನ್ನು ಪರಿಹರಿಸಲು ಘನವಾದ ಆಧಾರವನ್ನು ಒದಗಿಸುತ್ತದೆ. ವ್ಯಾಪಾರ ಭಿನ್ನಾಭಿಪ್ರಾಯಗಳನ್ನು ದೂರ ಮಾಡಲು ನಮ್ಮಿಂದ ಸಾಧ್ಯವಿದೆ.**

**ಮೋದಿ-ಟ್ರಂಪ್ ಮಾತುಕತೆಗೆ ಒತ್ತಾಯ:** ವಿಶ್ವಸಂಸ್ಥೆಯ ಮಾಜಿ ಅಮೆರಿಕದ ರಾಯಭಾರಿ ನಿಕ್ಕಿ ಹ್ಯಾಲಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಡುವೆ ಶೀಘ್ರವಾಗಿ ಮಾತುಕತೆ ನಡೆಯಬೇಕು ಎಂದು ಹೇಳಿದ್ದಾರೆ. ಪ್ರಧಾನಿ ಮೋದಿ, ಅಧ್ಯಕ್ಷ ಟ್ರಂಪ್ ನಡುವೆ ನೇರ ಮಾತುಕತೆಗೆ ನಾನು ಕರೆ ನೀಡುತ್ತೇನೆ. ಭಾರತ-ಅಮೆರಿಕ ಸಂಬಂಧಗಳನ್ನು ಮತ್ತೆ ಹಳಿಗೆ ತರುವುದು ಟ್ರಂಪ್ ಆಡಳಿತದ ಪ್ರಮುಖ ಆದ್ಯತೆ ಆಗಬೇಕು. ಈ ಸಭೆಯನ್ನು ಆಯೋಜಿಸಲು ಟ್ರಂಪ್ ಆಡಳಿತ ತಡ ಮಾಡಬಾರದು ಎಂದು ನಿಕ್ಕಿ ಹ್ಯಾಲಿ ಸೂಚ್ಯವಾಗಿ ಹೇಳಿದ್ದಾರೆ. ಚೀನಾವನ್ನು ಎದುರಿಸಲು ಅಮೆರಿಕ ಮತ್ತು ಭಾರತದ ನಡುವಿನ ಪಾಲುದಾರಿಕೆಯು ಗಟ್ಟಿಯಾಗಿರಬೇಕು. ಚೀನಾದ ಆರ್ಥಿಕ ಮತ್ತು ಮಿಲಿಟರಿ ಶಕ್ತಿಯನ್ನು ಎದುರಿಸಲು ಭಾರತಕ್ಕೆ ಸಹಾಯ ಮಾಡುವುದು ನಮ್ಮ ಕರ್ತವ್ಯ. ಇದರಿಂದ ಅಮೆರಿಕ ಹಿತಾಸಕ್ತಿಗಳಿಗೆ ಅನುಕೂಲವಾಗುತ್ತದೆ. ಟ್ರಂಪ್ ಆಡಳಿತ ಈ ಸೂಕ್ಷ್ಮತೆಯನ್ನು ಅರಿತು, ಕೂಡಲೇ ಭಾರತದ ಪ್ರಧಾನಿ ಮೋದಿ, ಟ್ರಂಪ್ ನಡುವೆ ನೇರ ಸಭೆ ಏರ್ಪಡಿಸಬೇಕು ಎಂದು ನಿಕ್ಕಿ ಹ್ಯಾಲಿ ಒತ್ತಾಯಿಸಿದ್ದಾರೆ.

**ಭಾರತಕ್ಕೆ ಏನು ಸಲಹೆ?**

**ಡೊನಾಲ್ಡ್ ಟ್ರಂಪ್ ಅವರಿಗೆ ಉಕ್ರೇನ್‌ನಲ್ಲಿ ನಡೆಯುತ್ತಿರುವ ಮಾರಣಹೋಮ ತಡೆಗಟ್ಟುವ ಸದುದ್ದೇಶವಿದೆ. ಅಮೆರಿಕ ಅಧ್ಯಕ್ಷರ ಈ ಕಾಳಜಿಯನ್ನು ಭಾರತ ಅರ್ಥ ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ನಡುವೆ ಆದಷ್ಟು ಬೇಗ ನೇರ ಮಾತುಕತೆ ನಡೆಯುವುದು ಸೂಕ್ತ ಎಂದು ನಿಕ್ಕಿ ಹ್ಯಾಲಿ ಹೇಳಿದ್ದಾರೆ.**

ಅಮೆರಿಕ ಮತ್ತು ಭಾರತದ ನಡುವಿನ ವ್ಯಾಪಾರ ವಿವಾದವನ್ನು ಮತ್ತಷ್ಟು ಎಳೆಯುವುದು ಬೇಡ ಎಂದು ಸಲಹೆ ನೀಡಿರುವ ನಿಕ್ಕಿ ಹ್ಯಾಲಿ, ಇದರಿಂದ ಭಾರತ ಮತ್ತು ಅಮೆರಿಕವನ್ನು ದೂರ ಮಾಡಲು ಸಾಧ್ಯವಿರುವ ಎಲ್ಲಾ ತಂತ್ರಗಳನ್ನು ಅನುಸರಿಸಲು ಚೀನಾಗೆ ದಾರಿ ಮಾಡಿಕೊಟ್ಟಂತಾಗುತ್ತೆ. ಟ್ರಂಪ್ ಆಡಳಿತ ಈ ಅಪಾಯವನ್ನುಮನಗಾಣದಲಿದೆ ಎಂಬ ಭರವಸೆ ಇರುವುದಾಗಿ ಹೇಳಿದ್ದಾರೆ. ಒಟ್ಟಿನಲ್ಲಿ ಭಾರತದ ಮೇಲೆ ಹೆಚ್ಚುವರಿ ಸುಂಕಗಳನ್ನು ಹೇರಿ ಕೈಸುಟ್ಟುಕೊಂಡಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ನಿಕ್ಕಿ ಹ್ಯಾಲಿ ಅವರಂತಹ ಆಪ್ತರ ಸಲಹೆಯನ್ನು ಕೇಳಿ ವ್ಯಾಪಾರ ಬಿಕ್ಕಟ್ಟುಗಳನ್ನು ಪರಿಹರಿಸಿಕೊಳ್ಳುವುದು ಉತ್ತಮ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ ಎಂದು ಹೇಳಬಹುದು. ಭಾರತ ಈ ವಿಚಾರದಲ್ಲಿ ಸ್ಪಷ್ಟತೆ ಇದ್ದು, ದ್ವಿಪಕ್ಷೀಯ ವ್ಯಾಪಾರ ಮಾತುಕತೆಗಳಲ್ಲಿ ರಾಷ್ಟ್ರೀಯ ಹಿತಾಸಕ್ತಿ ಕಾಪಾಡುವ ವಾಗ್ದಾನ ಮಾಡಿದೆ.

# ಐಸಿಸ್ ಉಗ್ರರಿಗೆ ವರದಾನವಾದ ಸಿರಿಯಾ, ಆಫ್ರಿಕಾ ಅಸ್ಥಿರತೆ

**ವಿಶ್ವಸಂಸ್ಥೆ:** ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿಗಳು ಆಫ್ರಿಕಾ ಮತ್ತು ಸಿರಿಯಾದಲ್ಲಿನ ಅಸ್ಥಿರತೆಯನ್ನು ಬಳಸಿಕೊಳ್ಳುತ್ತಿದ್ದಾರೆ, ಅಫ್ಘಾನಿಸ್ತಾನ, ಮಧ್ಯ ಏಷ್ಯಾ, ಯುರೋಪ್‌ನಲ್ಲಿ ಗಮನಾರ್ಹ ಬೆದರಿಕೆಯಾಗಿ ಉಳಿದಿದ್ದಾರೆ ಎಂದು ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ತಜ್ಞರು ಹೇಳಿದ್ದಾರೆ. ಈ ಉಗ್ರಗಾಮಿ ಗುಂಪು ಈಗ ಕೃತಕ ಬುದ್ಧಿಮತ್ತೆ, ಸಾಮಾಜಿಕ ಮಾಧ್ಯಮ ಸೇರಿದಂತೆ ಸುಧಾರಿತ ತಂತ್ರಜ್ಞಾನಗಳನ್ನು ಬಳಸುತ್ತಿದೆ, ಇದು ಹೊಸ ಸವಾಲನ್ನು ಒಡ್ಡುತ್ತದೆ ಎಂದು ತಜ್ಞರು ಯುಎನ್ ಭದ್ರತಾ ಮಂಡಳಿಯ ಸಭೆಯಲ್ಲಿ ತಿಳಿಸಿದ್ದಾರೆ.

ಇಸ್ಲಾಮಿಕ್ ಸ್ಟೇಟ್ ಗುಂಪು 2014ರಲ್ಲಿ ವಶಪಡಿಸಿಕೊಂಡ ಸಿರಿಯಾ, ಇರಾಕ್‌ನ ದೊಡ್ಡ ಪ್ರದೇಶದಲ್ಲಿ ಸ್ವಯಂ ಘೋಷಿತ ಕ್ಯಾಲಿಫೇಟ್ ಅನ್ನು ಘೋಷಿಸಿತು. ಹತ್ತಾರು ಸಾವಿರ ಜನರನ್ನು ಕೊಂದ, ನಗರಗಳನ್ನು ನಾಶಪಡಿಸಿದ ಮೂರು ವರ್ಷಗಳ ಯುದ್ಧದ ನಂತರ 2017ರಲ್ಲಿ ಇರಾಕ್‌ನಲ್ಲಿ ಅದನ್ನು ಸೋಲಿಸಲಾಗಿದೆ ಎಂದು ಘೋಷಿಸಲಾಯಿತು, ಆದರೆ ಅದರ ಸ್ಲೀಪರ್ ಸೆಲ್‌ಗಳು ಎರಡೂ ದೇಶಗಳಲ್ಲಿ ಉಳಿದಿವೆ, ಇದು ಇತರ ಹಲವು ದೇಶಗಳಲ್ಲಿ ಅಂಗಸಂಸ್ಥೆಗಳು ಮತ್ತು ಬೆಂಬಲಿಗರನ್ನು ಹೊಂದಿದೆ. ಸಹೇಲ್‌ನಲ್ಲಿ ಬುರ್ಕಿನಾ ಫಾಸೊ, ಮಾಲಿ ಮತ್ತು ನೈಜರ್‌ನಲ್ಲಿ ಇಸ್ಲಾಮಿಕ್ ಸ್ಟೇಟ್‌ನ ಚಟುವಟಿಕೆಗಳು ಪುನರುಜ್ಜೀವನಗೊಂಡಿರುವುದನ್ನು ವಿಶ್ವಸಂಸ್ಥೆ ಕಂಡಿದೆ ಮತ್ತು ಪಶ್ಚಿಮ ಆಫ್ರಿಕಾದಲ್ಲಿ ಈ ಗುಂಪು ಭಯೋತ್ಪಾದಕ ಪ್ರಚಾರದ ಸಮೃದ್ಧ ಉತ್ಪಾದಕರಾಗಿ ಹೊರಹೊಮ್ಮಿದೆ ಮತ್ತು ವಿದೇಶಿ ಭಯೋತ್ಪಾದಕ ಹೋರಾಟಗಾರರನ್ನು ಆಕರ್ಷಿಸಿದೆ, ಮುಖ್ಯವಾಗಿ ಈ ಪ್ರದೇಶದ ಒಳಗಿನಿಂದ ಎಂದು ಯುಎನ್ ಭಯೋತ್ಪಾದನಾ ನಿಗ್ರಹ ಕಚೇರಿಯ ಮುಖ್ಯಸ್ಥ ವ್ಲಾಡಿಮಿರ್ ವೊರೊಂಕೋವ್ ಹೇಳಿದರು.



ಲಿಬಿಯಾದಲ್ಲಿನ ಬಂಧನಗಳು ಸಹೇಲ್‌ನಲ್ಲಿ ಐಎಸ್‌ನೊಂದಿಗೆ ಸಂಪರ್ಕ ಹೊಂದಿರುವ ಲಾಜಿಸ್ಟಿಕ್ಸ್ ಮತ್ತು ಹಣಕಾಸು ಜಾಲಗಳನ್ನು ಬಹಿರಂಗಪಡಿಸಿವೆ ಎಂದು ಅವರು ಹೇಳಿದರು. ಸೊಮಾಲಿಯಾದಲ್ಲಿ, ಸೊಮಾಲಿ ಭದ್ರತಾ ಪಡೆಗಳು ದೊಡ್ಡ ಪ್ರಮಾಣದ ಐಎಸ್ ದಾಳಿಯನ್ನು ಎದುರಿಸಿದವು ಮತ್ತು ಸುಮಾರು 200 ಐಎಸ್ ಹೋರಾಟಗಾರರು ಕೊಲ್ಲಲ್ಪಟ್ಟರು ಮತ್ತು 150 ಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ಆದರೆ ನಷ್ಟಗಳ ಹೊರತಾಗಿಯೂ ಐಎಸ್ ಇನ್ನೂ ಪ್ರಾದೇಶಿಕ ಬೆಂಬಲ ಜಾಲಗಳಿಂದ ಪ್ರಯೋಜನ ಪಡೆಯುತ್ತಿದೆ ಮತ್ತು ಬೆದರಿಕೆಯಾಗಿಯೇ ಉಳಿದಿದೆ ಎಂದು ಅವರು ಹೇಳಿದರು.

ಉತ್ತರಮಧ್ಯ ಆಫ್ರಿಕಾದ ಲೇಕ್ ಚಾಡ್ ಬೇಸಿನ್ ಪ್ರದೇಶದಲ್ಲಿ, ಇಸ್ಲಾಮಿಕ್ ಸ್ಟೇಟ್ ಹಣ, ಡ್ರೋನ್‌ಗಳು, ಸುಧಾರಿತ ಸ್ಫೋಟಕ ಸಾಧನಗಳ ಮೇಲಿನ ಪರಿಣತಿಯನ್ನು ಒಳಗೊಂಡಂತೆ ತನ್ನ ಕಾರ್ಯಾಚರಣೆಗಳನ್ನು ನಡೆಸಲು ವಿದೇಶಿ ವಸ್ತುಗಳು ಮತ್ತು ಮಾನವ ಬೆಂಬಲವನ್ನು ಹೆಚ್ಚಾಗಿ ಪಡೆಯುತ್ತಿದೆ ಎಂದು ಯುಎನ್ ಭಯೋತ್ಪಾದನಾ ನಿಗ್ರಹ ಸಮಿತಿಯ ಕಾರ್ಯನಿರ್ವಾಹಕ ನಿರ್ದೇಶನಾಲಯದ ಮುಖ್ಯಸ್ಥರಾದ ನಟಾಲಿಯಾ ಗೆರ್ಮನ್ ಹೇಳಿದರು. ಅಸ್ಥಿರತೆಯನ್ನು ಹೊಂದಿಕೊಳ್ಳುವ ಮತ್ತು ಬಳಸಿಕೊಳ್ಳುವ ಅದರ ಸಾಮರ್ಥ್ಯವು ಗಮನಾರ್ಹ ಸವಾಲುಗಳನ್ನು ಒಡ್ಡುತ್ತಿದೆ, ವಿಶೇಷವಾಗಿ ಆಫ್ರಿಕಾದ ಕೆಲವು ಭಾಗಗಳಲ್ಲಿ, ಎಂದು ಅವರು ಹೇಳಿದರು. ಭಯೋತ್ಪಾದಕ ದಾಳಿಯಿಂದ ವಿಶ್ವದ ಅರ್ಧದಷ್ಟು ಸಾವುನೋವುಗಳನ್ನು ಈ ಖಂಡವು ಹೊಂದಿದೆ. ಮಧ್ಯಪ್ರಾಚ್ಯದಲ್ಲಿ, ವಾಯುವ್ಯ ಬಡಿಯಾ ಮರುಭೂಮಿ ಪ್ರದೇಶದಲ್ಲಿ ತನ್ನ ಕಾರ್ಯಾಚರಣೆಯನ್ನು ಪುನಃಸ್ಥಾಪಿಸಲು ಮತ್ತು ಸ್ಥಳೀಯ ಅಧಿಕಾರಿಗಳನ್ನು ಅಸ್ಥಿರಗೊಳಿಸುವ ಪ್ರಯತ್ನವನ್ನು ನವೀಕರಿಸಲು ಪ್ರಯತ್ನಿಸುತ್ತಿರುವ ಇರಾಕ್ ಮತ್ತು ಸಿರಿಯಾದಲ್ಲಿ ಐಎಸ್ ಸಕ್ರಿಯವಾಗಿದೆ ಎಂದು ವೊರೊಂಕೋವ್ ಹೇಳಿದರು.

**ಉಗ್ರಗಾಮಿಗಳು ಭದ್ರತಾ ಅಂತರವನ್ನು ಬಳಸಿಕೊಳ್ಳುತ್ತಿದ್ದಾರೆ, ರಹಸ್ಯ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾರೆ ಮತ್ತು ಸಿರಿಯಾದಲ್ಲಿ ಪಂಥೀಯ ಉದ್ವಿಗ್ನತೆಯನ್ನು ಪ್ರಚೋದಿಸುತ್ತಿದ್ದಾರೆ ಎಂದು ಅವರು ಹೇಳಿದರು.ಅಫ್ಘಾನಿಸ್ತಾನದಲ್ಲಿ, ಇಸ್ಲಾಮಿಕ್ ಸ್ಟೇಟ್ ಗುಂಪಿನ ಖೊರಾಸನ್ ಅಂಗಸಂಸ್ಥೆಯು ಮಧ್ಯ ಏಷ್ಯಾ ಮತ್ತು ಅದರಾಚೆಗೆ ಅತ್ಯಂತ ಗಂಭೀರ ಬೆದರಿಕೆಗಳಲ್ಲಿ ಒಂದನ್ನು ಪ್ರತಿನಿಧಿಸುವುದನ್ನು ಮುಂದುವರೆಸಿದೆ ಎಂದು ವೊರೊಂಕೋವ್ ಹೇಳಿದರು.**

# ಅಗ್ನಿ-5 ಕ್ಷಿಪಣಿ ಪರೀಕ್ಷೆ ಯಶಸ್ವಿ


**ಚಂಡೀಪುರ:** ಭಾರತವು ಒಡಿಶಾ ಕರಾವಳಿಯ ಚಂಡಿಪುರದಲ್ಲಿರುವ ಡಾ. ಎಪಿಜೆ ಅಬ್ದುಲ್ ಕಲಾಂ ದ್ವೀಪದಿಂದ ಅಗ್ನಿ5 ಮಧ್ಯಂತರ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಮಧ್ಯಂತರ ಶ್ರೇಣಿಯ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ದೇಶೀಯವಾಗಿ ತಯಾರಿಸಿದ ಖಂಡಾಂತರ ಕ್ಷಿಪಣಿ ಅಗ್ನಿ 5,000 ಕಿ.ಮೀ. ವ್ಯಾಪ್ತಿಯ ಶತ್ರು ನೆಲೆಗಳ ಮೇಲೆ ದಾಳಿ ನಡೆಸುವ ಸಾಮರ್ಥ್ಯವನ್ನು ಹೊಂದಿದೆ. ಡಿಆರ್‌ಡಿಓ ನೇತೃತ್ವದಲ್ಲಿ 2012ರ ಏ.19ರಂದು ಅಗ್ನಿ ಕ್ಷಿಪಣಿಯ ಮೊದಲ ಪರೀಕ್ಷಾರ್ಥ ಉಡಾವಣೆ ನಡೆದಿತ್ತು.

ಅಗ್ನಿ5 ಕ್ಷಿಪಣಿ ಒಂದು ಟನ್‌ಗಿಂತಲೂ ಹೆಚ್ಚು ಭಾರದ ಪರಮಾಣು ಸಿಡಿತಲೆಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದ್ದು, ಸ್ವಯಂಚಾಲಿತ ಸೌಲಭ್ಯವನ್ನೂ ಹೊಂದಿದೆ. ವಿವಿಧ ರೇಡಾರ್ ಮತ್ತು ಸಂಪರ್ಕ ವ್ಯವಸ್ಥೆಯ ಮೂಲಕವೂ ಮಾಹಿತಿ ಪಡೆಯುವ ವಿಶೇಷ ಗುಣ ಇದಕ್ಕಿದೆ ಎಂದು ಡಿಆರ್‌ಡಿಓ ಮೂಲಗಳು ತಿಳಿಸಿವೆ.

ಪರಮಾಣು ಸಾಮರ್ಥ್ಯ ಹೊಂದಿರುವ ಸ್ಥಳೀಯವಾಗಿ ಅಭಿವೃದ್ಧಿಪಡಿಸಲಾದ ಕ್ಷಿಪಣಿಯಾಗಿರುವ ಅಗ್ನಿ 5 ಮಧ್ಯಂತರ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿ 5,000 ಕಿ.ಮೀ.ವರೆಗಿನ ಗುರಿಗಳನ್ನು ಭೇದಿಸಬಹುದು. ಇದು ಏಕಕಾಲದಲ್ಲಿ ಬಹು ಗುರಿಗಳನ್ನು ಭೇದಿಸುವ ಸಾಮರ್ಥ್ಯವನ್ನು ಹೊಂದಿದೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ರಕ್ಷಣಾ ಸಚಿವಾಲಯವು ಮಧ್ಯಂತರ ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿ ಅಗ್ನಿ 5 ಅನ್ನು ಗುರುವಾರ ಒಡಿಶಾದ ಚಡೀಪುರದ ಸಮಗ್ರ ಪರೀಕ್ಷಾ ಶ್ರೇಣಿಯಿಂದ ಯಶಸ್ವಿಯಾಗಿ ಪರೀಕ್ಷಿಸಲಾಯಿತು. ಉಡಾವಣೆಯು ಎಲ್ಲಾ ಕಾರ್ಯಾಚರಣೆ ಮತ್ತು ತಾಂತ್ರಿಕ ನಿಯತಾಂಕಗಳನ್ನು ಮೌಲ್ಯೀಕರಿಸಿದೆ ಎಂದು ತಿಳಿಸಿದೆ.

**ಅಗ್ನಿ ಸರಣಿಯಲ್ಲಿ ಅತ್ಯಂತ ಮುಂದುವರಿದ ಕ್ಷಿಪಣಿ:** ರಕ್ಷಣಾ ಸಂಶೋಧನೆ, ಅಭಿವೃದ್ಧಿ ಸಂಸ್ಥೆ ಅಭಿವೃದ್ಧಿಪಡಿಸಿರುವ ಈ ಅಗ್ನಿ5 ಪರಮಾಣು ಸಾಮರ್ಥ್ಯದ ಬ್ಯಾಲಿಸ್ಟಿಕ್ ಕ್ಷಿಪಣಿಯು, 5,000 ಕಿಲೋಮೀಟರ್‌ಗಳಿಗಿಂತ ಹೆಚ್ಚು ವ್ಯಾಪ್ತಿಯನ್ನು ಹೊಂದಿದೆ. ಹಾಗಾಗಿ, ಇದು ಅಗ್ನಿ ಸರಣಿಯಲ್ಲಿ ಅತ್ಯಂತ ಮುಂದುವರಿದ ಕ್ಷಿಪಣಿಯಾಗಿದ್ದು, ಇದು ಭಾರತದ ಭೂಆಧಾರಿತ ಪರಮಾಣು ನಿರೋಧಕದ ಬೆನ್ನೆಲುಬಾಗಿದೆ. ಅದರಂತೆ, ಈ ಕ್ಷಿಪಣಿಯು 1.5 ಟನ್‌ಗಳಷ್ಟು ತೂಕದ ಪರಮಾಣು ಸಿಡಿತಲೆಯನ್ನು ಹೊತ್ತೊಯ್ಯಬಲ್ಲದು ಮತ್ತು ಹಗುರವಾದ ಸಂಯೋಜಿತ ವಸ್ತುಗಳಿಂದ ನಿರ್ಮಿಸಲ್ಪಟ್ಟಿದ್ದು, ಅದರ ದಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಸುಧಾರಿಸುತ್ತದೆ.



ಅಗ್ನಿ 5 ಮಲ್ಟಿಪಲ್ ಇಂಡಿಪೆಂಡೆಂಟ್ಲಿ ಟಾರ್ಗೆಟಬಲ್ ರೀಎಂಟ್ರಿ ವೆಹಿಕಲ್ ತಂತ್ರಜ್ಞಾನವನ್ನು ಹೊಂದಿದ್ದು, ಇದು ಒಂದೇ ಕ್ಷಿಪಣಿಯು ವಿವಿಧ ಗುರಿಗಳಲ್ಲಿ ಬಹು ಸಿಡಿತಲೆಗಳನ್ನು ತಲುಪಿಸಲು ಅನುವು ಮಾಡಿಕೊಡುತ್ತದೆ, ಇದು ಅದರ ಕಾರ್ಯತಂತ್ರದ ಪರಿಣಾಮಕಾರಿತ್ವವನ್ನು ನಾಟಕೀಯವಾಗಿ ಹೆಚ್ಚಿಸುತ್ತದೆ. ಇನ್ನು ನಿಖರತೆಗಾಗಿ, ಇದು ರಿಂಗ್ ಲೇಸರ್ ಗೈರೊಸ್ಕೋಪ್‌ಆಧಾರಿತ ಜಡತ್ವ ಸಂಚರಣೆ ವ್ಯವಸ್ಥೆ ಮತ್ತು ಮೈಕ್ರೋಜಡತ್ವ ಸಂಚರಣೆ ವ್ಯವಸ್ಥೆ ಅನ್ನು ಬಳಸುತ್ತದೆ, ಇದನ್ನು ಭಾರತದ ಉಪಗ್ರಹ ಸಂಚರಣೆ ವ್ಯವಸ್ಥೆಗಳು ಬೆಂಬಲಿಸುತ್ತವೆ.

# ಮೊಬೈಲ್ ಪ್ರೀಮಿಯರ್ ಲೀಗ್ ಮುಂತಾದ ಆ್ಯಪ್‌ಗಳಿಗೆ ಕಡಿವಾಣ

## ಆನ್‌ಲೈನ್ ಗೇಮಿಂಗ್ ನಿಷೇಧ ವಿಧೇಯಕ ರಾಜ್ಯಸಭೆಯಲ್ಲಿ ಅಂಗೀಕಾರ; ರಾಷ್ಟ್ರಪತಿಗಳ ಅನುಮೋದನೆಯೊಂದೇ ಬಾಕಿ

**ನವದೆಹಲಿ:** ಹಣವನ್ನು ಹೂಡಿಕೆ ಮಾಡಲು ಪ್ರೇರೇಪಿಸುವ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ರೂಪಿಸಲಾದ ಆನ್ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆಗೆ ಲೋಕಸಭೆಯ ಬಳಿಕ ಇದೀಗ ರಾಜ್ಯಸಭೆಯಲ್ಲಿಯೂ ಅನುಮೋದನೆ ದೊರೆತಿದೆ. ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ಗದ್ದಲದ ಹೊರತಾಗಿಯೂ, ಮಸೂದೆಯನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು. ಉಪ ಸಭಾಪತಿ ಹರಿವಂಶ್ ಅವರು ಮೇಲ್ಮನೆಯಲ್ಲಿ ಮಸೂದೆಗೆ ಅನುಮೋದನೆಗೆ ಸದನ ಅನುಮೋದಿಸಿದೆ ಘೋಷಿಸಿದರು. ಇದೀಗ ಮಸೂದೆಗೆ ರಾಷ್ಟ್ರಪತಿಗಳ ಅನುಮೋದನೆಯೊಂದೇ ಬಾಕಿ ಉಳಿದಿದೆ. ರಾಷ್ಟ್ರಪತಿಗಳ ಅನುಮೋದನೆ ದೊರೆತರೆ ಮಸೂದೆ ಕಾಯ್ದೆಯಾಗಿ ಜಾರಿಯಾಗಲಿದ್ದು, ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳಿಗೆ ಸಂಪೂರ್ಣ ಕಡಿವಾಣ ಬೀಳಲಿದೆ.



**ಭಾರೀ ಗದಲಕ್ಕೆ ಎಡೆ**

ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಚಾಲನೆ ನೀಡಿದ ಈ ಮಸೂದೆಯು ಇ-ಸ್ಪೋರ್ಟ್ಸ್ ಮತ್ತು ಆನ್ಲೈನ್ ಸಾಮಾಜಿಕ ಆಟಗಳನ್ನು ಉತ್ತೇಜಿಸುವಾಗ ಎಲ್ಲಾ ರೀತಿಯ ಆನ್ಲೈನ್ ಹಣಕಾಸು ಗೇಮ್‌ಗಳನ್ನು ನಿಷೇಧಿಸುವ ಗುರಿಯನ್ನು ಹೊಂದಿದೆ. ವಿರೋಧ ಪಕ್ಷದ ಸದಸ್ಯರು ಪ್ರಸ್ತಾಪಿಸಿದ ತಿದ್ದುಪಡಿಗಳನ್ನು ತಿರಸ್ಕರಿಸಿದ್ದು, ಭಾರೀ ಗದಲಕ್ಕೆ ಎಡೆ ಮಾಡಿಕೊಟ್ಟಿತು. ಅದರೆ, ಅಂತಿಮವಾಗಿ ಧ್ವನಿ ಮತದಿಂದ ರಾಜ್ಯಸಭೆಯು ಮಸೂದೆಯನ್ನು ಅಂಗೀಕರಿಸಿತು. ಇದಕ್ಕೂ ಮುನ್ನ ಲೋಕಸಭೆಯಲ್ಲಿ ಈ ಮಸೂದೆಯನ್ನು ಅಂಗೀಕರಿಸಲಾಗಿತ್ತು.

**ಏನಿದು ಆನ್‌ಲೈನ್ ಗೇಮಿಂಗ್ ನಿಷೇಧ ಮಸೂದೆ:** ಆನ್ಲೈನ್ ಗೇಮಿಂಗ್ ಮಸೂದೆಯು, ಆನ್ಲೈನ್ ಹಣದ ಆಟಗಳ ಜಾಹೀರಾತುಗಳನ್ನು ನಿಷೇಧಿಸುತ್ತದೆ, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು ಅಂತಹ ಚಟುವಟಿಕೆಗಳಿಗೆ ಹಣವನ್ನು ಸುಗಮಗೊಳಿಸುವುದನ್ನು, ವರ್ಗಾಯಿಸುವುದನ್ನು ನಿಷೇಧಿಸುತ್ತದೆ. ಹಣದ ಅಥವಾ ಇತರ ಬಹುಮಾನಗಳನ್ನು ಗೆಲ್ಲುವ ನಿರೀಕ್ಷೆಯೊಂದಿಗೆ ಹಣವನ್ನು ಠೇವಣಿ ಮಾಡುವ ಮೂಲಕ ಆಡುವ ಆನ್ಲೈನ್ ಹಣದ ಆಟಗಳನ್ನು ಉದ್ದೇಶಿತ ನಿಷೇಧದ ಅಡಿಯಲ್ಲಿ ತರಲಾಗುವುದು. ಈ ಮಸೂದೆಯು ಆನ್ಲೈನ್ ಫ್ಯಾಂಟಸಿ ಕ್ರೀಡೆಗಳಿಂದ ಹಿಡಿದು ಆನ್ಲೈನ್ ಜೂಜಾಟ ಆನ್ಲೈನ್ ಲಾಟರಿಗಳವರೆಗೆ ಎಲ್ಲಾ ಆನ್ಲೈನ್ ಬೆಟ್ಟಿಂಗ್ ಮತ್ತು ಜೂಜಿನ ಚಟುವಟಿಕೆಗಳನ್ನು ನಿಷೇಧಿಸುತ್ತದೆ. ಈ ಕ್ರಮವು ಜಾಗತಿಕ ಹೂಡಿಕೆದಾರರ ಗಮನವನ್ನು ಸೆಳೆದಿರುವ ಮತ್ತು ಡ್ರೀಮ್ 11, ಗೇಮ್ಸ್24 ಎಕ್ಸ್7, ಮೊಬೈಲ್ ಪ್ರೀಮಿಯರ್ ಲೀಗ್ ನಂತಹ ಫ್ಯಾಂಟಸಿ ಕ್ರೀಡಾ ಅಪ್ಲಿಕೇಶನ್‌ಗಳನ್ನು ಉತ್ತೇಜಿಸಿರುವ ದೇಶದ 3.8 ಬಿಲಿಯನ್ ಡಾಲರ್ ಗೇಮಿಂಗ್ ಉದ್ಯಮಕ್ಕೆ ಹೊಡೆತ ನೀಡಲಿದೆ.

**ನಿಯಮ ಉಲ್ಲಂಘಿಸಿದರೆ 3 ವರ್ಷ ಜೈಲು ಶಿಕ್ಷೆ:** ಇತ್ತೀಚಿನ ದಿನಗಳಲ್ಲಿ ಯುವ ಪೀಳಿಗೆಗಳು ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳಿಗೆ ದಾಸರಾಗುತ್ತಿರುವುದನ್ನು ಮನಗಂಡು ಅವುಗಳ ನಿಷೇಧಕ್ಕೆ ಕಾಯ್ದೆಯನ್ನು ತರಲಾಗುತ್ತಿದೆ. ಈ ಮಸೂದೆಯು ಆನ್ಲೈನ್ ಮನಿ ಗೇಮಿಂಗ್ ಅನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡುತ್ತದೆ. ಇದರಲ್ಲಿ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು/ಅಥವಾ 1 ಕೋಟಿ ರೂಪಾಯಿಗಳವರೆಗೆ ದಂಡವನ್ನು ಒಳಗೊಂಡಿರುತ್ತದೆ. ಇದು ಪುನರಾವರ್ತಿತ ಅಪರಾಧಗಳಿಗೆ 3 ರಿಂದ 5 ವರ್ಷಗಳ ಜೈಲು ಶಿಕ್ಷೆ ಮತ್ತು 2 ಕೋಟಿ ರೂಪಾಯಿಗಳವರೆಗೆ ದಂಡ ವಿಧಿಸುವ ನಿಬಂಧನೆಯನ್ನು ಸಹ ಒಳಗೊಂಡಿದೆ.

- **ಆನ್ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಮಸೂದೆಗೆ ಲೋಕಸಭೆಯ ಬಳಿಕ ರಾಜ್ಯಸಭೆಯಲ್ಲಿ ಅಂಗೀಕಾರ ನೀಡಲಾಗಿದೆ**
- **ಈ ಮಸೂದೆ ಅಡಿಯಲ್ಲಿ ಆನ್‌ಲೈನ್ ಹಣ ಹೂಡಿಕೆಯ ಆಟಗಳು, ಜೂಜಾಟ ಮತ್ತು ಲಾಟರಿಗಳಂತಹ ಎಲ್ಲಾ ಚಟುವಟಿಕೆಗಳು ನಿಷೇಧವಾಗಲಿವೆ**
- **ನಿಷೇಧಿತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಮಸೂದೆ 3 ರಿಂದ 5 ವರ್ಷಗಳ ಜೈಲು ಶಿಕ್ಷೆ ಮತ್ತು 2 ಕೋಟಿ ರೂಪಾಯಿಯ ದಂಡವನ್ನು ವಿಧಿಸುತ್ತದೆ.**

**ನಿಯಮ ಉಲ್ಲಂಘಿಸಿದರೆ ಜೈಲು ಶಿಕ್ಷೆ**

**ಹಣ ಹೂಡಿಕೆಗೆ ಪ್ರೇರೇಪಿಸುವ ಆನ್‌ಲೈನ್ ಗೇಮಿಂಗ್ ಆ್ಯಪ್‌ಗಳಿಗೆ ಕಡಿವಾಣ ಹಾಕುವ ಮಸೂದೆಗೆ ರಾಜ್ಯಸಭೆಯೂ ಅನುಮೋದನೆ ನೀಡಿದೆ. ಲೋಕಸಭೆಯಲ್ಲಿ ಅಂಗೀಕಾರಗೊಂಡ ಬಳಿಕ, ರಾಜ್ಯಸಭೆಯಲ್ಲಿ ಧ್ವನಿಮತದ ಮೂಲಕ ಮಸೂದೆ ಅಂಗೀಕಾರವಾಗಿದೆ. ರಾಷ್ಟ್ರಪತಿಗಳ ಅನುಮೋದನೆಯ ಬಳಿಕ ವಿಧೇಯಕ ಕಾಯ್ದೆಯ ರೂಪ ತಾಳಲಿದೆ. ಈ ಮಸೂದೆಯು ಆನ್‌ಲೈನ್ ಹಣಕಾಸು ಗೇಮ್‌ಗಳನ್ನು ನಿಷೇಧಿಸುವ ಗುರಿಯನ್ನು ಹೊಂದಿದೆ, ನಿಯಮ ಉಲ್ಲಂಘಿಸಿದರೆ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗುವುದು. ಇದರಿಂದ ಡ್ರೀಮ್ 11, ಗೇಮ್ಸ್ 24 ಎಕ್ಸ್ 7 ಮತ್ತು ಮೊಬೈಲ್ ಪ್ರೀಮಿಯರ್ ಲೀಗ್ ಮುಂತಾದ ಆ್ಯಪ್‌ಗಳಿಗೆ ಕಡಿವಾಣ ಬೀಳಲಿದೆ.**

## ಮಿನಿ ನ್ಯೂಸ್

### ಎಫ್‌ಬಿಐನ ಟಾಪ್-10 ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿದ್ದ ಮಹಿಳೆ ಬಂಧನ

**ನ್ಯೂಯಾರ್ಕ್:** 6 ವರ್ಷದ ಮಗನನ್ನು ಕೊಂದು ವಿಚಾರಣೆಯಿಂದ ತಪ್ಪಿಸಿಕೊಳ್ಳಲು ಭಾರತಕ್ಕೆ ಪಲಾಯನ ಮಾಡಿದ ಮಹಿಳೆಯನ್ನು ಅಮೆರಿಕದ ಎಫ್‌ಬಿಐ ಅಧಿಕಾರಿಗಳು ಬಂಧಿಸಿದ್ದಾರೆ. ಎಫ್‌ಬಿಐನ ಟಾಪ್ 10 ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿರುವ ಸಿಂಡಿ ರೊಡ್ರಿಗಸ್ ಸಿಂಗ್(40) ಎಂಬಕೆಯನ್ನು ಬಂಧಿಸಲಾಗಿದೆ ಎಂದು ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ನಿರ್ದೇಶಕ ಕಾಶ್ ಪಟೇಲ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ತನ್ನ ಮಗನನ್ನು ಕೊಂದ ಆರೋಪದ ಆಕೆಯ ಮೇಲಿದೆ. ಟೆಕ್ಸಾಸ್‌ನಲ್ಲಿರುವ ಕಾನೂನು ಜಾರಿ ಅಧಿಕಾರಿಗಳು ಯುಎಸ್ ನ್ಯಾಯ ಇಲಾಖೆ ಮತ್ತು ಭಾರತದಲ್ಲಿನ ಅಧಿಕಾರಿಗಳ ಸಮನ್ವಯತೆಯಿಂದ ಟಾಪ್ 10 ಮೋಸ್ಟ್ ವಾಂಟೆಡ್‌ನಲ್ಲಿ ಈಕೆ 4ನೇ ಸ್ಥಾನದಲ್ಲಿದ್ದಳು.ಭಾರತದಲ್ಲಿ ಎಫ್‌ಬಿಐ ಬಂಧಿಸಿದೆ ಎಂದು ಹೇಳಿದ್ದಾರೆ.

ಭಾರತೀಯ ಅಧಿಕಾರಿಗಳು ಮತ್ತು ಇಂಟರ್‌ಪೋಲ್‌ನ ಸಮನ್ವಯದೊಂದಿಗೆ ಸಿಂಗ್ ಅವರನ್ನು ಭಾರತದಲ್ಲಿ ಎಫ್‌ಬಿಐ ಬಂಧಿಸಿದೆ ಎಂದು ಫಾಕ್ಸ್ ನ್ಯೂಸ್ ವರದಿ ಮಾಡಿದೆ. ಅವರನ್ನು ಅಮೆರಿಕಕ್ಕೆ ಸಾಗಿಸಲಾಗಿದೆ, ಟೆಕ್ಸಾಸ್ ಅಧಿಕಾರಿಗಳಿಗೆ ಹಸ್ತಾಂತರಿಸಲಾಗುವುದು ಎಂದು ಅದು ಹೇಳಿದೆ. ಆಕೆಯ ಮಗನಿಗೆ ತೀವ್ರ ಬೆಳವಣಿಗೆಯ ಅಸ್ವಸ್ಥತೆ, ಸಾಮಾಜಿಕ ಅಸ್ವಸ್ಥತೆ, ಮೂಳೆ ಸಾಂದ್ರತೆ ಸಮಸ್ಯೆಗಳು, ದೀರ್ಘಕಾಲದ ಶ್ವಾಸಕೋಶದ ಕಾಯಿಲೆ ಸೇರಿದಂತೆ ಹಲವಾರು ಆರೋಗ್ಯ, ಬೆಳವಣಿಗೆಯ ಸಮಸ್ಯೆಗಳಿದ್ದವು ಎಂದು ಅಧಿಕಾರಿಗಳನ್ನು ಉಲ್ಲೇಖಿಸಿ ಫಾಕ್ಸ್ ನ್ಯೂಸ್ ವರದಿ ಮಾಡಿದೆ. 2023ರ ಅಕ್ಟೋಬರ್‌ನಲ್ಲಿ ಟೆಕ್ಸಾಸ್ ಜಿಲ್ಲಾ ನ್ಯಾಯಾಲಯದಲ್ಲಿ ಸಿಂಗ್ ವಿರುದ್ಧ ಔಪಚಾರಿಕವಾಗಿ ಆರೋಪ ಹೊರಿಸಲಾಯಿತು. ಪಟೇಲ್ ಅವರ ಪೋಸ್ಟ್ ಪ್ರಕಾರ, ಅವರು ಪ್ರಾಸಿಕ್ಯೂಷನ್ ತಪ್ಪಿಸಲು ಕಾನೂನುಬಾಹಿರವಾಗಿ ದೇಶ ಬಿಟ್ಟ ಮತ್ತು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಕೊಲೆಆರೋಪಗಳನ್ನು ಎದುರಿಸಬೇಕಾಗುತ್ತದೆ.

### ರೇಖಾ ಗುಪ್ತಾಗೆ ಝಡ್+ ಭದ್ರತೆ

**ನವದೆಹಲಿ:** ಅನಾಮಧೇಯ ವ್ಯಕ್ತಿಯೊಬ್ಬ ಏಕಾಏಕಿ ಕಪಾಳಮೋಕ್ಷ ನಡೆಸಿದ ಹಿನ್ನಲೆಯಲ್ಲಿ ದೆಹಲಿ ಸಿಎಂ ರೇಖಾ ಗುಪ್ತಾ ಅವರಿಗೆ ದೇಶದ 2ನೇ ಅತಿ ಗರಿಷ್ಠ ಭದ್ರತೆಯ ಝಡ್+ ವ್ಯವಸ್ಥೆ ಒದಗಿಸಲಾಗಿದೆ. ಪ್ರಧಾನಮಂತ್ರಿಗಳಿಗೆ ಮಾತ್ರ ದೇಶದ ಅತ್ಯುನ್ನತ ಎಸ್‌ಪಿಜಿ ಭದ್ರತೆಯನ್ನು ನೀಡಲಾಗುತ್ತದೆ. ಅದನ್ನು ಬಿಟ್ಟರೆ ಗೃಹಸಚಿವರು ಹಾಗೂ ಇತರೆ ಕೆಲವೇ ಗಣ್ಯ ವ್ಯಕ್ತಿಗಳಿಗೆ ಮಾತ್ರ ಝಡ್+ ಭದ್ರತೆಯನ್ನು ಒದಗಿಸಲಾಗುತ್ತದೆ. ಗುಪ್ತಚರ ವಿಭಾಗದ ಮಾಹಿತಿ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಇಲಾಖೆಯು ರೇಖಾ ಗುಪ್ತ ಅವರಿಗೆ ಝಡ್+ ಭದ್ರತೆ ನೀಡಬೇಕೆಂದು ಸಲಹೆ ಮಾಡಿತ್ತು. ಹೀಗಾಗಿ ಗೃಹ ಇಲಾಖೆಯು ತತಕ್ಷಣವೇ ಅನ್ವಯವಾಗುವಂತೆ ದೆಹಲಿ ಮುಖ್ಯಮಂತ್ರಿಗೆ ಝಡ್+ ಭದ್ರತೆಯನ್ನು ನಿಯೋಜಿಸಲಾಗಿದೆ.

ಇದರಿಂದ ಮುಖ್ಯಮಂತ್ರಿಗೆ ಒಟ್ಟು 55 ಭದ್ರತಾ ಅಧಿಕಾರಿಗಳನ್ನು ಒದಗಿಸಲಾಗುತ್ತದೆ. ಎನ್‌ಎಸ್‌ಜಿ ಕಮಾಂಡೋ, ಸಿಆರ್‌ಪಿಎಫ್, ಪೊಲೀಸ್ ಅಧಿಕಾರಿಗಳು, ಇತರೆ ಭದ್ರತಾ ಪಡೆಗಳು ನಿಯೋಜನೆಗೊಳ್ಳುತ್ತಾರೆ. ಸಿಎಂಗೆ ರಕ್ಷಣಾ ದೃಷ್ಟಿಯಿಂದ ಗುಂಡು ನಿರೋಧಕ ವಾಹನಗಳನ್ನು ಬಳಸಲಾಗುತ್ತದೆ. ದೆಹಲಿಯಲ್ಲಿರುವ ಸಿವಿಲ್ ಲೈನ್ಸ್ ಕ್ಯಾಂಪ್ ಕಚೇರಿಯಲ್ಲಿ ಜನ್ ಸುನ್ವಾಯ್ ಕಾರ್ಯಕ್ರಮ ನಡೆಯುವ ವೇಳೆ ಅನಾಮಧೇಯ ವ್ಯಕ್ತಿಯೊಬ್ಬ ಭೇಟಿ ಮಾಡುವ ನೆಪದಲ್ಲಿ ಬಂದು ಏಕಾಏಕಿ ಹಲ್ಲೆ ನಡೆಸಿ ಕಪಾಳಮೋಕ್ಷ ನಡೆಸಿದ್ದಾನೆ. ಈ ಪ್ರಕರಣವು ದೇಶಾದ್ಯಂತ ಭಾರೀ ಸುದ್ದಿ ಮಾಡಿತ್ತು. ಇದೀಗ ಈ ವ್ಯಕ್ತಿಯನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಮೂಲತಃ ಈತ ಗುಜರಾತ್‌ನವನು ಎಂದು ತಿಳಿದುಬಂದಿದೆ.

### ಮಕ್ಕಳಿಗೆ ಕಬ್ಬಿಣದ ರಾಡ್‌ನಿಂದ ಬರೆ ಹಾಕಿದ ವಾರ್ಡನ್

**ಬಾರ್ಮರ್:** ಇಬ್ಬರು ಮಕ್ಕಳು ಹಾಸಿಗೆ ಒದ್ದೆ ಮಾಡಿದ್ದಕ್ಕಾಗಿ ಶಿಸ್ತು ಉಲ್ಲಂಘನೆ ನೆಪದಲ್ಲಿ ವಾರ್ಡನ್ ಬಿಸಿ ಕಬ್ಬಿಣದ ರಾಡ್‌ನಿಂದ ಹೊಡೆದಿರುವ ಘಟನೆ ರಾಜಸ್ಥಾನದ ಬಾರ್ಮರ್ ಜಿಲ್ಲೆಯ ಗುರುಕುಲವೊಂದರಲ್ಲಿ ನಡೆದಿದೆ. ಕಳೆದ ಆ.17 ರಂದು ಹರ್ಪಾಲೇಶ್ವರ ಮಹಾದೇವ್ ವಿಕಾಸ್ ಸೇವಾ ಸಮಿತಿ ನಡೆಸುತ್ತಿರುವ ಸೇಡ್ವಾ ಪ್ರದೇಶದ ಹರ್ಪಾಲಿಯ ಗ್ರಾಮದ ಗುರುಕುಲದಲ್ಲಿ ನಡೆದಿದೆ.2022 ರಿಂದ ಕಾರ್ಯನಿರ್ವಹಿಸುತ್ತಿರುವ ಗುರುಕುಲವು ಬಡ, ಅಲೆಮಾರಿ ಮತ್ತು ಅನಾಥ ಕುಟುಂಬಗಳ ಮಕ್ಕಳನ್ನು ಹೊಂದಿದೆಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಒಬ್ಬ ಕಳೆದ ರಾತ್ರಿ ಗುರುಕುಲದಿಂದ ಓಡಿಹೋಗಿ ತನ್ನ ಕುಟುಂಬಕ್ಕೆ ಚಿತ್ರಹಿಂಸೆಯ ಬಗ್ಗೆ ತಿಳಿಸಿದ ನಂತರ ಈ ವಿಷಯ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮಕ್ಕಳ ಸುಟ್ಟ ಗಾಯಗಳು ಮತ್ತು ಅವರ ಮೇಲಿನ ದೌರ್ಜನ್ಯದ ವೀಡಿಯೊ ವೈರಲ್ ಆದ ನಂತರ ಕಠಿಣ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಸಂಸ್ಥೆಯ ಹೊರಗೆ ಜಮಾಯಿಸಿದರು. ಭರತ್‌ಪುರ ನಿವಾಸಿ ಮತ್ತು ಗುರುಕುಲದ ವಾರ್ಡನ್, ಶಿಕ್ಷಕ ನಾರಾಯಣ ಗಿರಿ ಅವರನ್ನು ಬಂಧಿಸಲಾಗಿದೆ ಎಂದು ಚೌಹಾಟನ್ ಉಪ ಎಸ್‌ಪಿ ಜೀವನ್ ಲಾಲ್ ಖತ್ರಿ ದೃಢಪಡಿಸಿದ್ದಾರೆ.

ಬ್ಲಾಕ್ ಶಿಕ್ಷಣ ಅಧಿಕಾರಿ ಪ್ರಕಾಶ್ ಚಂದ್ ವಿಷ್ಣೋಯ್ ಇಲಾಖಾ ತನಿಖೆ ಆರಂಭಿಸಲಾಗಿದೆ ಎಂದು ಹೇಳಿದರು. ಘಟನೆಯ ತನಿಖೆಗಾಗಿ ಸಮಿತಿಯನ್ನು ರಚಿಸಲಾಗಿದೆ. ನಾವು ಗುರುಕುಲಕ್ಕೆ ಭೇಟಿ ನೀಡಿದ್ದೇವೆ, ಮಕ್ಕಳು, ಅವರ ಪೋಷಕರು, ಸಿಬ್ಬಂದಿಯೊಂದಿಗೆ ಸಂವಹನ ನಡೆಸಿದ್ದೇವೆ. ವರದಿಯನ್ನು ಶೀಘ್ರದಲ್ಲೇ ಸಲ್ಲಿಸಲಾಗುವುದು ಎಂದು ವಿಷ್ಣೋಯ್ ಹೇಳಿದರು. ಪ್ರಾಥಮಿಕ ತನಿಖೆಯ ಪ್ರಕಾರ, ಸುಮಾರು 10 ಮತ್ತು 11 ವರ್ಷ ವಯಸ್ಸಿನ ಮಕ್ಕಳು ಮಲಗಿದ್ದಾಗ ಹಾಸಿಗೆ ಒದ್ದೆ ಮಾಡಿದ ನಂತರ ಆರೋಪಿಗಳು ಅವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ವೈರಲ್ ವೀಡಿಯೊದಲ್ಲಿ ಗ್ರಾಮಸ್ಥರು ವಾರ್ಡನ್ ಹಿಂದೆ ಕೋಲುಗಳಿಂದ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿರುವುದನ್ನು ಸಹ ತೋರಿಸಲಾಗಿದೆ.

### 6 ಶಾಲೆಗಳಿಗೆ ಮತ್ತೆ ಬಾಂಬ್ ಬೆದರಿಕೆ

**ನವದೆಹಲಿ:** ರಾಷ್ಟ್ರ ರಾಜಧಾನಿಯ ಗುರುವಾರ ಬೆಳಿಗ್ಗೆ ಆರು ಶಾಲೆಗಳಿಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದ್ದು, ಪೊಲೀಸರು ಮತ್ತು ಇತರ ತುರ್ತು ಸಂಸ್ಥೆಗಳು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿವೆ. ರಾಜಧಾನಿಯ ಆರು ಶಾಲೆಗಳಲ್ಲಿ ಬೆಳಿಗ್ಗೆ 6.35 ರಿಂದ ಬೆಳಿಗ್ಗೆ 7.48 ರ ನಡುವೆ ಬಾಂಬ್ ಬೆದರಿಕೆಗೆ ಸಂಬಂಧಿಸಿದ ಕರೆಗಳು ಬಂದಿವೆ. ಇವುಗಳಲ್ಲಿ ಪ್ರಸಾದ್ ನಗರದಲ್ಲಿರುವ ಆಂಧ್ರ ಶಾಲೆ, ಬಿಜಿಎಸ್ ಇಂಟರ್‌ನ್ಯಾಷನಲ್ ಶಾಲೆ, ರಾವ್ ಮಾನ್ ಸಿಂಗ್ ಶಾಲೆ, ಕಾನ್ವೆಂಟ್ ಶಾಲೆ, ಮ್ಯಾಕ್ಸ್ ಫೋರ್ಟ್ ಶಾಲೆ ಮತ್ತು ದ್ವಾರಕಾದ ಇಂದ್ರಪ್ರಸ್ಥ ಅಂತರರಾಷ್ಟ್ರೀಯ ಶಾಲೆ ಸೇರಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಮತ್ತು ಬಾಂಬ್ ನಿಷ್ಕ್ರಿಯ ದಳಗಳೊಂದಿಗೆ ಪೊಲೀಸ್ ತಂಡಗಳು ತಕ್ಷಣ ಆವರಣಕ್ಕೆ ಧಾವಿಸಿವೆ ಪರಿಶೀಲನೆ ನಡೆಸಿದೆ. ನಾಲ್ಕು ದಿನಗಳಲ್ಲಿ ಇದು ಮೂರನೇ ಘಟನೆಯಾಗಿದೆ. ಸೋಮವಾರ, ದೆಹಲಿಯಾದ್ಯಂತ 32 ಶಾಲೆಗಳಿಗೆ ಇದೇ ರೀತಿಯ ಬೆದರಿಕೆಗಳು ಬಂದವು, ಅದು ನಂತರ ಹುಸಿ ಬೆದರಿಕೆಯಾಗಿತ್ತು.

ಬುಧವಾರ, ರಾಷ್ಟ್ರ ರಾಜಧಾನಿಯ ಸುಮಾರು 50 ಶಾಲೆಗಳಿಗೆ ಇ-ಮೇಲ್ ಮೂಲಕ ಮತ್ತೆ ಬಾಂಬ್ ಬೆದರಿಕೆಗಳು ಬಂದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕುಚೋದ್ಯದ ಬಗ್ಗೆ ಪೊಲೀಸರ ಸೈಬರ್ ತಂಡ ತನಿಖೆ ನಡೆಸುತ್ತಿದೆ.

## ಬಿಡುಗಡೆ ಆಗುತ್ತಿದೆ ಎಐ ಸಿನಿಮಾ



ಎಐ ಬಳಸಿ ಸಿನಿಮಾ

ಭಾರತದ ಮೊದಲ ಫೀಚರ್ ಫಿಲಂ ಅವಧಿಯ ಎಐ ಜನರೇಟೆಡ್ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದೆ. ಕೇವಲ ಕೃತಕ ಬುದ್ಧಿಮತ್ತೆ ಬಳಸಿ ನಿರ್ಮಿಸಿದ ಸಿನಿಮಾ ಇದಾಗಿದ್ದು ಸಿನಿಮಾದ ಹೆಸರು 'ಚಿರಂಜೀವಿ ಹನುಮಾನ್'. ಆದರೆ ಸಿನಿಮಾ ಬಿಡುಗಡೆಗೆ ಮುಂಚೆಯೇ ಸಿನಿಮಾಕ್ಕೆ ವಿರೋಧ ವ್ಯಕ್ತವಾಗಿದೆ. ಟೀಕೆಗಳು ವ್ಯಕ್ತವಾಗಿವೆ. 'ಎಐ' (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್-ಕೃತಕ ಬುದ್ಧಿಮತ್ತೆ) ಈಗ ವಿಶ್ವದೆಲ್ಲೆಡೆ ಚರ್ಚೆ ಹುಟ್ಟುಹಾಕಿರುವ ವಿಷಯ. ಎಐ ಇಡೀ ವಿಶ್ವವನ್ನೇ ಬದಲಾಯಿಸಲಿದೆ ಎನ್ನಲಾಗುತ್ತಿದೆ. ಈಗಾಗಲೇ ಕೆಲವು ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಎಐ ತಂದಿದೆ. ಹಲವಾರು ಕ್ಷೇತ್ರಗಳಲ್ಲಿ ಎಐ ಅನ್ನು ಈಗಾಗಲೇ ಬಳಸಲಾಗುತ್ತಿದ್ದು, ಮಾನವ ಶ್ರಮವನ್ನು ಕಡಿಮೆ ಮಾಡಲಾಗಿದೆ ಜೊತೆಗೆ ಅದ್ಭುತ ಫಲಿತಾಂಶವನ್ನು ಸಹ ಪಡೆಯಲಾಗುತ್ತಿದೆ. ಇದೀಗ ಚಿತ್ರರಂಗದಲ್ಲಿಯೂ ಸಹ ಎಐ ಬಳಕೆ ಆರಂಭವಾಗಿದೆ. ಇದೀಗ ಭಾರತದ ಮೊದಲ ಫೀಚರ್ ಫಿಲಂ ಅವಧಿಯ 'ಎಐ' ಸಿನಿಮಾ ತಯಾರಾಗಿದ್ದು, ಸಿನಿಮಾ ಬಿಡುಗಡೆಗೆ ಸಿದ್ಧವಾಗಿದೆ. ಎಐ ಬಳಸಿ ಹಲವು ಕಿರುಚಿತ್ರ, ವಿಡಿಯೋಗಳನ್ನು ಸೃಷ್ಟಿಸಲಾಗಿದೆ. ಸಿನಿಮಾ ನಿರ್ಮಾಣದ ಪ್ರಯತ್ನಗಳು ಸಹ ಆಗಿವೆ. ಆದರೆ ಭಾರತದಲ್ಲಿ ಇದೇ ಮೊದಲ ಬಾರಿಗೆ ಫೀಚರ್ ಫಿಲಂ ಅವಧಿಯ ಸಂಪೂರ್ಣ ಎಐ ಬಳಸಿ ಸಿನಿಮಾ ನಿರ್ಮಿಸಲಾಗಿದೆ. 'ಚಿರಂಜೀವಿ ಹನುಮಾನ್' ಹೆಸರಿನ ಪೌರಾಣಿಕ ಸಿನಿಮಾವನ್ನು ಸಂಪೂರ್ಣ ಎಐ ಬಳಸಿ ನಿರ್ಮಾಣ ಮಾಡಲಾಗಿದೆ. ಸಿನಿಮಾ ಬಿಡುಗಡೆಗೆ ಸಹ ಸಜ್ಜಾಗಿದೆ ಆದರೆ ಕೆಲವು ವಿರೋಧಗಳು ಈ ಸಿನಿಮಾಕ್ಕೆ ಎದುರಾಗಿದೆ.

## 45 ಸಿನಿಮಾ ಬಿಡುಗಡೆ ದಿನಾಂಕ ಘೋಷಣೆ



ಶಿವರಾಜ್ ಕುಮಾರ್, ಉಪೇಂದ್ರ, ರಾಜ್ ಬಿ ಶೆಟ್ಟಿ ನಟಿಸಿ ಅರ್ಜುನ್ ಜನ್ಯ ಮೊದಲ ಬಾರಿಗೆ ನಿರ್ದೇಶನ ಮಾಡಿರುವ 45 ಕನ್ನಡ ಸಿನಿಮಾ ಆಗಸ್ಟ್ 15ರಂದೇ ಬಿಡುಗಡೆ ಆಗಬೇಕಿತ್ತು. ಆದರೆ ವಿಎಫ್‌ಎಕ್ಸ್ ಕಾರಣಕ್ಕೆ ಬಿಡುಗಡೆ ವಿಳಂಬವಾಗಿದೆ. ಇದೀಗ ಸಿನಿಮಾ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಣೆ ಮಾಡಿದೆ. ಶಿವರಾಜ್ ಕುಮಾರ್, ಉಪೇಂದ್ರ ಮತ್ತು ರಾಜ್ ಬಿ ಶೆಟ್ಟಿ ನಟಿಸಿರುವ '45' ಸಿನಿಮಾ ಕನ್ನಡದ ಬಹು ನಿರೀಕ್ಷಿತ ಸಿನಿಮಾಗಳಲ್ಲಿ ಒಂದು. ಸಿನಿಮಾ ಅನ್ನು ಸಂಗೀತ ನಿರ್ದೇಶಕ ಅರ್ಜುನ ಜನ್ಯ ನಿರ್ದೇಶನ ಮಾಡಿದ್ದು, ಇದು ಅವರ ಮೊದಲ ನಿರ್ದೇಶನದ ಸಿನಿಮಾ. ಈ ಸಿನಿಮಾ ಆಗಸ್ಟ್ 15 ರಂದು ಬಿಡುಗಡೆ ಆಗಲಿದೆ ಎಂದು ಈ ಮುಂಚೆ ಘೋಷಿಸಲಾಗಿತ್ತು. ಆದರೆ ಅನಿವಾರ್ಯ ಕಾರಣಗಳಿಂದಾಗಿ ಸಿನಿಮಾ ಬಿಡುಗಡೆ ನಿಗದಿತ ದಿನಾಂಕಕ್ಕೆ ಮಾಡಲಾಗಲಿಲ್ಲ. ಇದೀಗ ಸಿನಿಮಾದ ಬಿಡುಗಡೆ ದಿನಾಂಕವನ್ನು ಚಿತ್ರತಂಡ ಘೋಷಣೆ ಮಾಡಿದೆ. '45' ಕನ್ನಡ ಸಿನಿಮಾ ಡಿಸೆಂಬರ್ 25 ರಂದು ಬಿಡುಗಡೆ ಆಗಲಿದೆ. ಡಿಸೆಂಬರ್ ತಿಂಗಳಲ್ಲಿ ಬಿಡುಗಡೆ ಆಗುವ ಕನ್ನಡ ಸಿನಿಮಾಗಳು ದೊಡ್ಡ ಹಿಟ್ ಆದ ಉದಾಹರಣೆಗಳು ಕಳೆದ ಕೆಲ ವರ್ಷಗಳಲ್ಲಿ ಇವೆ. ಇದೀಗ '45' ಸಿನಿಮಾ ಸಹ ಡಿಸೆಂಬರ್ ತಿಂಗಳಲ್ಲಿ ಬಿಡುಗಡೆಗೆ ಮುಂದಾಗಿದ್ದು, ಈ ಸಿನಿಮಾ ಸಹ ಹಿಟ್ ಆಗಲಿದೆಯೇ ಕಾದು ನೋಡಬೇಕಿದೆ. ಆದರೆ ಡಿಸೆಂಬರ್ ತಿಂಗಳಲ್ಲಿ ಕೆಲ ದೊಡ್ಡ ಸಿನಿಮಾಗಳು ಸಹ ಬಿಡುಗಡೆ ಆಗುತ್ತಿದ್ದು '45' ಸಿನಿಮಾಕ್ಕೆ ಪ್ರಬಲ ಸ್ಪರ್ಧೆಯನ್ನು ಬಾಕ್ಸ್ ಆಫೀಸ್‌ನಲ್ಲಿ ಒಡ್ಡಲಿವೆ.

## ಸಲ್ಮಾನ್ ಚಿತ್ರದಿಂದ ಪೂಜಾ ಹೆಗ್ಡೆ ಹೊರಕ್ಕೆ



ಪೂಜಾ ಹೆಗ್ಡೆ ಅವರ ವೃತ್ತಿಜೀವನ ಇತ್ತೀಚೆಗೆ ಇಳಿಮುಖ ಕಾಣುತ್ತಿದೆ. ಅವರ ಹಲವಾರು ಚಿತ್ರಗಳು ವಿಫಲವಾಗಿವೆ. ದುಲ್ಖರ್ ಸಲ್ಮಾನ್ ಚಿತ್ರದಿಂದಲೂ ಅವರನ್ನು ತೆಗೆದುಹಾಕಲಾಗಿದೆ ಎನ್ನಲಾಗಿದೆ. ಪೂಜಾ ಹೆಗ್ಡೆ ಅವರಿಗೆ ಇತ್ತೀಚೆಗೆ ಗೆಲುವಿನ ಹಾದಿ ಕಂಡುಕೊಳ್ಳುವುದು ಕಷ್ಟ ಎನಿಸಿದೆ. ಅವರು ಮಾಡಿದ ಚಿತ್ರಗಳೆಲ್ಲವೂ ಸೋಲುತ್ತಿವೆ. ನಟಿ ಪೂಜಾ ಹೆಗ್ಡೆ ಅವರು ವೃತ್ತಿ ಜೀವನ ಇಳಿಮುಖವಾಗಿ ಸಾಗುತ್ತಿದೆ. ಅವರಿಗೆ ಒಳ್ಳೆಯ ಪ್ರಾಜೆಕ್ಟ್‌ಗಳೇ ಸಿಗುತ್ತಿವೆ. ಆದರೆ, ಯಾವುದೂ ಯಶಸ್ಸಿನ ಹಾದಿ ಹಿಡಿಯುತ್ತಿಲ್ಲ. 'ಕೆಟ್ಟದಕ್ಕೆಲ್ಲ ಶನೀಶ್ವರನೇ ಕಾರಣ' ಎಂಬಂತೆ, ಸಿನಿಮಾ ಸೋಲಿನ ಹೊಣೆಯನ್ನು ಪೂಜಾ ಹೆಗ್ಡೆ ಮೇಲೆ ಹೊರಿಸಲಾಗುತ್ತಿದೆ. ಹೀಗಿರುವಾಗಲೇ ದುಲ್ಕರ್ ಸಲ್ಮಾನ್ ಚಿತ್ರದಿಂದ ಪೂಜಾ ಹೆಗ್ಡೆಯನ್ನು ಹೊರಕ್ಕೆ ಇಡಲಾಗಿದೆ ಎಂಬ ಮಾಹಿತಿ ಹೊರ ಬಿದ್ದಿದೆ. ಈ ವಿಚಾರ ಕೇಳಿ ಅನೇಕರಿಗೆ ಶಾಕ್ ಆಗಿದೆ. ಪೂಜಾ ಹೆಗ್ಡೆ ಅವರು ಕೊನೆಯದಾಗಿ ತೆಲುಗು ಚಿತ್ರರಂಗದಲ್ಲಿ ಕಾಣಿಸಿಕೊಂಡಿದ್ದು 2022ರ 'ಆಚಾರ್ಯ' ಚಿತ್ರದಲ್ಲಿ.

## ರಾಜಮೌಳಿ-ಮಹೇಶ್ ಬಾಬು ಸಿನಿಮಾಕ್ಕೆ ಹಾಲಿವುಡ್ ಸ್ಟಾರ್‌ಸಾಥ್


ಎಸ್‌ಎಸ್ ರಾಜಮೌಳಿ ಹಾಗೂ ಮಹೇಶ್ ಬಾಬು ಸಿನಿಮಾಕ್ಕಾಗಿ ಇಡೀ ವಿಶ್ವದ ಸಿನಿಮಾ ಪ್ರೇಮಿಗಳು ಎದುರು ನೋಡುತ್ತಿದ್ದಾರೆ. ಆದರೆ ರಾಜಮೌಳಿ ಈ ವರೆಗೆ ಸಿನಿಮಾ ಹೆಸರನ್ನು ಸಹ ಬಹಿರಂಗಪಡಿಸಿಲ್ಲ. ಇದೀಗ ಸಿನಿಮಾದ ಹೆಸರು ಮತ್ತು ಮೊದಲ ಪೋಸ್ಟರ್ ಅನ್ನು ಬಿಡುಗಡೆಗೆ ಯೋಜನೆ ರೂಪಿಸಿದ್ದು, ಜಗದ್ವಿಖ್ಯಾತ ಸಿನಿಮಾ ನಿರ್ದೇಶಕರೊಬ್ಬರು ಪೋಸ್ಟರ್ ಬಿಡುಗಡೆ ಮಾಡಲಿದ್ದಾರೆ. ದೇಶದಾದ್ಯಂತ ಸಿನಿಮಾ ಪ್ರೇಮಿಗಳು ಮಾತ್ರವೇ ಅಲ್ಲದೆ ವಿಶ್ವ ಸಿನಿಮಾ ಪ್ರಿಯರು ನಿರೀಕ್ಷೆಯಿಂದ ಕಾಯುತ್ತಿರುವ ಸಿನಿಮಾ ಎಂದರೆ ಅದು ರಾಜಮೌಳಿ ನಿರ್ದೇಶಿಸಿ, ಮಹೇಶ್ ಬಾಬು ನಟಿಸುತ್ತಿರುವ ಇನ್ನೂ ಹೆಸರಿಡದ ಹೊಸ ಸಿನಿಮಾ. ಈ ಸಿನಿಮಾದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಸಿನಿಮಾದ ಒಂದು ಸಣ್ಣ ಪೋಸ್ಟರ್ ಮಾತ್ರವನ್ನು ಈ ವರೆಗೆ ಅಧಿಕೃತವಾಗಿ ರಾಜಮೌಳಿ ಹೊರಬಿಟ್ಟಿದ್ದಾರೆ. ಬಿಡುಗಡೆ ಆಗಿರುವ ಫೋಟೊನಲ್ಲಿ ನಂದಿ ಮತ್ತು ಶಿವನ ವಿಭೂತಿಯ ಹೊರತಾಗಿ ಹೆಚ್ಚಿನ ಮಾಹಿತಿ ಇಲ್ಲ.



ಆದರೆ ಸಿನಿಮಾದ ಮೊದಲ ಲುಕ್ ಅನ್ನು ಬಿಡುಗಡೆ ಮಾಡಲು ರಾಜಮೌಳಿ ದೊಡ್ಡ ಯೋಜನೆಯನ್ನೇ ಹಾಕಿಕೊಂಡಿದ್ದಾರೆ. ಸಿನಿಮಾದ ಹೆಸರು ಮತ್ತು ಸಿನಿಮಾದ ಮೊದಲ ಲುಕ್ ಪೋಸ್ಟರ್ ಅನ್ನು ರಾಜಮೌಳಿ ಶೀಘ್ರವೇ ಬಿಡುಗಡೆ ಮಾಡಲಿದ್ದಾರೆ. ಅದೂ ಜಗದ್ವಿಖ್ಯಾತ ಸಿನಿಮಾ ನಿರ್ದೇಶಕರೊಬ್ಬರು ರಾಜಮೌಳಿ-ಮಹೇಶ್ ಅವರ ಸಿನಿಮಾದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಿದ್ದಾರೆ. 'ಟೈಟ್ಯಾನಿಕ್', 'ಅವತಾರ್' ಅಂಥಹಾ ಅತ್ಯದ್ಭುತ ಸಿನಿಮಾಗಳನ್ನು ನೀಡಿರುವ ಸೋಲೇ ಕಾಣದ ಹಾಲಿವುಡ್ ನಿರ್ದೇಶಕ ಜೇಮ್ಸ್ ಕ್ಯಾಮರನ್ ಅವರು ರಾಜಮೌಳಿ-ಮಹೇಶ್ ಬಾಬು ಅವರ ಹೊಸ ಸಿನಿಮಾದ ಮೊದಲ ಪೋಸ್ಟರ್ ಅನ್ನು ಬಿಡುಗಡೆ ಮಾಡಲಿದ್ದಾರೆ. ಇದೇ ವರ್ಷ ನವೆಂಬರ್ ತಿಂಗಳಲ್ಲಿ ಈ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

## 'ದಿ ಬೆಂಗಾಲ್ ಫೈಲ್ಸ್' ಚಿತ್ರದಲ್ಲಿ ತೈಮೂರ್ ಹೆಸರು

ವಿವೇಕ್ ಅಗ್ನಿಹೋತ್ರಿ ನಿರ್ದೇಶನದ 'ದಿ ಬೆಂಗಾಲ್ ಫೈಲ್ಸ್' ಚಿತ್ರದಲ್ಲಿ ತೈಮೂರ್ ಎಂಬ ಪಾತ್ರವಿದೆ. ಈ ಸಿನಿಮಾದ ಟ್ರೇಲರ್ ಬಿಡುಗಡೆ ಆದಾಗಿನಿಂದ ಈ ಹೆಸರಿನ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಿದೆ. ತೈಮೂರ್ ಎಂದು ಮಕ್ಕಳಿಗೆ ಹೆಸರು ಇಡುವವರನ್ನು ವಿವೇಕ್ ಅಗ್ನಿಹೋತ್ರಿ ಟೀಕಿಸಿದ್ದಾರೆ. ಅದಕ್ಕೆ ಕಾರಣವನ್ನೂ ಅವರು ನೀಡಿದ್ದಾರೆ. ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಅವರ ಎಲ್ಲಾ ಸಿನಿಮಾಗಳು ಬಿಡುಗಡೆ ಆಗುವಾಗ ಒಂದಲ್ಲಾ ಒಂದು ವಿವಾದ ಹುಟ್ಟುಹಾಕುತ್ತವೆ. ಈಗ ಅವರು ನಿರ್ದೇಶಿಸಿರುವ 'ದಿ ಬೆಂಗಾಲ್ ಫೈಲ್ಸ್' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಸೆಪ್ಟೆಂಬರ್ 5ರಂದು ಈ ಸಿನಿಮಾ ರಿಲೀಸ್ ಆಗಲಿದೆ. ಇದರಲ್ಲಿ ಕೂಡ ಒಂದು ವಿವಾದಾತ್ಮಕ ಕಥೆ ಇದೆ. ಈ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆ ಆಯಿತು. ಟ್ರೇಲರ್ ಆರಂಭದಲ್ಲೇ ತೈಮೂರ್ ಎಂಬ ಹೆಸರನ್ನು ಬಳಸಲಾಗಿದೆ. ಇದು ವಿವಾದಕ್ಕೆ ಕಾರಣ ಆಗಿದೆ. ಭಾರತದಲ್ಲಿ ಯಾರೂ ಕೂಡ ತಮ್ಮ ಮಕ್ಕಳಿಗೆ ತೈಮೂರ್ ಎಂದು ಹೆಸರು ಇಡಬಾರದು ಎಂದಿದ್ದಾರೆ ವಿವೇಕ್ ಅಗ್ನಿಹೋತ್ರಿ.



ಸೈಫ್ ಅಲಿ ಖಾನ್ ಮತ್ತು ಕರೀನಾ ಕಪೂರ್ ಖಾನ್ ಅವರು ತಮ್ಮ ಮೊದಲ ಮಗನಿಗೆ ತೈಮೂರ್ ಅಲಿ ಖಾನ್ ಎಂದು ಹೆಸರು ಇಟ್ಟಿದ್ದಾರೆ. ಈ ಹೆಸರು ಇಟ್ಟಾಗ ಅನೇಕರು ವಿರೋಧ ವ್ಯಕ್ತಪಡಿಸಿದ್ದರು. ಈಗ ಈ ದಂಪತಿಗೆ ತಿರುಗೇಟು ನೀಡುವ ಉದ್ದೇಶದಿಂದಲೇ ವಿವೇಕ್ ಅಗ್ನಿಹೋತ್ರಿ, ಅವರು 'ದಿ ಬೆಂಗಾಲ್ ಫೈಲ್ಸ್' ಸಿನಿಮಾದಲ್ಲಿ ತೈಮೂರ್ ಎಂಬ ಹೆಸರು ಬಳಸಿದ್ದಾರಾ ಎಂಬ ಪ್ರಶ್ನೆ ಮೂಡಿದೆ.

ಸಿನಿ ವಾಹಿನಿ

## ಅಜಿತ್ ಅಗರ್ಕರ್‌ಗೆ ಭರ್ಜರಿ ಗಿಫ್ಟ್

2025ರ ಏಷ್ಯಾಕಪ್‌ಗೆ ತಂಡವನ್ನು ಆಯ್ಕೆ ಮಾಡಿದ ಎರಡು ದಿನಗಳ ಬಳಿಕ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಅವರ ಒಪ್ಪಂದವನ್ನು ಜೂನ್ 2026ರವರೆಗೆ ವಿಸ್ತರಿಸಿದೆ. ಅವರ ನೇತೃತ್ವದಲ್ಲಿ ಭಾರತ ತಂಡ ಅನೇಕ ಗೆಲುವುಗಳನ್ನು ಸಾಧಿಸಿದೆ. ಆದರೆ, ಆಯ್ಕೆ ಸಮಿತಿಯ ಸದಸ್ಯ ಶರತ್ ಅವರನ್ನು ಹುದ್ದೆಯಿಂದ ತೆಗೆದುಹಾಕುವ ಸಾಧ್ಯತೆಯಿದೆ ಎಂದು ವರದಿಯಾಗಿದೆ.

2025 ರ ಏಷ್ಯಾಕಪ್‌ಗೆ ಟೀಂ ಇಂಡಿಯಾವನ್ನು ಆಯ್ಕೆ ಮಾಡಿದ ಎರಡು ದಿನಗಳ ಬಳಿಕ ಆಯ್ಕೆ ಮಂಡಳಿಯ ಮುಖ್ಯಸ್ಥ ಅಜಿತ್ ಅಗರ್ಕರ್‌ಗೆ ಬಿಸಿಸಿಐ ವಿಶೇಷ ಉಡುಗೊರೆಯನ್ನು ನೀಡಿದೆ. ವಾಸ್ತವವಾಗಿ ಅಜಿತ್ ಅಗರ್ಕರ್ ಅವರನ್ನು 2023 ರ ಜೂನ್‌ನಲ್ಲಿ ಭಾರತ ತಂಡದ ಮುಖ್ಯ ಆಯ್ಕೆದಾರರನ್ನಾಗಿ ನೇಮಿಸಲಾಯಿತು. ಅದರಂತೆ ಅವರ ಅಧಿಕಾರಾವಧಿ 2 ವರ್ಷಗಳಾಗಿತ್ತು. ಆದರೆ ಇದೀಗ ಅಜಿತ್ ಅವರ ಅಧಿಕಾರಾವಧಿಯನ್ನು ಜೂನ್ 2026 ರವರೆಗೆ ವಿಸ್ತರಿಸಲಾಗಿದೆ. ಅಜಿತ್ ಅವರ ಆಯ್ಕೆಯಡಿಯಲ್ಲಿ, ಭಾರತ ತಂಡವು 2024 ರ ಟಿ20 ವಿಶ್ವಕಪ್ ಮತ್ತು 2025 ರ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದುಕೊಂಡಿತು. ಹೀಗಾಗಿ ಅಜಿತ್ ಅವರ ಅಧಿಕಾರಾವಧಿಯನ್ನು ವಿಸ್ತರಿಸಲು ಬಿಸಿಸಿಐ ಮುಂದಾಗಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ. ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ, ಅಗರ್ಕರ್ ಅವರ ಒಪ್ಪಂದವನ್ನು ಇಂಡಿಯನ್ ಪ್ರೀಮಿಯರ್ ಲೀಗ್ 2025 ಕ್ಕೂ ಮೊದಲು ವಿಸ್ತರಿಸಲಾಗಿತ್ತು.



ಏಷ್ಯಾಕಪ್ ತಂಡವನ್ನು ಆಯ್ಕೆ ಮಾಡಿದ ಅಗರ್ಕರ್

ಈ ಬಗ್ಗೆ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಮಾಹಿತಿ ನೀಡಿರುವ ಬಿಸಿಸಿಐ ಅಧಿಕಾರಿಯೊಬ್ಬರು, 'ಅಜಿತ್ ಅವರ ಅಧಿಕಾರಾವಧಿಯಲ್ಲಿ, ಭಾರತ ತಂಡವು ಅನೇಕ ಪ್ರಶಸ್ತಿಗಳನ್ನು ಗೆದ್ದಿದಲ್ಲದೆ, ಟೆಸ್ಟ್ ಮತ್ತು ಟಿ20 ಅಂತರರಾಷ್ಟ್ರೀಯ ತಂಡಗಳಲ್ಲಿ ಬದಲಾವಣೆಗಳನ್ನು ಕಂಡಿತು. ಹೀಗಾಗಿ ಬಿಸಿಸಿಐ, ಅಜಿತ್ ಅವರ ಒಪ್ಪಂದವನ್ನು ಜೂನ್ 2026 ರವರೆಗೆ ವಿಸ್ತರಿಸಿದೆ. ಕೆಲವು ತಿಂಗಳ ಹಿಂದೆಯೇ ಈ ಪ್ರಸ್ತಾಪವನ್ನು ಅಜಿತ್ ಮುಂದಿಡಲಾಗಿತ್ತು ಎಂದು ಹೇಳಿದ್ದಾರೆ. ಒಂದು ವರ್ಷ ಅಧಿಕಾರ ಹೆಚ್ಚುವರಿಯಾಗಿ ಪಡೆದಿರುವ ಅಜಿತ್ ಅಗರ್ಕರ್ ಈಗ ಮತ್ತೊಂದು ದೊಡ್ಡ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. 2025 ರ ಏಷ್ಯಾಕಪ್ ನಂತರ, ಮುಂದಿನ ವರ್ಷ ಅಂದರೆ 2026 ರಲ್ಲಿ ಟಿ20 ವಿಶ್ವಕಪ್ ಭಾರತ ಮತ್ತು ಶ್ರೀಲಂಕಾದಲ್ಲಿ ನಡೆಯಲಿದೆ. ಪಂದ್ಯಾವಳಿಯ ವೇಳಾಪಟ್ಟಿ ಇನ್ನೂ ಬಂದಿಲ್ಲ ಆದರೆ ಆ ಐಸಿಸಿ ಕಾರ್ಯಕ್ರಮವನ್ನು ಫೆಬ್ರವರಿ-ಮಾರ್ಚ್‌ನಲ್ಲಿ ನಡೆಸಬಹುದು ಎಂದು ಹೇಳಲಾಗುತ್ತಿದೆ. ಅಧಿಕಾರಾವಧಿ ವಿಸ್ತರಣೆಯ ನಂತರ, ಅಜಿತ್ ಅಗರ್ಕರ್ ಅವರು ಆ ಪಂದ್ಯಾವಳಿಗೆ ಭಾರತೀಯ ತಂಡವನ್ನು ಆಯ್ಕೆ ಮಾಡುವುದನ್ನು ಸಹ ಕಾಣಬಹುದು.

ಟೀಂ ಇಂಡಿಯಾದ ಪ್ರಸ್ತುತ ಆಯ್ಕೆ ಸಮಿತಿಯಲ್ಲಿ ಅಗರ್ಕರ್, ಎಸ್.ಎಸ್. ದಾಸ್, ಸುಬ್ರೋಟೊ ಬ್ಯಾನರ್ಜಿ, ಅಜಯ್ ರಾತ್ರ ಮತ್ತು ಎಸ್. ಶರತ್ ಇದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಾರ್ಷಿಕ ಸಾಮಾನ್ಯ ಸಭೆಯ ನಂತರ ಆಯ್ಕೆ ಸಮಿತಿಯಲ್ಲಿ ಕೆಲವು ಬದಲಾವಣೆಗಳಾಗುತ್ತವೆ ಎಂದು ವರದಿಯಾಗಿದೆ.

## ಏಷ್ಯಾ ಕಪ್‌ಗೆ ಬಲಿಷ್ಠ ಪ್ಲೇಯಿಂಗ್ 11 ಪ್ರಕಟಿಸಿದ ಅಜಿಂಕ್ಯ ರಹಾನೆ

2025ರ ಏಷ್ಯಾಕಪ್‌ಗೆ ಬಿಸಿಸಿಐ ತನ್ನ ತಂಡವನ್ನು ಪ್ರಕಟಿಸಿದ ಬೆನ್ನಲ್ಲೇ, ಮಾಜಿ ನಾಯಕ ಅಜಿಂಕ್ಯ ರಹಾನೆ ತಮ್ಮ ಆಡುವ ಹನ್ನೊಂದರ ತಂಡವನ್ನು ಘೋಷಿಸಿದ್ದಾರೆ. ಗಿಲ್ ಮತ್ತು ಅಭಿಷೇಕ್ ಶರ್ಮಾ ಆರಂಭಿಕರಾಗಿದ್ದು, ಸೂರ್ಯಕುಮಾರ್ ಯಾದವ್ ಮತ್ತು ಹಾರ್ದಿಕ್ ಪಾಂಡ್ಯ ಕ್ರಮವಾಗಿ 4 ಮತ್ತು 5ನೇ ಸ್ಥಾನದಲ್ಲಿದ್ದಾರೆ. ಜಿತೇಶ್ ಶರ್ಮಾ ವಿಕೆಟ್ ಕೀಪರ್ ಆಗಿ ಆಯ್ಕೆಯಾಗಿದ್ದಾರೆ. ಬೌಲಿಂಗ್‌ನಲ್ಲಿ ಬುಮ್ರಾ, ಅರ್ಶ್‌ದೀಪ್ ಮತ್ತು ಕುಲ್ದೀಪ್ ಪ್ರಮುಖ ಆಟಗಾರರು. ರಹಾನೆ ಸಂಜು ಸ್ಯಾಮ್ಸನ್ ಅವರ ಅನುಪಸ್ಥಿತಿಯನ್ನು ವಿಷಾದಿಸಿದ್ದಾರೆ.



2025 ರ ಏಷ್ಯಾಕಪ್‌ಗೆ ಆತಿಥೇಯ ಬಿಸಿಸಿಐ ತನ್ನ ತಂಡವನ್ನು ಪ್ರಕಟಿಸಿದೆ. ಈ 20 ಜನರ ತಂಡದಲ್ಲಿ ಬಲಿಷ್ಠ ಆಟಗಾರರ ಪಡೆಯೇ ಸೇರಿದೆ. ಹೀಗಾಗಿ ಯಾವ 11 ಆಟಗಾರರು ಕಣಕ್ಕಿಳಿಯುತ್ತಾರೆ ಎಂಬುದು ಕುತೂಹಲ ಮೂಡಿಸಿದೆ. ಈ ನಡುವೆ ಭಾರತ ತಂಡದಿಂದ ಹೊರಗುಳಿದಿರುವ ಮಾಜಿ ನಾಯಕ ಅಜಿಂಕ್ಯ ರಹಾನೆ ಈ ಏಷ್ಯನ್ ಕಪ್‌ಗೆ ತನ್ನ ಆಡುವ ಹನ್ನೊಂದರ ಬಳಗವನ್ನು ಪ್ರಕಟಿಸಿದ್ದಾರೆ. ರಹಾನೆ ತಮ್ಮ ಪ್ಲೇಯಿಂಗ್ 11 ನಲ್ಲಿ ಶುಭ್‌ಮನ್ ಗಿಲ್ ಮತ್ತು ಅಭಿಷೇಕ್ ಶರ್ಮಾ ಅವರನ್ನು ಆರಂಭಿಕ ಆಟಗಾರರನ್ನಾಗಿ ಆಯ್ಕೆ ಮಾಡಿದ್ದಾರೆ. 3 ನೇ ಕ್ರಮಾಂಕದಲ್ಲಿ ತಿಲಕ್ ವರ್ಮಾ ಅವರನ್ನು ಕಣಕ್ಕಿಳಿಸಿದ್ದಾರೆ.

ಹಾಗೆಯೇ ನಾಯಕ ಸೂರ್ಯಕುಮಾರ್ ಯಾದವ್ ಅವರಿಗೆ 4ನೇ ಕ್ರಮಾಂಕದಲ್ಲಿ ಮತ್ತು ಮಾಜಿ ಉಪನಾಯಕರು ಮತ್ತು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಿಗೆ 5 ನೇ ಕ್ರಮಾಂಕದಲ್ಲಿ ಸ್ಥಾನ ನೀಡಿದ್ದಾರೆ. 6 ನೇ ಕ್ರಮಾಂಕದಲ್ಲಿ ರಹಾನೆ, ಕಮ್‌ಬ್ಯಾಕ್ ಮ್ಯಾನ್ ಜಿತೇಶ್ ಶರ್ಮಾ ಅವರನ್ನು ವಿಕೆಟ್ ಕೀಪಿಂಗ್ ಆಯ್ಕೆಯಾಗಿ ಆಯ್ಕೆ ಮಾಡಿದ್ದಾರೆ. ಜಿತೇಶ್ 2025 ರ ಐಪಿಎಲ್‌ನಲ್ಲಿ ಫಿನಿಷರ್ ಆಗಿ ಉತ್ತಮವಾಗಿ ಆಡಿದ್ದರು. ಆದ್ದರಿಂದ ಅವರು ಸಂಜು ಬದಲು ಜಿತೇಶ್‌ಗೆ ಮಣೆಹಾಕಿದ್ದಾರೆ. 7 ನೇ ಕ್ರಮಾಂಕದಲ್ಲಿ ಮತ್ತೊಬ್ಬ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರಿಗೆ ಅವಕಾಶ ಸಿಕ್ಕಿದೆ.

ಸಂಜುರನ್ನು ತಂಡದಿಂದ ಹೊರಗಿಟ್ಟಿದ್ದರೂ ಅವರನ್ನು ಹೊಗಳಿರುವ ರಹಾನೆ, 'ಈಗ ಗಿಲ್ ತಂಡಕ್ಕೆ ಮರಳಿದ್ದಾರೆ. ಅವರು ಅಭಿಷೇಕ್ ಶರ್ಮಾ ಅವರೊಂದಿಗೆ ಆರಂಭಿಕರಾಗಿ ಆಡುತ್ತಾರೆ ಎಂದು ನಾನು ಭಾವಿಸುತ್ತೇನೆ. ವೈಯಕ್ತಿಕವಾಗಿ, ಸಂಜು ಸ್ಯಾಮ್ಸನ್ ಅವರನ್ನು ತಂಡದಲ್ಲಿ ನೋಡಲು ನಾನು ಬಯಸುತ್ತೇನೆ ಏಕೆಂದರೆ ಅವರು ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ, ಬಹುಶಃ ಸಂಜು ಸ್ಯಾಮ್ಸನ್ ಹೊರಗುಳಿಯಬೇಕಾಗಬಹುದು ಎಂದಿದ್ದಾರೆ. ಇನ್ನು ಬೌಲಿಂಗ್‌ನಲ್ಲಿ ರಹಾನೆ, ಜಸ್ಪ್ರೀತ್ ಬುಮ್ರಾ ಮತ್ತು ಅರ್ಶ್‌ದೀಪ್ ಸಿಂಗ್ ಅವರನ್ನು ತಮ್ಮ ನೆಚ್ಚಿನ ವೇಗದ ಬೌಲರ್‌ಗಳಾಗಿ ಆಯ್ಕೆ ಮಾಡಿದ್ದಾರೆ. 'ಈ ಏಷ್ಯಾಕಪ್‌ನಲ್ಲಿ ಜಸ್ಪ್ರೀತ್ ಬುಮ್ರಾ ಮತ್ತು ಅರ್ಶ್‌ದೀಪ್ ಸಿಂಗ್ ಒಟ್ಟಿಗೆ ಬೌಲಿಂಗ್ ಮಾಡುವುದನ್ನು ನಾನು ನೋಡಲು ಬಯಸುತ್ತೇನೆ ಎಂದು ರಹಾನೆ ಹೇಳಿದ್ದಾರೆ.

ಸ್ಪಿನ್ನರ್‌ಗಳ ಖೋಟಾದಲ್ಲಿ ಕುಲ್ದೀಪ್ ಯಾದವ್‌ಗೆ ಅವಕಾಶ ನೀಡಿರುವ ರಹಾನೆ, ವರುಣ್ ಚಕ್ರವರ್ತಿ ಅಥವಾ ಹರ್ಷಿತ್ ರಾಣಾ ಈ ಇಬ್ಬರಲ್ಲಿ ಒಬ್ಬರಿಗೆ ಅವಕಾಶ ಸಿಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಮುಂಬೈ ತಂಡದ ನಾಯಕತ್ವ ತ್ಯಜಿಸಿದ ರಹಾನೆ



ಅಜಿಂಕ್ಯ ರಹಾನೆ ಟೀಮ್ ಇಂಡಿಯಾ ಪರ ಕೊನೆಯ ಪಂದ್ಯವಾಡಿದ್ದು 2023 ರಲ್ಲಿ. ಇದಾದ ಬಳಿಕ ಅವರನ್ನು ಟೆಸ್ಟ್ ತಂಡದ ಆಯ್ಕೆಗೆ ಪರಿಗಣಿಸಲಾಗಿಲ್ಲ. ಇದಾಗ್ಯೂ ಕಳೆದ ಎರಡು ವರ್ಷಗಳಿಂದ ದೇಶೀಯ ಟೂರ್ನಿಗಳಲ್ಲಿ ರಹಾನೆ ಮುಂಬೈ ತಂಡದ ನಾಯಕನಾಗಿ ಕಾಣಿಸಿಕೊಂಡಿದ್ದರು. ಇದೀಗ ರಣಜಿ ಟೂರ್ನಿಗೂ ಮುನ್ನ ಮುಂಬೈ ತಂಡದ ನಾಯಕತ್ವದಿಂದ ಅಜಿಂಕ್ಯ ರಹಾನೆ ಕೆಳಗಿಳಿದಿದ್ದಾರೆ. ಟೀಮ್ ಇಂಡಿಯಾದ ಅನುಭವಿ ಬ್ಯಾಟ್ಸ್‌ಮನ್ ಅಜಿಂಕ್ಯ ರಹಾನೆ ಮುಂಬರುವ ದೇಶೀಯ ಟೂರ್ನಿಗೂ ಮುಂಚಿತವಾಗಿ ಮುಂಬೈ ತಂಡದ ನಾಯಕತ್ವವನ್ನು ತೊರೆದಿದ್ದಾರೆ.

ಹೊಸ ನಾಯಕನನ್ನು ರೂಪಿಸುವ ಸಲುವಾಗಿ ರಹಾನೆ ಈ ನಿರ್ಧಾರ ತೆಗೆದುಕೊಂಡಿದ್ದಾರೆ. 37 ವರ್ಷದ ಅಜಿಂಕ್ಯ ರಹಾನೆ ಕಳೆದ ಕೆಲ ವರ್ಷಗಳಿಂದ ಮುಂಬೈ ತಂಡವನ್ನು ಮುನ್ನಡೆಸುತ್ತಿದ್ದಾರೆ. ಆದರೀಗ ನಿವೃತ್ತಿ ಅಂಚಿನಲ್ಲಿರುವ ಕಾರಣ ಹೊಸ ಆಟಗಾರರಿಗೆ ಜವಾಬ್ದಾರಿ ಒಪ್ಪಿಸಬೇಕಿದೆ. ಹೀಗಾಗಿ ಮುಂಬರುವ ರಣಜಿ ಸೀಸನ್‌ನಲ್ಲಿ ಮುಂಬೈ ತಂಡವನ್ನು ಮುನ್ನಡೆಸುವುದಿಲ್ಲ ಎಂದು ರಹಾನೆ ತಿಳಿಸಿದ್ದಾರೆ. ಮುಂಬೈ ತಂಡವನ್ನು ಮುನ್ನಡೆಸುವುದು ಮತ್ತು ಚಾಂಪಿಯನ್‌ಶಿಪ್‌ಗಳನ್ನು ಗೆಲ್ಲುವುದು ನನಗೆ ಸಿಕ್ಕ ಅಪಾರ ಗೌರವವಾಗಿದೆ. ಮುಂಬರುವ ದೇಶೀಯ ಸೀಸನ್ ನೋಡುವಾಗ, ಹೊಸ ನಾಯಕನನ್ನು ಆಯ್ಕೆ ಮಾಡಲು ಇದು ಸರಿಯಾದ ಸಮಯ ಎಂದು ನಾನು ನಂಬುತ್ತೇನೆ. ಆದ್ದರಿಂದ ನಾನು ನಾಯಕತ್ವದಿಂದ ಕೆಳಗಿಳಿಯಲು ನಿರ್ಧರಿಸಿದ್ದೇನೆ.

ಒಬ್ಬ ಆಟಗಾರನಾಗಿ ನನ್ನ ಅತ್ಯುತ್ತಮ ಪ್ರದರ್ಶನ ನೀಡಲು ನಾನು ಸಂಪೂರ್ಣವಾಗಿ ಬದ್ಧನಾಗಿದ್ದೇನೆ. ಅಲ್ಲದೆ ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ನೊಂದಿಗೆ ನನ್ನ ಪ್ರಯಾಣವನ್ನು ಮುಂದುವರಿಸುತ್ತೇನೆ ಎಂದು ಅಜಿಂಕ್ಯ ರಹಾನೆ ಸೋಷಿಯಲ್ ಮೀಡಿಯಾ ಪೋಸ್ಟ್ ಮೂಲಕ ತಿಳಿಸಿದ್ದಾರೆ. ಅಂದರೆ ನಾಯಕತ್ವ ತ್ಯಜಿಸಿದರೂ ದೇಶೀಯ ಅಂಗಳದಲ್ಲಿ ಮುಂಬೈ ಪರ ಆಡುವುದನ್ನು ಮುಂದುವರೆಸುವುದಾಗಿ ಅಜಿಂಕ್ಯ ರಹಾನೆ ತಿಳಿಸಿದ್ದಾರೆ. ಹೀಗಾಗಿ ಮುಂಬರುವ ರಣಜಿ ಸೀಸನ್‌ನಲ್ಲಿ ಮುಂಬೈ ತಂಡದಲ್ಲಿ ಅನುಭವಿ ಬ್ಯಾಟರ್ ಆಗಿ ರಹಾನೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ.

## ಭಾರತ-ಪಾಕಿಸ್ತಾನ ಪಂದ್ಯಕ್ಕೆ ಗ್ರೀನ್ ಸಿಗ್ನಲ್ ನೀಡಿದ ಕೇಂದ್ರ ಸರ್ಕಾರ

ಭಾರತ ಮತ್ತು ಪಾಕಿಸ್ತಾನ ನಡುವಿನ ಏಷ್ಯಾಕಪ್ ಪಂದ್ಯಕ್ಕೆ ಭಾರತ ಸರ್ಕಾರ ಹಸಿರು ನಿಶಾನೆ ತೋರಿಸಿದೆ. ಸೆಪ್ಟೆಂಬರ್ 14 ರಂದು ನಡೆಯಲಿರುವ ಈ ಹೈವೋಲ್ಟೇಜ್ ಪಂದ್ಯಕ್ಕೆ ಅನುಮತಿ ನೀಡಿದ್ದು, ದ್ವಿಪಕ್ಷೀಯ ಸರಣಿಗಳನ್ನು ನಿಷೇಧಿಸಿದ್ದರೂ ಬಹುರಾಷ್ಟ್ರೀಯ ಟೂರ್ನಿಗಳಲ್ಲಿ ಎರಡೂ ತಂಡಗಳು ಭಾಗವಹಿಸುವುದಕ್ಕೆ ಅವಕಾಶ ನೀಡಲಾಗಿದೆ ಎಂದು ಕ್ರೀಡಾ ಸಚಿವಾಲಯ ತಿಳಿಸಿದೆ. ಈ ನಿರ್ಧಾರ



ಅಮಾಯಕ ಪ್ರವಾಸಿಗರ ಹತ್ಯೆ

ಇತರ ಕ್ರೀಡೆಗಳಿಗೂ ಅನ್ವಯವಾಗುತ್ತದೆ. 2025 ರ ಟಿ20 ಏಷ್ಯಾಕಪ್ ಬರುವ ಸೆಪ್ಟೆಂಬರ್ 9ರಿಂದ ಯುಎಇಯಲ್ಲಿ ಆರಂಭವಾಗಲಿದೆ. ವೇಳಾಪಟ್ಟಿಯ ಪ್ರಕಾರ ಈ ಟೂರ್ನಿಯ ಹೈವೋಲ್ಟೇಜ್ ಕದನ ಸೆಪ್ಟೆಂಬರ್ 14 ರಂದು ಭಾರತ ಹಾಗೂ ಪಾಕಿಸ್ತಾನದ ನಡುವೆ ನಡೆಯಲಿದೆ. ಆದರೆ ಉಭಯ ದೇಶಗಳ ನಡುವೆ ಸಂಬಂಧ ಹದಗೆಟ್ಟಿರುವ ಕಾರಣ ಏಷ್ಯಾಕಪ್‌ನಲ್ಲಿ ಭಾರತ ಹಾಗೂ ಪಾಕಿಸ್ತಾನ ನಡುವಿನ ಪಂದ್ಯ ನಡೆಯುವುದು ಅನುಮಾನ ಎಂದು ಹೇಳಲಾಗುತ್ತಿತ್ತು. ಆದರೀಗ ಹೊರಬಿದ್ದಿರುವ ತಾಜಾ ಮಾಹಿತಿಯ ಪ್ರಕಾರ, ಭಾರತ ಮತ್ತು ಪಾಕಿಸ್ತಾನ ನಡುವಿನ ಏಷ್ಯಾಕಪ್ ಪಂದ್ಯಕ್ಕೆ ಭಾರತ ಸರ್ಕಾರ ಹಸಿರು ನಿಶಾನೆ ತೋರಿಸಿದೆ ಎಂದು ವರದಿಯಾಗಿದೆ. ವಾಸ್ತವವಾಗಿ ಪಾಕಿಸ್ತಾನಿ ಭಯೋತ್ಪಾದಕರು ಪೆಹಲ್ಗಾಮ್ ಮೇಲೆ ದಾಳಿ ಮಾಡಿ ಅಮಾಯಕ ಪ್ರವಾಸಿಗರ ಹತ್ಯೆ ಮಾಡಿದ್ದರು.

ಇದರ ನಂತರ, ಭಾರತ ಸರ್ಕಾರ ಆಪರೇಷನ್ ಸಿಂಧೂರ ನಡೆಸಿ ಪಾಕಿಸ್ತಾನದ ವಿರುದ್ಧ ಸಮರ ಸಾರಿತ್ತು. ಭಾರತದ ದಾಳಿಗೆ ನಲುಗಿದ್ದ ಪಾಕಿಸ್ತಾನ ಅಂತಿಮವಾಗಿ ಕದನ ವಿರಾಮಕ್ಕೆ ಮುಂದಾಯಿತು. ಇದಾದ ಬಳಿಕವೂ ಭಾರತ ಸರ್ಕಾರ ಪಾಕಿಸ್ತಾನದ ಜೊತೆ ಯಾವುದೇ ಮಾತುಕತೆಗೆ ಮುಂದಾಗಿರಲಿಲ್ಲ. ಹೀಗಾಗಿ ಉಭಯ ದೇಶಗಳ ಕ್ರಿಕೆಟ್ ತಂಡಗಳು ಮುಖಾಮುಖಿಯಾಗುವುದು ಅನುಮಾನ ಎಂದು ಹೇಳಲಾಗುತ್ತಿತ್ತು. ಆದರೀಗ ಕ್ರೀಡಾ ಸಚಿವಾಲಯ ಬದ್ಧವೈರಿಗಳ ಕಾಳಗಕ್ಕೆ ಹಸಿರು ನಿಶಾನೆ ತೋರಿಸಿದೆ. ಭಾರತ-ಪಾಕಿಸ್ತಾನ ಪಂದ್ಯಕ್ಕೆ ಗ್ರೀನ್ ಸಿಗ್ನಲ್ ಪಿಟಿಐ ವರದಿಯ ಪ್ರಕಾರ, ಭಾರತ-ಪಾಕಿಸ್ತಾನ ಈ ಹಿಂದೆಯಂತೆ ಇನ್ನು ಮುಂದೆಯೂ ಯಾವುದೇ ದ್ವಿಪಕ್ಷೀಯ ಸರಣಿಯಲ್ಲಿ ಆಡುವುದಿಲ್ಲ ಎಂದು ಕ್ರೀಡಾ ಸಚಿವಾಲಯ ಸ್ಪಷ್ಟವಾಗಿ ಹೇಳಿದೆ. ಆದರೆ ಬಹುರಾಷ್ಟ್ರೀಯ ಪಂದ್ಯಾವಳಿಯಲ್ಲಿ ಈ ನಿಲುವನ್ನು ಅನುಷ್ಠಾನಕ್ಕೆ ತರಲಾಗುವುದಿಲ್ಲ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966